सत्यमेव जयते

ಭಾರತ ಸರಕಾರ
ಹಣಕಾಸು ಸಚಿವಾಲಯ
ಕಂದಾಯ ಇಲಾಖೆ

# ಜಿ.ಎಸ್.ಟಿ

# ಎಂ.ಎಸ್.ಎಂ.ಈ ಕ್ಷೇತ್ರ


150
ಮಹಾತ್ಮ ರ
150 ವರ್ಷಗಳ
ಸಂಭ್ರಮ
ದೇಶ
ತೆರಿಗೆ
ಮಾರುಕಟ್ಟೆ
GST

## ವಿಷಯ ಸೂಚಿ

### ಭಾಗ – 1 : ಜಿ.ಎಸ್.ಟಿ – ಪಕ್ಷಿನೋಟ


1. ಪರಿಚಯ........................................................................................1

2. ಜಿ.ಎಸ್.ಟಿ ನೋಂದಣಿಕರಣ..................................................................3

3. ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ
(Composition Scheme).................................................5

4. ಹೂಡುವಳಿ ತೆರಿಗೆ ಜಮೆ(Input Tax Credit)...........................................7

5. ಜಿ.ಎಸ್.ಟಿ ಅಡಿಯಲ್ಲಿ ತೆರಿಗೆ ಇನ್‌ವಾಯ್ಸ್..................................................8

6. ಎಮ್.ಎಸ್.ಎಮ್.ಈ ಕ್ಷೇತ್ರಕ್ಕೆ ಅನ್ವಯಿಸುವಂತೆ
ಚಾರ್ಟ್‌ಡ್‌ ಅಕೌಂಟೆಂಟೆಂಟ್ ಗಳ ಮೂಲಕ
ಲೆಕ್ಕ ಪರಿಶೀಲನೆಯ ಅನಿವಾರ್ಯತೆಯಿಂದ ವಿನಾಯಿತಿ.................................9

7. ಜಿ.ಎಸ್.ಟಿ ವ್ಯಾಪ್ತಿಯಲ್ಲಿ ವಿವರಣೆಗಳನ್ನು ಸಲ್ಲಿಸುವ ಪದ್ಧತಿ............................10

8. ಜಿ.ಎಸ್.ಟಿ ಪದ್ಧತಿ ಅಡಿಯಲ್ಲಿ ಎಮ್.ಎಸ್.ಎಮ್.ಈ ಗಳಿಗೆ
ಅನ್ವಯಿಸುವಂತಹ ಕ್ರಮಗಳು:...................................................................12

## ಭಾಗ– II

## ಜಿ.ಎಸ್.ಟಿ ಪರಿಷತ್ತಿನ ಪ್ರಮುಖ ನಿರ್ಣಯಗಳು


1. ಪರಿಚಯ....................................................................................................17

2. ಸಂಯೋಜಿತ ಯೋಜನೆ..................................................................................20

3. ವಿವರಣೆಗಳನ್ನು ಸಲ್ಲಿಸುವ ಕ್ರಮ........................................................................22

4. ಹೂಡುವಳಿ ತೆರಿಗೆ ಜಮೆಯ ವ್ಯಾಪ್ತಿ...................................................................24

5. ರಫ್ತು.........................................................................................................25

6. ತೆರಿಗೆ ಪಾವತಿಕರಣ.......................................................................................26

7. ಇತರೆ ಬದಲಾವಣೆಗಳು..................................................................................27

8. ಕರ ಕುಶಲ ಕಾಮಗಾರಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ.........................................28

9. ವಸ್ತ್ರಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ದರಗಳು..............................................30

10. ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆ ದರದಲ್ಲಿ ಕಡಿತ...........................................32

11. ಸೇವೆಗಳಿಗೆ ಸಂಬಂಧಿಸಿದಂತೆ ತೆರಿಗೆ ದರದಲ್ಲಿ ಕಡಿತ............................................35


## ಭಾಗ –III


ಎಂ.ಎಸ್.ಎಂ.ಈ ಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು ಮತ್ತು ಸಮಾಧಾನ ......................................................................39

# ಭಾಗ – I

# ಜಿ.ಎಸ್.ಟಿ – ಪಕ್ಷಿನೋಟ

# ಅಧ್ಯಾಯ 1

## ಪರಿಚಯ

ಎಂ.ಎಸ್.ಎಂ.ಈ.ಡಿ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ಯಮಗಳ ಅಭಿವೃದ್ಧಿ) ಕಾಯಿದೆ, 2006 ರಲ್ಲಿ ಒಳಗೊಂಡಂತೆ ವಾರ್ಷಿಕ ವ್ಯಾಪಾರ ವಹಿವಾಟಿನ ಆಧಾರದ ಮೇಲೆ ಉದ್ಯಮಗಳನ್ನು ವಿಭಿನ್ನ ಶ್ರೇಣಿಗಳಲ್ಲಿ ಗುರುತಿಸಲಾಗಿದೆ. ಕೇಂದ್ರ ಸಚಿವಾಲಯದ ಅನುಮೋದನೆಯಂತೆ, ಉದ್ಯಮೆಯ ಒಟ್ಟು ವಾರ್ಷಿಕ ವಹಿವಾಟು ₹.5 ಕೋಟಿಯನ್ನು ಮೀರದಿದ್ದರೆ ಅತಿ ಸಣ್ಣ ಉದ್ಯಮವೆಂದು, ಒಟ್ಟು ವಾರ್ಷಿಕ ವಹಿವಾಟು ₹.5 ಕೋಟಿಗಿಂತ ಮಿಗಿಲಾಗಿದ್ದು, ₹.75 ಕೋಟಿಯನ್ನು ಮೀರದಿದ್ದರೆ ಸಣ್ಣ ಉದ್ಯಮವೆಂದು ಮತ್ತು ಒಟ್ಟು ವಾರ್ಷಿಕ ವಹಿವಾಟು ₹.75 ಕೋಟಿಗಿಂತ ಮಿಗಿಲಾಗಿದ್ದು, ₹.250 ಕೋಟಿಯನ್ನು ಮೀರದಿದ್ದರೆ ಮಧ್ಯಮ ವರ್ಗದ ಉದ್ಯಮವೆಂದು ಪರಿಗಣಿಸಲಾಗುವುದು.

ಎಂ.ಎಸ್.ಎಂ.ಈ ಕ್ಷೇತ್ರವು ರಾಷ್ಟ್ರೀಯ ಆರ್ಥಿಕತೆಗೆ ಗಮನಾರ್ಹವಾದ ಕೊಡುಗೆಯನ್ನು ನೀಡಿದೆ, ಅತಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿರುವುದಲ್ಲದೆ, ಉದ್ಯಮಿಗಳ ಬೆಳವಣಿಗೆಯ ಹಾಗೂ ಕುಶಲತೆಯ ವಿಕಾಸ ತಾಣವಾಗಿಯೂ ಪರಿಣಮಿಸಿದೆ. 30 ದಶಲಕ್ಷಕ್ಕೂ ಹೆಚ್ಚು ಎಂ.ಎಸ್.ಎಂ.ಈ ಗಳು ಕಾರ್ಯ ನಿರ್ವಹಿಸುತ್ತಿದ್ದು , ಸುಮಾರು 100 ದಶಲಕ್ಷ ಉದ್ಯೋಗಾವಕಾಶವನ್ನು ಕಲ್ಪಿಸಿವೆ.

ಎಂ.ಎಸ್.ಎಂ.ಈ ಗಳಿಗೆ ಚೆನ್ನಾಗಿ ಬೆಳೆಯುವ ಶಕ್ತಿ ಇದ್ದರೂ ಸಹ, ಭಾರತದಲ್ಲಿ ಅನೇಕ ಸಮಸ್ಯೆಗಳನ್ನು ಎದು–ರಿಸುತ್ತಿವೆ, ಕಾರ್ಯನಿರ್ವಹಣೆಯಲ್ಲಿ ಅಡಚಣೆ, ತಾಂತ್ರಿಕವಾಗಿ ಹಿಂದುಳಿದಿರುವುದು, ಪೂರೈಕೆ ಸರಣಿಯಲ್ಲಿ ಲೋಪದೋಶ, ದೇಶದೊಳಗೆ ಮತ್ತು ವಿಶ್ವಮಟ್ಟದಲ್ಲಿ ಹೆಚ್ಚುತ್ತಿರುವ ಸ್ಪರ್ಧೆ, ಹಣಕಾಸು ಕೊರತೆ, ಉತ್ಪಾದನಾ ಕ್ರಮಗಳಲ್ಲಿನ ಬದಲಾವಣೆಗಳು, ಮಾರುಕಟ್ಟೆಯಲ್ಲಿನ ಏರುಪೇರು ಇತ್ಯಾದಿ ಅನೇಕ ತೊಂದರೆಗಳು ಎದುರಾಗಬಹುದು.

ಇಂತಹ ವಾತಾವರಣದಲ್ಲಿ ಬೃಹತ್ ಮತ್ತು ವಿಶ್ವಮಟ್ಟದ ಉದ್ಯಮಗಳೊಂದಿಗೆ ಸ್ಪರ್ಧಿಸಿ ಊರ್ಜಿತವಾಗಲು, ಸತತವಾಗಿ ಬೆಳೆದು ಅಭಿವೃದ್ಧಿ ಹೊಂದಲು, ಎಂ.ಎಸ್.ಎಂ.ಈ ಉದ್ಯಮಗಳಿಗೆ ಸಹಾಯ ಹಾಗೂ ಪ್ರೇರಣೆಯ ಅವಶ್ಯಕತೆ ಇದೆ. ಜಿ.ಎಸ್.ಟಿ ಗೆ ಸಂಬಂಧಿಸಿದಂತೆ ದೊಡ್ಡ ಉದ್ಯಮಗಳಿಗೆ ಹೋಲಿಸಿದರೆ, ಎಂ.ಎಸ್.ಎಂ.ಈ ಉದ್ಯಮಗಳನ್ನು ನಿರ್ವಹಿಸಲು ಹೆಚ್ಚು ಶಕ್ತಿ ಮತ್ತು ಖರ್ಚು ತಗುಲುತ್ತದೆ, ತೆರಿಗೆ ಪಾವತಿಸಲು ಲಭ್ಯವಾಗುವ ಸಮಯ ಕಡಿಮೆ. ಇವೆಲ್ಲವೂ ಉದ್ಮಮಗಳ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ, ದೊಡ್ಡ ಉದ್ಯಮಗಳೊಂದಿಗೆ ಪೈಪೋಟಿ ನೆಡೆಸುವುದು ಬಹಳ ಕಷ್ಟ ಸಾಧ್ಯ. ಆದ್ದರಿಂದ, ಎಂ.ಎಸ್.ಎಂ.ಈ ಉದ್ಯಮಗಳನ್ನು ಪ್ರೇರೇಪಿಸಿ ಅವುಗಳ ಬೆಳವಣಿಗೆಗೆ ಪೂರಕವಾಗಿ ಕೆಲವು ವಿನಾಯಿತಿಗಳನ್ನು ನೀಡುವುದು ಅತಾವಶ್ಯಕ.

ಅದರಂತೆ, ಜಿ.ಎಸ್.ಟಿ (ಸರಕು ಮತ್ತು ಸೇವಾ ತೆರಿಗೆ) ಜಾರಿಗೆ ಬಂದಿರುವುದರಿಂದ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ಯಮಗಳು ಸುಲಭವಾಗಿ ತೆರಿಗೆ ನಿರ್ವಹಿಸಲು, ತೆರಿಗೆ ಪರಿಮಿತಿಯಲ್ಲಿ ವಿನಾಯಿತಿ, ಸಂಯೋಜಿತ ಯೋಜನೆಯ ಅಡಿಯಲ್ಲಿ ತೆರಿಗೆ ಪಾವತೀಕರಣ, ತ್ರೈಮಾಸಿಕ ರೂಪದಲ್ಲಿ ಜಿ.ಎಸ್.ಟಿ ವಿವರಣೆಯನ್ನು ಸಲ್ಲಿಸುವ ಸೌಲಭ್ಯ, ಇತ್ಯಾದಿ ಹಲವಾರು ಅನುಕೂಲಕರ ಕ್ರಮಗಳನ್ನು ಅಳವಡಿಸಲಾಗಿದೆ. ಹಾಗೆಯೇ, ಎಂ.ಎಸ್.ಎಂ.ಈ ಉದ್ಯಮಗಳ ಸಕ್ಷಮತೆ ಯನ್ನು ಕಾಪಾಡಿಕೊಳ್ಳುವಂತೆಯೂ ಕ್ರಮ ಕೈಗೊಳ್ಳಲಾಗಿದೆ, ಆದಾಗ್ಯೂ ಅವ್ಯಾಹತ ಐ.ಟಿ.ಸಿ(ಉತ್ಪಾದನೆಯಲ್ಲಿ ಒಳಗೊಂಡಿರುವ ವಸ್ತುಗಳ ಮೇಲಿನ ತೆರಿಗೆ ಮೊತ್ತದ ಜಮೆ) ಸೌಲಭ್ಯವನ್ನು ಸರಕು ಪೂರೈಕೆ ಸರಣಿಯಲ್ಲಿ ಒದಗಿಸಲಾಗಿದೆ.

ಅಧ್ಯಾಯ 2

## ಜಿ.ಎಸ್.ಟಿ ನೋಂದಣಿಕರಣ

ಜಿ.ಎಸ್.ಟಿ ಯು, ಪೂರೈಕೆಗಳ ಮೇಲೆ ಹೊರಿಸಲಾಗುವ ತೆರಿಗೆ, ಆದ್ದರಿಂದ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ತೆರಿಗೆಗೆ ಅರ್ಹವಾಗುವ ಸರಕು, ಸೇವೆ ಇಲ್ಲವೇ ಎರಡನ್ನೂ ಒದಗಿಸುವಂತಹ ಪೂರೈಕೆದಾರರು, ತಮ್ಮ ಸಮಗ್ರ ವಾರ್ಷಿಕ ವಹಿವಾಟು ಕನಿಷ್ಠ ಮಿತಿಗಿಂತ ಹೆಚ್ಚಾಗಿದ್ದರೆ, ಜಿ.ಎಎಸ್.ಟಿ ನೋಂದಣಿ ಮಾಡಬೇಕಾಗುತ್ತದೆ. ದಿನಾಂಕ 01.04.2019 ರ ಅನ್ವಯ, ಸೇವೆಗಳ ಪೂರೈಕೆದಾರರಿಗೆ, ಜಿ.ಎಸ್.ಟಿ ಅಡಿಯಲ್ಲಿ ನೋಂದಾಯಿಸಿಕೊಳ್ಳಲು ಮತ್ತು ತೆರಿಗೆ ಪಾವತಿಸಲು, ಸಮಗ್ರ ವಾರ್ಷಿಕ ವಹಿವಾಟಿನ ಕನಿಷ್ಠ ಮಿತಿ ₹.20 ಲಕ್ಷ(ಮಣಿಪುರ, ಮಿಝೋರಾಮ್, ನಾಗಾಲ್ಯಾಂಡ್ ಮತ್ತು ತ್ರಿಪುರ ರಾಜ್ಯಗಳಲ್ಲಿ ₹.10 ಲಕ್ಷ), ಸರಕು ಪೂರೈಕೆದಾರರಿಗೆ, ಜಿ.ಎಸ್.ಟಿ ಅಡಿಯಲ್ಲಿ ನೋಂದಾಯಿಸಿಕೊಳ್ಳಲು ಮತ್ತು ತೆರಿಗೆ ಪಾವತಿಸಲು , ಸಮಗ್ರ ವಾರ್ಷಿಕ ವಹಿವಾಟಿನ ಕನಿಷ್ಠ ಮಿತಿ ₹.40 ಲಕ್ಷ (ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಮ್, ನಾಗಾಲ್ಯಾಂಡ್, ಪುದುಚೇರಿ, ಸಿಕ್ಕಿಂ ತೆಲಿಂಗಾಣ, ತ್ರಿಪುರ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ₹.20 ಲಕ್ಷ) ನಿಗದಿತವಾಗಿದೆ.

ಎಂ.ಎಸ್.ಎಂ. ಗಳನ್ನು ಹೊಂದಿರುವ 10 ಪ್ರಮುಖ ರಾಜ್ಯಗಳು

| ರಾಜ್ಯಗಳು | ಸಂಯೋಜಿತ ಡೀಲರ್‌ಗಳು |
|---|---|
| ಉತ್ತರ ಪ್ರದೇಶ | 3,54,629 |
| ರಾಜಸ್ಥಾನ | 1,59,368 |
| ಮಹಾರಾಷ್ಟ್ರ | 1,55,548 |
| ಆಂಧ್ರ ಪ್ರದೇಶ | 1,12,839 |
| ಕರ್ನಾಟಕ | 1,12,161 |
| ಬಿಹಾರ | 94,124 |
| ತಮಿಳುನಾಡು | 92,014 |
| ಪಶ್ಚಿಮ ಬಂಗಾಳ | 79,165 |
| ಮಧ್ಯ ಪ್ರದೇಶ | 63,508 |

–ದಿ.15.06.2019 ರ ಅನ್ವಯ

ಸ್ವೈಚ್ಛಿಕ ನೋಂದಣಿಕರಣ: ಸಮಗ್ರ ವಾರ್ಷಿಕ ವಹಿವಾಟಿನ ಕನಿಷ್ಠ ಮಿತಿಯೊಳಗೆ ಇರುವ ವ್ಯಕ್ತಿಗಳು ಸ್ವೈಚ್ಛಿಕವಾಗಿ ಜಿ.ಎಸ್.ಟಿ ಅಡಿಯಲ್ಲಿ ನೋಂದಣಿ ಪಡೆಯ ಬಹುದು.

ಸಮಗ್ರ ವಹಿವಾಟು: ಭಾರತಾದ್ಯಂತ, ಒಂದೇ ಪ್ಯಾನ್ ಸಂಖ್ಯೆಯ ಅಡಿಯಲ್ಲಿ, ತೆರಿಗೆಗೆ ಅರ್ಹವಾದ ಎಲ್ಲಾ ಪೂರೈಕೆಗಳು, ವಿನಾಯಿತಿ ಪಡೆದ ಪೂರೈಕೆಗಳು, ರಫ್ತು ಮಾಡಿದ ಸರಕು ಮತ್ತು / ಇಲ್ಲವೆ ಸೇವೆಗಳು, ಅಂತರ ರಾಜ್ಯ ಪೂರೈಕೆ ಮಾಡಲಾದ ಸರಕು ಮತ್ತು / ಇಲ್ಲವೇ ಸೇವೆಗಳು ಇವೆಲ್ಲದರ ಒಟ್ಟು ಮೊತ್ತ, ಹಾಗೂ ಜಿ.ಎಸ್.ಟಿ ಕಾಯಿದೆಯ ಅಡಿಯಲ್ಲಿ ಹೊರಿಸಲಾದ ತೆರಿಗೆಗಳನ್ನು ಹೊರತು ಪಡಿಸಿ ಲೆಕ್ಕ ಮಾಡಿದ ಒಟ್ಟು ಮೊತ್ತವನ್ನು ಸಮಗ್ರ ವಹಿವಾಟು ಎಂದು ಪರಿಗಣಿಸಲಾಗುತ್ತದೆ. ಬಿಡಿ ಕಾಮಗಾರಿಗೆ ಸಂಬಂಧಿಸಿದಂತೆ, ಬಿಡಿ ಕೆಲಸದ ಸರಕುಗಳ ಮೂಲ್ಯವನ್ನು ಹೊರತು ಪಡಿಸಿ, ಮೂಲ ವ್ಯಾಪಾರ ಸಂಸ್ಥೆಯ ಪರವಾಗಿ ಮಾಡಲಾದ ಪೂರೈಕೆಗಳನ್ನೂ ಸಹ ಸಮಗ್ರ ವಹಿವಾಟು ಎಂದು ಪರಿಗಣಿಸಲಾಗುತ್ತದೆ.

ಈ ಕೆಳಕಂಡ ವ್ಯಕ್ತಿಗಳು ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ನೋಂದಾಯಿಸಿಕೊಳ್ಳುವ  ಅವಶ್ಯಕತೆ ಇಲ್ಲ :

ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ಕೆಲವು ವರ್ಗದ ವ್ಯಕ್ತಿಗಳಿಗೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. 1. ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ತೆರಿಗೆ ಹೊರಿಸಲಾಗದ ಸರಕು ಮತ್ತು/ಇಲ್ಲವೇ ಸೇವೆಗಳ ಪೂರೈಕೆಯಲ್ಲಿ ತೊಡಗಿರುವ ವ್ಯಕ್ತಿಗಳು, 2. ಕೃಷಿಕರು, ಬೇಸಾಯದಿಂದ ಬೆಳೆದ ಬೆಳೆಗಳ ಪೂರೈಕೆಗೆ ಸೀಮಿತ ವಾಗಿರುವಂತಹವರು, 3. ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ತೆರಿಗೆ ಹೊರಿಸಬಹುದಾದಂತಹ, ಆದರೆ ರಿವರ್ಸ್ ಚಾರ್ಜ್ ಆಧಾ–ರಿತ (ವ್ಯತಿರಿಕ್ತ ತೆರಿಗೆ ಪದ್ಧತಿ) ಅಂದರೆ ಸರಕು / ಸೇವೆ ಪಡೆದವರು ತೆರಿಗೆ ಪಾವತಿಸುವಂತಹ ವ್ಯವಸ್ಥೆಯ ಅಡಿಯಲ್ಲಿ, ಸರಕು ಮತ್ತು/ಇಲ್ಲವೇ ಸೇವೆಗಳ ಪೂರೈಕೆ ಮಾಡುವ ವ್ಯಕ್ತಿಗಳು .

ಅನಿವಾರ್ಯ ನೋಂದಣಿಕರಣ: ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ಸಮಗ್ರ ವಹಿವಾಟು, ಕನಿಷ್ಠ ಮಿತಿಯೊಳಗೇ ಇದ್ದರೂ, ಕೆಲವು ವರ್ಗದ ಪೂರೈಕೆದಾರರು ಅನಿವಾರ್ಯವಾಗಿ ನೋಂದಾಯಿಸಿಕೊಳ್ಳುವ  ಅವಶ್ಯಕತೆ ಇರುತ್ತದೆ.

1. ಜಿ.ಎಸ್.ಟಿ ಕಾಯಿದೆ ಅಡಿಯಲ್ಲಿ ತೆರಿಗೆಗೆ ಅರ್ಹವಾದ ಸರಕುಗಳ ಅಂತರರಾಜ್ಯ ಪೂರೈಕೆಯಲ್ಲಿ ತೊಡಗಿರುವ ವ್ಯಕ್ತಿಗಳು,

2. ತೆರಿಗೆಗೆ ಅರ್ಹವಾದ ಪೂರೈಕೆಯಲ್ಲಿ ತೊಡಗಿರುವ ಸಾಮಾನ್ಯ ತೆರಿಗೆದಾರರು,

3. ರಿವರ್ಸ್ ಚಾರ್ಜ್ ವ್ಯವಸ್ಥೆ ಅಡಿಯಲ್ಲಿ ತೆರಿಗೆ ಪಾವತಿ ಮಾಡಬೇಕಾದ ವ್ಯಕ್ತಿಗಳು

4. ತೆರಿಗೆಗೆ ಅರ್ಹರಾದ ಪೂರೈಕೆದಾರರ ಪರವಾಗಿ ಪೂರೈಕೆಗಳನ್ನು (ತೆರಿಗೆಗೆ ಅರ್ಹ) ಮಾಡುವ ವ್ಯಕ್ತಿಗಳು ಅಥವಾ ಏಜೆಂಟುಗಳು ಇತ್ಯಾದಿ. ಈ ಮೇಲ್ಕಂಡ ಅಂಶಗಳನ್ನು ಎಂ.ಎಸ್.ಎಮ್.ಈ ಗಳು ಗಮನದಲ್ಲಿ ಇಡ ಬೇಕು.

ಎಂ.ಎಸ್.ಎಮ್.ಈ ಕ್ಷೇತ್ರ ಕ್ಕೆ ಲಭ್ಯವಿರುವ ವಿಶೇಷ  ನೋಂದಣಿ ಸೌಲಭ್ಯಗಳು: ವ್ಯಾಪಾರ ಸರಳೀಕರಣದ ದೃಷ್ಟಿಯಿಂದ, ವಾರ್ಷಿಕ ವಹಿವಾಟನ್ನು ಆಧರಿಸಿ, ಈ ಕೆಳಕಂಡ ಸಣ್ಣ ಮತ್ತು ಮಧ್ಯಮ ವರ್ಗದ ಉದ್ಯಮಗಳು, ಜಿ.ಎಸ್.ಟಿ ನೋಂದಣಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

(1) ಸರಕು ಪೂರೈಕೆದಾರರ ಸಮಗ್ರ ವ್ಯಾಪಾರ ವಹಿವಾಟು, ಆಯಾ ಹಣಕಾಸು ವರ್ಷದಲ್ಲಿ, ನಿಗದಿತ ವಿನಾಯಿತಿ ಮಿತಿಯೊಳಗೆ, ಅಂದರೆ ₹.40 ಲಕ್ಷದೊಳಗಿದ್ದು (ಕೆಲವು ರಾಜ್ಯಗಳಿಗೆ ಅನ್ವಯಿಸುವಂತೆ ₹.20 ಲಕ್ಷ), ತೆರಿಗೆಗೆ ಅರ್ಹವಾದ ಸರಕನ್ನು ರಾಜ್ಯದೊಳಗೇ ಪೂರೈಕೆ ಮಾಡುತ್ತಿರುವ ಪೂರೈಕೆದಾರರು.

(2) ಸೇವಾಪೂರೈಕೆದಾರರ ಸಮಗ್ರ ವ್ಯಾಪಾರ ವಹಿವಾಟು, ಆಯಾ ಹಣಕಾಸು ವರ್ಷದಲ್ಲಿ, ನಿಗದಿತ ವಿನಾಯಿತಿ ಮಿತಿಯೊಳಗೆ, ಅಂದರೆ ₹.20 ಲಕ್ಷದೊಳಗಿದ್ದು (ಕೆಲವು ರಾಜ್ಯಗಳಿಗೆ ಅನ್ವಯಿಸುವಂತೆ ₹.10 ಲಕ್ಷ), ತೆರಿಗೆಗೆ ಅರ್ಹವಾದ ಸೇವೆಯನ್ನು ರಾಜ್ಯದೊಳಗೇ ಪೂರೈಕೆ ಮಾಡುತ್ತಿರುವ ಪೂರೈಕೆದಾರರು.

(3) ಸೇವಾಪೂರೈಕೆದಾರರ ಸಮಗ್ರ ವ್ಯಾಪಾರ ವಹಿವಾಟು, ಆಯಾ ಹಣಕಾಸು ವರ್ಷದಲ್ಲಿ, ನಿಗದಿತ ವಿನಾಯಿತಿ ಮಿತಿಯೊಳಗೆ, ಅಂದರೆ ₹.20 ಲಕ್ಷದೊಳಗಿದ್ದು (ಕೆಲವು ರಾಜ್ಯಗಳಿಗೆ ಅನ್ವಯಿಸುವಂತೆ ₹.10 ಲಕ್ಷ), ತೆರಿಗೆಗೆ ಅರ್ಹವಾದ ಸೇವೆಯನ್ನು ರಾಜ್ಯಗಳ ನಡುವೆ ಅಂದರೆ ಅಂತರ ರಾಜ್ಯ ಮಟ್ಟದಲ್ಲಿ ಸೇವೆಗಳ ಪೂರೈಕೆ ಮಾಡುತ್ತಿರುವ ಪೂರೈಕೆದಾರರು.

# ಅಧ್ಯಾಯ 3

## ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ

ಜಿ.ಎಸ್.ಟಿ ಗೆ ಸಂಬಂಧಿಸಿದಂತೆ, ಸಂಯೋಜಿತ ಯೋಜನೆಯು, ನಿಗದಿತ ಮಿತಿಯಲ್ಲಿ ವ್ಯಾಪಾರದ ವಾರ್ಷಿಕ ವಹಿವಾಟು ಹೊಂದಿರುವ ಸಣ್ಣ ಮತ್ತು ಮಧ್ಯಮ ವರ್ಗದ ತೆರಿಗೆದಾರರಿಗಾಗಿ ಅಳವಡಿಸಿರುವ ಬದಲಿ ತೆರಿಗೆ ವ್ಯವಸ್ಥೆ. ಸಣ್ಣ ಉದ್ದಿಮೆದಾರರು ಸರಳವಾಗಿ, ಸುಲಭದಲ್ಲಿ ತೆರಿಗೆ ಪಾವತಿಸುವ ವಿಧಾನ. ಇದು ಸ್ವೈಚ್ಛಿಕವಾದ ವಿಕಲ್ಪ ಯೋಜನೆ. ಸಂಯೋಜಿತ ತೆರಿಗೆ ಯೋಜನೆಯಡಿಯಲ್ಲಿ ನೋಂದಾಯಿತ ತೆರಿಗೆದಾರರು, ಸರಕು ಅಥವಾ ಸೇವೆಗಳ ಪೂರೈಕೆಯ ಮೇಲೆ ತೆರಿಗೆ ವಸೂಲಿ ಮಾಡುವಂತಿಲ್ಲ, ಇಂತಹ ತೆರಿಗೆದಾರರಿಗೆ ಐ.ಟಿ.ಸಿ (ಹೂಡುವಳಿ ತೆರಿಗೆ ಜಮೆ) ಕೂಡ ಅನ್ವಯಿಸುವುದಿಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಹೊರೆಯ ಪ್ರಮುಖ ಲಕ್ಷಣಗಳು ಈ ಕೆಳಕಂಡಂತೆ ಇರುತ್ತವೆ.

1) ಹಿಂದಿನ ಹಣಕಾಸು ವರ್ಷದಲ್ಲಿ ಸಮಗ್ರ ವ್ಯಾಪಾರ ವಹಿವಾಟು, ಒಟ್ಟು ₹.1.5 ಕೋಟಿ ಮೊತ್ತವನ್ನು ಮೀರದಿದ್ದರೆ, (ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ,ಮಿಝೋರಾಮ್, ನಾಗಾಲ್ಯಾಂಡ್, ಸಿಕ್ಕಿಮ್, ತ್ರಿಪುರ ಮತ್ತು ಉತ್ತರಾಖಂಡ ರಾಜ್ಯಗಳಿಗೆ ಅನ್ವಯಿಸುವಂತೆ ₹.75 ಲಕ್ಷ ಪರಿಮಿತಿ) ಅಂತಹ ನೋಂದಾಯಿತ ತೆರಿಗೆದಾರರು, ಈ ಯೊಜನೆಯ ಲಾಭ ಪಡೆಯ ಬಹುದು.

2) ಆದಾಗ್ಯೂ, ಕೇವಲ ಸೇವೆಗಳ ಪೂರೈಕೆದಾರರ (ಅಥವಾ ಸರಕು ಮತ್ತು ಸೇವೆಗಳನ್ನು ಒಟ್ಟಾಗಿ ಪೂರೈಕೆ ಮಾಡುವವರು), ಹಣಕಾಸು ವರ್ಷದ ಸಮಗ್ರ ವ್ಯಾಪಾರ ವಹಿವಾಟು, ಒಟ್ಟು ₹.50 ಲಕ್ಷದವರೆವಿಗೂ ಇದ್ದರೆ, ಅಂತಹವರಿಗೆ 6% ದರದಲ್ಲಿ ಜಿ.ಎಸ್.ಟಿ ಅನ್ವಯವಾಗುತ್ತದೆ.

3) ಐಸ್ಕ್ರೀಂ, ಪಾನ್ ಮಸಾಲ ಮತ್ತು ತಂಬಾಕು ಉತ್ಪಾದಕರು ಜಿ.ಎಸ್.ಟಿ ಸಂಯೋಜಿತ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ.

4) ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ತೆರಿಗೆದಾರರು, ಒಂದು ನಿಗದಿತ ಶೇಕಡಾವಾರು ಮೊತ್ತವನ್ನು ಸರಕಾರಕ್ಕೆ ಪಾವತಿಸಬೇಕಾಗುತ್ತದೆ. ತೆರಿಗೆ ಮೊತ್ತವನ್ನು ಗ್ರಾಹಕರಿಂದ ಜಿ.ಎಸ್.ಟಿ ರೂಪದಲ್ಲಿ ವಸೂಲಿ ಮಾಡುವಂತಿಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ದರವು ಈ ಕೆಳಕಂಡಂತೆ ಇರುತ್ತದೆ.


1) ಅರ್ಹ ಉತ್ಪಾದಕರಿಗೆ ಅನ್ವಯಿಸುವಂತೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ, ವಾರ್ಷಿಕ ವಹಿವಾಟಿನ 1% ಮೊತ್ತ.

2) ವ್ಯಾಪಾರಿಗಳಿಗೆ ಅನ್ವಯಿಸುವಂತೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ, ತೆರಿಗೆಗೆ ಅರ್ಹವಾದ ಪೂರೈಕೆಗಳ ವಾರ್ಷಿಕ ವಹಿವಾಟಿನ 1% ಮೊತ್ತ.

3) ಪರಿಶಿಷ್ಠ 2 ರ ಪ್ಯಾರ ಸಂಖ್ಯೆ 6(ಬಿ)ಗೆ ಅನ್ವಯಿಸುವಂತೆ (ರೆಸ್ಟೋರೆಂಟ್ ಸೇವೆಗಳು ಮತ್ತು ಒಪ್ಪಂದದ ಮೇಲೆ ಕೆಲಸಗಳಿಗೆ), ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ, ತೆರಿಗೆಗೆ ಅರ್ಹವಾದ ಪೂರೈಕೆಗಳ ವಾರ್ಷಿಕ ವಹಿವಾಟಿನ 5% ಮೊತ್ತ.

4) ಕೇವಲ ಸೇವೆಗಳ ಪೂರೈಕೆದಾರರು ಅಥವಾ ಸರಕು ಮತ್ತು ಸೇವೆಗಳನ್ನು ಒಟ್ಟಾಗಿ ಪೂರೈಕೆ ಮಾಡುವವರು, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ತೆರಿಗೆಗೆ ಅರ್ಹವಾದ ಪೂರೈಕೆಗಳ ವಾರ್ಷಿಕ ವಹಿವಾಟಿನ 6% ಮೊತ್ತ.

5) ತ್ರೈಮಾಸಿಕ ರೂಪದಲ್ಲಿ ತೆರಿಗೆ ಪಾವತಿಸಬೇಕು. ಇಂತಹ ತೆರಿಗೆದಾರರು ವಿಸ್ತೃತವಾದ ಲೆಕ್ಕ–ಪತ್ರ ಮತ್ತು ಕಡತಗಳನ್ನು ಇಡಬೇಕಾದ ಅವಶ್ಯಕತೆ ಇರುವುದಿಲ್ಲ. ಹಾಗೆಯೇ ಎರಡು ಮಾಸಿಕ ವಿವರಣೆಗಳನ್ನು ಮತ್ತು ಒಂದು ಸಮಗ್ರ ವಿವರಣೆಯ ಬದಲು (ಸಾಮಾನ್ಯವಾಗಿ ಜಿ.ಎಸ್.ಟಿ ಅಡಿಯಲ್ಲಿ ತೆರಿಗೆದಾರರು ದಾಖಲಿಸುವ ವಿವರಣೆಗಳು), ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ತೆರಿಗೆದಾರರು, ತ್ರೈಮಾಸಿಕ ರೂಪದಲ್ಲಿ ದಾಖಲೆಗಳನ್ನು ನೀಡುವುದು



## ಅಧ್ಯಾಯ 4

## ಹೂಡುವಳಿ ತೆರಿಗೆ ಜಮೆ

ಜಿ.ಎಸ್.ಟಿ ವ್ಯಾಪ್ತಿಯಲ್ಲಿ, ನೋಂದಾಯಿತ ವ್ಯಕ್ತಿಯು, ವ್ಯಾಪಾರ ಮಾಡುವ ದೃಷ್ಟಿಯಿಂದ ಅಥವಾ ವ್ಯಾಪರಕ್ಕೆ ಪೂರಕವಾಗಿ ಖರೀದಿಸಿದ ಸರಕು ಅಥವಾ ಸೇವೆ ಇಲ್ಲವೇ ಸರಕು ಮತ್ತು ಸೇವೆಯ ಮೇಲೆ ತೆರಿಗೆಯನ್ನು ಐ.ಟಿ.ಸಿ ರೂಪದಲ್ಲಿ ಪಡೆಯುವ ಅರ್ಹತೆ ಹೊಂದಿರುತ್ತಾರೆ. ಸರಕು /ಸೇವೆಗಳನ್ನು ಪಡೆದ ತೆರಿಗೆದಾರರು ತಾವು ಖರೀದಿಸಿದ ಅಥವಾ ತೆಗೆದುಕೊಂಡ ಸೇವೆಗಳ ಮೇಲಿನ ತೆರಿಗೆಯ ಮೊತ್ತವನ್ನು ಹೂಡುವಳಿ ಜಮೆ ರೂಪದಲ್ಲಿ ಪಡೆಯಬಹುದು. ಆದಾಗ್ಯೂ, ಸಂಯೋಜಿತ ಯೋಜನೆಯ ಅಡಿಯಲ್ಲಿ ನೋಂದಾಯಿತ ತೆರಿಗೆದಾರರು ಹೂಡುವಳಿ ತೆರಿಗೆ ಜಮೆಗೆ ಅರ್ಹತೆ ಹೊಂದಿರುವುದಿಲ್ಲ.

ಹೊಸ ನೋಂದಣೀಕರಣ, ಸಂಯೋಜಿತ ಯೋಜನೆಯಿಂದ ಸಾಮಾನ್ಯ ಜಿ.ಎಸ್.ಟಿ ತೆರಿಗೆ ವ್ಯಾಪ್ತಿಗೆ ವರ್ಗಾವಣೆ ಅಥವಾ ಸಾಮಾನ್ಯ ಜಿ.ಎಸ್.ಟಿ ತೆರಿಗೆ ವ್ಯಾಪ್ತಿಯಿಂದ ಸಂಯೋಜಿತ ಯೋಜನೆಗೆ ಬದಲಾಗುವುದು, ತೆರಿಗೆ ವಿನಾಯಿತಿ ಯೋಜನೆಯಿಂದ ತೆರಿಗೆ ಹೊರೆಯ ವ್ಯಾಪ್ತಿಗೆ ವರ್ಗಾವಣೆ ಅಥವಾ ತೆರಿಗೆ ಹೊರೆಯ ವ್ಯಾಪಿಯಿಂದ ತೆರಿಗೆ ವಿನಾಯಿತಿ ಯೋಜನೆಯಡಿ ಬದಲಾಗುವುದು ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ, ಜಮೆ ಲಾಭವನ್ನು ಪಡೆಯಲು ವಿಶೇಷ ನಿಯಮಗಳು ಅನ್ವಯವಾಗುತ್ತವೆ. ಇದರಿಂದಾಗಿ, ಸಂಯೋಜಿತ ಯೋಜನೆ ಇಲ್ಲವೇ ವಿನಾಯಿತಿ ವರ್ಗದಿಂದ ಸಾಮಾನ್ಯ ಜಿ.ಎಎಸ್.ಟಿ ವ್ಯಾಪ್ತಿಗೆ ವರ್ಗಾವಣೆಯಾದಾಗ ಎಂ.ಎಸ್.ಎಮ್.ಈ ಗಳಿಗೆ ಐ.ಟಿ.ಸಿ ಸೌಲಭ್ಯ ದೊರಕುತ್ತದೆ.

**ಜಿ.ಎಸ್.ಟಿ.ಆರ್–3ಬಿ ಮೂಲಕ ಪಡೆದಿರುವ ಸಮಗ್ರ ಮಾಸಿಕವಾರು ಐ.ಟಿ.ಸಿ ವಿವರಣೆ ( ₹ ಕೋಟಿಗಳಲ್ಲಿ)**

| ಮಾಸ | ವರ್ಷ | | |
|---|---|---|---|
| | 2017 | 2018 | 2019 |
| ಜನವರಿ | | 248491 | 287636 |
| ಫೆಬ್ರವರಿ | | 236358 | 276890 |
| ಮಾರ್ಚ್ | | 239004 | 291748 |
| ಏಪ್ರಿಲ್ | | 277453 | 331077 |
| ಮೇ | | 245830 | 273733 |
| ಜೂನ್ | | 263729 | |
| ಜುಲೈ | | 266444 | |
| ಆಗಸ್ಟ್ | 141987 | 256838 | |
| ಸೆಪ್ಟಂಬರ್ | 188945 | 264403 | |
| ಅಕ್ಟೋಬರ್ | 212832 | 300815 | |
| ನವಂಬರ್ | 219378 | 284672 | |
| ಡಿಸಂಬರ್ | 231983 | 266228 | |

–ದಿನಾಂಕ 21.06.2019 ರ ಅನ್ವಯ

# ಅಧ್ಯಾಯ 5

## ಜಿ.ಎಸ್.ಟಿ ಅಡಿಯಲ್ಲಿ ತೆರಿಗೆ ಇನ್‌ವಾಯ್ಸ್

ಜಿ.ಎಸ್.ಟಿ ಕಾಯಿದೆಯಲ್ಲಿ ಒಳಗೊಂಡಂತೆ, ನಿಗದಿತ ಅವಧಿಯಲ್ಲಿ (ಅಂದರೆ ಸರಕು ಪೂರೈಕೆಗೆ ಸಂಬಂಧಿಸಿದಂತೆ ಸರಕನ್ನು ಸಾಗಿಸುವ ಮುನ್ನ ಮತ್ತು ಸೇವೆಯ ಪೂರೈಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಪೂರೈಕೆ ಮಾಡಿದ 30 ದಿನಗಳೊಳಗಾಗಿ) ನಿಗದಿತ ವಿವರಣೆಗಳನ್ನು ಹೊಂದಿದ ತೆರಿಗೆ ಇನ್‌ವಾಯ್ಸ್ ಒದಗಿಸ ತಕ್ಕದ್ದು. ಇದಕ್ಕೆ ಯಾವುದೇ ನಿರ್ದಿಷ್ಠ ಪ್ರಪತ್ರವು ಇರುವುದಿಲ್ಲ. ಜಿ.ಎಸ್.ಟಿ ಕಾನೂನಿನ ಅಡಿಯಲ್ಲಿ, ತೆರಿಗೆ ಇನ್‌ವಾಯ್ಸ್ , ಡೆಲಿವರಿ ಚಲಾನ್, ಪೂರೈಕೆ ಬಿಲ್, ಕ್ರೆಡಿಟ್ ನೋಟ್, ಡೆಬಿಟ್ ನೋಟ್, ರಿವೈಸಡ್ ತೆರಿಗೆ ಇನ್‌ವಾಯ್ಸ್ , ರಸೀದಿ ಔಚರು, ಪಾವತಿ ಔಚರು ಇತ್ಯಾದಿ ದಾಖಲೆಗಳನ್ನು ಪರಿಗಣಿಸಲಾಗುವುದು.

ಸರಕು ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆ ಇನ್‌ವಾಯ್ಸ್ ಅನ್ನು ಮೂರು ಪ್ರತಿಗಳಲ್ಲಿ ಒದಗಿಸಬೇಕು.(ಅಂದರೆ, ಸರಕನ್ನು ಖರೀದಿಸುವವರಿಗೆ ಮೂಲ ಪ್ರತಿ, ಸರಕು ಸಾಗಿಸುವವರಿಗೆ ಎರಡನೇ ಪ್ರತಿ ಮತ್ತು ಪೂರೈಕೆದಾರರಿಗೆ ಮೂರನೆ ಪ್ರತಿಯಂತೆ) ; ಅದೇ ಸೇವೆಯ ಪೂರೈಕೆ ಸಂದರ್ಭದಲ್ಲಿ, ತೆರಿಗೆ ಇನ್‌ವಾಯ್ಸ್ ಅನ್ನು ಎರಡು ಪ್ರತಿಗಳಲ್ಲಿ (ಅಂದರೆ, ಸೇವೆಯನ್ನು ಪಡೆಯುವವರಿಗೆ ಮೂಲ ಪ್ರತಿ, ಮತ್ತು ಪೂರೈಕೆದಾರರಿಗೆ ಎರಡನೇ ಪ್ರತಿಯಂತೆ) ಒದಗಿಸಬೇಕು.

ಎಮ್.ಎಸ್.ಎಮ್.ಈ ಕ್ಷೇತ್ರಕ್ಕೆ ಅನ್ವಯಿಸುವಂತೆ ವಿಶೇಷ ಇನ್‌ವಾಯ್ಸ್ ಸೌಕರ್ಯ: ₹.1.5 ಕೋಟಿ ವರೆಗೂ ವಾರ್ಷಿಕ ವಹಿವಾಟು ಇರುವ ತೆರಿಗೆದಾರರಿಗೆ , ತೆರಿಗೆ ಇನ್‌ವಾಯ್ಸ್ ಮೇಲೆ ಎಚ್.ಎಸ್.ಎನ್ ಕೋಡ್ ಸಂಖ್ಯೆ ನಮೂದಿಸುವ ಪದ್ದತಿಯನ್ನು ಕೊನೆಗೊಳಿಸಲಾಗಿದೆ. ಹಾಗೆಯೇ, ₹.1.5 ಕೋಟಿಗಿಂತ ಮಿಗಿಲಾದ ಮತ್ತು ₹.5 ಕೋಟಿ ಮೀರದ ವಾರ್ಷಿಕ ವಹಿವಾಟು ಇರುವ ತೆರಿಗೆದಾರರು , ಎಚ್.ಎಸ್.ಎನ್ ಕೋಡ್ ನ ಕೊನೇ ಎರಡು ಸಂಖ್ಯೆಗಳನ್ನು ಮಾತ್ರ ತೆರಿಗೆ ಇನ್‌ವಾಯ್ಸ್ ಮೇಲೆ ನಮೂದಿಸ ಬೇಕು. ₹.5 ಕೋಟಿಗಿಂತ ಹೆಚ್ಚು ವಾರ್ಷಿಕ ವಹಿವಾಟು ಇರುವ ತೆರಿಗೆದಾರರು , ಎಚ್.ಎಸ್.ಎನ್ ಕೋಡ್ ನ ಅಷ್ಟೂ ನಾಲ್ಕು ಸಂಖ್ಯೆಗಳನ್ನು ತೆರಿಗೆ ಇನ್‌ವಾಯ್ಸ್ ಮೇಲೆ ನಮೂದಿಸ ಬೇಕು.

## ಅಧ್ಯಾಯ 6

## ಎಮ್.ಎಸ್.ಎಮ್.ಈ ಕ್ಷೇತ್ರಕ್ಕೆ ಅನ್ವಯಿಸುವಂತೆ ಚಾರ್ಟ್‌ರ್ಡ್ ಅಕೌಂಟೆಂಟೆಂಟ್ ಗಳ ಮೂಲಕ ಲೆಕ್ಕ ಪರಿಶೀಲನೆಯ ಅನಿವಾರ್ಯತೆಯಿಂದ ವಿನಾಯಿತಿ.

ಜಿ.ಎಸ್.ಟಿ ವ್ಯಾಪ್ತಿಯಲ್ಲಿ, ನೋಂದಾಯಿತ ಪ್ರತಿಯೊಬ್ಬ ವ್ಯಕ್ತಿಯೂ, ಆ ಹಣಕಾಸು ವರ್ಷದ ವಹಿವಾಟು, ನಿಗದಿತ ಪರಿಮಿತಿಯನ್ನು ದಾಟಿದರೆ, ಚಾರ್ಟ್‌ರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ಗಳ ಮೂಲಕ ಲೆಕ್ಕ ಪರಿಶೀಲನೆ ಮಾಡಿಸುವುದು ಅನಿವಾರ್ಯ. ವ್ಯಾಪಾರ ಸರಳೀಕರಣದ ಕ್ರಮವಾಗಿ, ನೋಂದಾಯಿತ ವ್ಯಕ್ತಿಯ, ಹಣಕಾಸು ವರ್ಷದ ಒಟ್ಟು ವಹಿವಾಟು, ₹.2 ಕೋಟಿಯ ಒಳಗಿದ್ದರೆ, ಅಂತಹವರು, ಚಾರ್ಟ್‌ರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ಗಳ ಮೂಲಕ ಲೆಕ್ಕ ಪರಿಶೀಲನೆ ಮಾಡಿಸುವುದರಿಂದ ವಿನಾಯಿತಿ ಹೊಂದಿರುತ್ತಾರೆ.

## ಅಧ್ಯಾಯ 7

## ಜಿ.ಎಸ್.ಟಿ ವ್ಯಾಪ್ತಿಯಲ್ಲಿ ವಿವರಣೆಗಳನ್ನು ಸಲ್ಲಿಸುವ ಪದ್ದತಿ

ಜಿ.ಎಸ್.ಟಿ ಕಾಯಿದೆಯ ಅಡಿಯಲ್ಲಿ , ಪೂರೈಕೆ ಮಾಡಿದ ಸರಕುಗಳಿಗೆ ಸಂಬಂಧಿಸಿದಂತೆ ನಿಗದಿತ ರೀತಿಯಲ್ಲಿ ಮತ್ತು ನಿಗದಿತ ಸಮಯದಲ್ಲಿ ವಿವರಣೆಗಳನ್ನು ಒದಗಿಸುವ ಸೌಕರ್ಯವನ್ನು ನೋಂದಾಯಿತ ವ್ಯಕ್ತಿಗಳಿಗೆ ನೀಡಲಾಗಿದೆ, ಆದಾಗ್ಯೂ, ಕೆಲವು ನೋಂದಾಯಿತ ವ್ಯಕ್ತಿಗಳು, ಪೂರೈಕೆ ಪಡೆಯುವ ವ್ಯಕ್ತಿಗಳಿಗೆ ವಿವರಣೆಗಳನ್ನು ಒದಗಿಸುವ ರೀತಿ ಮತ್ತು ಸಮಯವನ್ನು ಹೊರತು ಪಡಿಸಲಾಗಿದೆ. ಹಾಗೆಯೇ, ಜಿ.ಎಸ್.ಟಿ ಕಾಯಿದೆಯ ಅಡಿಯಲ್ಲಿ ನಿಗದಿತ ರೀತಿಯಲ್ಲಿ ಮತ್ತು ನಿಗದಿತ ಸಮಯದಲ್ಲಿ ವಿವರಣೆಗಳಲ್ಲಿ ಇರಬಹುದಾದ ತಪ್ಪು-ಒಪ್ಪುಗಳನ್ನು ಸರಿ ಪಡಿಸಲು ಹಾಗೂ ತೆರಿಗೆ ಮತ್ತು ಬಡ್ಡಿ ಪಾವತಿ ಮಾಡಲು ಸಹ ಸೌಕರ್ಯವನ್ನು ನೀಡಲಾಗಿದೆ.

ಚಾಲತಿಯಲ್ಲಿರುವ ವಿವರಣಾ ದಾಖಲಾತಿ ಪ್ರಕ್ರಿಯೆ ಪದ್ಧತಿ:

ತೆರಿಗೆಗೆ ಅರ್ಹರಾದ ಎಲ್ಲಾ ನೋಂದಾಯಿತ ತೆರಿಗೆದಾರರೂ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಜಿ.ಎಸ್.ಟಿ.ಆರ್-1 ಪ್ರಾರೂಪದಲ್ಲಿ, ಆಯಾ ತೆರಿಗೆ ಅವಧಿಯೊಳಗೆ ಪೂರೈಕೆಗೊಂಡ ಸರಕು ಅಥವಾ ಸೇವೆಗಳು, ಇಲ್ಲವೇ ಸರಕು ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ, ವಿವರಗಳನ್ನು ಮುಂಬರುವ ತಿಂಗಳಿನ 10ನೇ ದಿನಾಂಕದೊಳಗೆ ಸಲ್ಲಿಸುವುದು ಅನಿವಾರ್ಯ. ಹಾಗೆಯೇ, ತೆರಿಗೆಗೆ ಅರ್ಹರಾದ ಎಲ್ಲಾ ನೋಂದಾಯಿತ ತೆರಿಗೆದಾರರೂ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಜಿ.ಎಸ್.ಟಿ.ಆರ್-3ಬಿ ಪ್ರಾರೂಪದಲ್ಲಿ, ತೆರಿಗೆ ಬಾಧ್ಯತೆ, ಹೂಡುವಳಿ ತೆರಿಗೆ ಜಮೆ ಮತ್ತು ಆಯಾ ತಿಂಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿ ವಿವರಣೆಗಳನ್ನು ಮುಂಬರುವ ತಿಂಗಳಿನ 20ನೇ ದಿನಾಂಕದೊಳಗೆ ಸಲ್ಲಿಸುವುದು ಅನಿವಾರ್ಯ.

**ಸಲ್ಲಿಸಲಾದ ಜಿ.ಎಸ್.ಟಿ ವಿವರಣೆಗಳು**

| ವಿವರಣೆ ಪ್ರಕಾರ | ಸಮಗ್ರ |
|---|---|
| ಜಿ.ಎಸ್.ಟಿ.ಆರ್-1 | 9,72,17,256 |
| ಜಿ.ಎಸ್.ಟಿ.ಆರ್-3ಬಿ | 17,99,18,813 |
| ಜಿ.ಎಸ್.ಟಿ.ಆರ್-4 | 99,99,239 |

**ದಿನಾಂಕ 20.06.2019 ರ ಅನ್ವಯ**

ಎಮ್.ಎಸ್.ಎಂ.ಈ ಕ್ಷೇತ್ರದ ತೆರಿಗೆದಾರರಿಗೆ ವಿವರಣೆ ಸಲ್ಲಿಸುವಿಕೆಯಲ್ಲಿ ವಿಶೇಷ ಸೌಲಭ್ಯ: ವ್ಯಾಪಾರ ವರ್ಗಕ್ಕೆ ಸೌಕರ್ಯ ಒದಗಿಸುವ ಕ್ರಮವಾಗಿ, ₹.1.5 ಕೋಟಿ ವಾರ್ಷಿಕ ವಹಿವಾಟು ಹೊಂದಿರುವ ಎಲ್ಲಾ ನೊಂದಾಯಿತ ಅರ್ಹ ತೆರಿಗೆದಾರರು, ಜಿ.ಎಸ್.ಟಿ.ಆರ್ -1 ಪ್ರಾರೂಪದಲ್ಲಿ, ತ್ರೈ ಮಾಸಿಕ ವಿವರಣೆ ಸಲ್ಲಿಕೆ ವಿಕಲ್ಪವನ್ನು ಆರಿಸಿಕೊಳ್ಳ ಬಹುದೆಂದು ಸರಕಾರವು ಅಧಿಸೂಚಿಸಿದೆ.(ಅಂದರೆ ಪೂರೈಕೆ ಮಾಡಿದ ಸರಕು ಇಲ್ಲವೇ ಸೇವೆ ಅಥವಾ ಸರಕು ಸೇರಿದಂತೆ ಸೇವೆಯ ವಿವರಣೆಗಳನ್ನು ಮೂರು ತಿಂಗಳಿಗೊಮ್ಮೆ ಸಲ್ಲಿಸುವ ಸೌಕರ್ಯ ಒದಗಿಸಲಾಗಿದೆ).

ತೆರಿಗೆ ವಿವರಣೆಯನ್ನು ಸಲ್ಲಿಸಲು ಪ್ರಸ್ತಾಪಿತ ಸರಳ ಜಿ.ಎಸ್.ಟಿ ಪದ್ಧತಿ : ಪ್ರಸ್ತಾಪಿತ ಸರಳ ಜಿ.ಎಸ್.ಟಿ ಪದ್ಧತಿಯ ಪ್ರಕಾರ, ಸಣ್ಣ ತೆರಿಗೆದಾರರು ಮಾಸಿಕ ರೂಪದಲ್ಲಿ ತೆರಿಗೆ ಪಾವತಿ ಮಾಡಿ, ಮೂರು ತಿಂಗಳಿಗೊಮ್ಮೆ ತೆರಿಗೆ ವಿವರಣೆಗಳನ್ನು ಸಲ್ಲಿಸ ಬಹುದು. ಪ್ರಸ್ತಾಪಿತ ಸರಳ ಜಿ.ಎಸ್.ಟಿ ಪದ್ಧತಿಯ ಲಕ್ಷಣಗಳು ಈ ಕೆಳಕಂಡಂತೆ ಇವೆ:

1) ಮಾಸಿಕ ವಿವರಣೆ ಸಲ್ಲಿಸಲು ಕೊನೆಯ ದಿನಾಂಕ: ಸಣ್ಣ ತೆರಿಗೆದಾರರು, ಸಂಯೋಜಿತ ಯೋಜನೆಯಡಿ ಬರುವ ಡೀಲರ್‌ಗಳು, ಹೂಡುವಳಿ ಸೇವೆಗಳ ವಿತರಕರು, (ಐ.ಎಸ್.ಡಿ), ನೋಂದಾಯಿತ ಅನಿವಾಸಿ ವ್ಯಕ್ತಿಗಳು, ಕೇಂದ್ರ ಜಿ.ಎಸ್.ಟಿ. ಕಾಯಿದೆ, 2017 ರ ಸೆಕ್ಷನ್ 52 ರ ಅಡಿಯಲ್ಲಿ ಮೂಲದಲ್ಲೇ ತೆರಿಗೆ ವಸೂಲು ಮಾಡುವ ಹೊಣೆ ಹೊತ್ತಿರುವ ವ್ಯಕ್ತಿಗಳು, ಈ ಮುಂತಾದವರನ್ನು ಹೊರತು ಪಡಿಸಿ, ಎಲ್ಲಾ ತೆರಿಗೆದಾರರು ಪ್ರತಿತಿಂಗಳು, ಒಂದು ಮಾಸಿಕ ವಿವರಣೆಯನ್ನು ಸಲ್ಲಿಸತಕ್ಕದ್ದು. ತೆರಿಗೆದಾರರ ವಹಿವಾಟಿನ ಗಾತ್ರದ ಮೇಲೆ ವಿವರಣೆ ಸಲ್ಲಿಸುವ ದಿನಾಂಕವನ್ನು ನಿರ್ಧರಿಸಲಾಗುತ್ತದೆ. ಬೃಹತ್ ತೆರಿಗೆದಾರರು, ಮುಂಬರುವ ಮಾಸದ 20 ನೇ ತಾರಿಖಿನೊಳಗೆ ತೆರಿಗೆ ವಿವರಣೆಯನ್ನು ಸಲ್ಲಿಸಬೇಕಾಗುತ್ತದೆ. ತೆರಿಗೆ ವಿವರಣೆಯನ್ನು ಜಿ.ಎಸ್.ಟಿ.ಆರ್–1 ಪ್ರಾರೂಪದಲ್ಲಿ (ಅನೆಕ್ಸ್–1 ಹಾಗೂ ಅನೆಕ್ಸ್–2 ರ ಸಮೇತ ) ಸಲ್ಲಿಸಬೇಕಾಗುತ್ತದೆ.

2) 1) ಶೂನ್ಯ ವಿವರಣೆ: ಹಣಕಾಸು ವರ್ಷದ ತ್ರಿಮಾಸ ಒಂದರಲ್ಲಿ ಯಾವುದೇ ಖರೀದಿಯನ್ನು ಮಾಡದಿದ್ದರೆ, ಯಾವ ತೆರೆಗೆ ಬಾಧ್ಯತೆ ಅಥವಾ ಹೂಡುವಳಿ ತೆರಿಗೆ ಜಮೆ ಇಲ್ಲದಿದ್ದರೆ, ಅಂತಹ ತ್ರಿಮಾಸದಲ್ಲಿ ಒಂದು ಶೂನ್ಯ ವಿವರಣೆಯನ್ನು ಸಲ್ಲಿಸತಕ್ಕದ್ದು. ವಿವರಣೆಯನ್ನು ಎಸ್.ಎಮ್.ಎಸ್ ಮೂಲಕವೂ ಸಲ್ಲಿಸುವ ಸೌಲಭ್ಯ ಇದೆ.

2) ಸಣ್ಣ ವರ್ಗದ ತೆರಿಗೆದಾರರು: ಹಿಂದಿನ ಹಣಕಾಸು ವರ್ಷದಲ್ಲಿ ₹ 5 ಕೋಟಿಯವರೆಗೂ ವಾರ್ಷಿಕ ವಹಿವಾಟು ಇರುವ ತೆರಿಗೆದಾರರನ್ನು, ಸಣ್ಣ ವರ್ಗದ ತೆರಿಗೆದಾರರೆಂದು ಪರಿಗಣಿಸಲಾಗುತ್ತದೆ. ಇಂತಹ ತೆರಿಗೆದಾರರು, ಸ್ವಯಂ ಘೋಷಣೆಯ ಆಧಾರದ ಮೇಲೆ ಮಾಸಿಕವಾಗಿ ತೆರಿಗೆ ಪಾವತಿ ಮಾಡಿ, ತ್ರೈಮಾಸಿಕವಾಗಿ ತೆರಿಗೆ ವಿವರಣೆ ಸಲ್ಲಿಸುವ ಸೌಲಭ್ಯ ಇದೆ. ಆದಾಗ್ಯೂ, ಇಂತಹ ತೆರಿಗೆದಾರರು , ಬೃಹತ್ ತೆರಿಗೆದಾರರ ರೀತಿ ಮಾಸಿಕ ರೂಪದಲ್ಲೂ ವಿವರಣೆಯನ್ನು ಸಲ್ಲಿಸ ಬಹುದು.

ತ್ರೈಮಾಸಿಕವಾಗಿ ಸಲ್ಲಿಸುವ ವಿವರಣೆಯಲ್ಲಿ ಮಾಸಿಕ ತೆರಿಗೆ ಪಾವತಿ ಸೌಲಭ್ಯ ಇರುತ್ತದೆ, ಇದು ಎರಡು ವರ್ಗದ ನೋಂದಾಯಿತ ವ್ಯಕ್ತಿಗಳಿಗೆ ಅನ್ವಿಸುತ್ತದೆ – ಬಿ ಇಂದ ಸಿ ವರ್ಗಕ್ಕೆ ಮಾತ್ರ ಪೂರೈಕೆ ಮಾಡುವ ಮತ್ತು ಬಿ ಇಂದ ಬಿ ಹಾಗೂ ಬಿ ಇಂದ ಸಿ ವರ್ಗಕ್ಕೆ ಪೂರೈಕೆ ಮಾಡುವ ಸಣ್ಣ ಪೂರೈಕೆದಾರರು. ಅಂತಹ ತೆರಿಗೆದಾರರ ಅನುಕೂಲಕ್ಕಾಗಿ 'ಸಹಜ್' ಮತ್ತು 'ಸುಗಮ್' ಎಂಬ ಎರಡು ಸರಳ ವಿವರಣಾ ಪ್ರಾರೂಪಗಳು ಲಭ್ಯ ಇವೆ. ಇವು ಸಾಮಾನ್ಯ ವಿವರಣಾ ಪ್ರಾರೂಪಕ್ಕಿಂತ ಸರಳವಾಗಿವೆ, ಕಡಿಮೆ ಮಾಹಿತಿಯ ಅವಶ್ಯಕತೆ ಸಾಕು.

3) ತೆರಿಗೆ ವಿವರಣೆಯಲ್ಲಿ ಸಲ್ಲಿಸಿದ ಇನ್ವಾಯ್ಸ್ ವಿವರಣೆಯನ್ನು ಮಾರ್ಪಾಟು ಮಾಡುವ ಸೌಲಭ್ಯ ಕೂಡ ಈ ಹೊಸ ಪ್ರಾರೂಪದಲ್ಲಿ ಲಭ್ಯವಿರುತ್ತದೆ. ಮಾರ್ಪಾಟು ವಿವರಣೆಯನ್ನು ಮತ್ತೆ ಸಲ್ಲಸಬಹುದು. ಇಂತಹ ಸಂದರ್ಭದಲ್ಲಿ ತೆರಿಗೆದಾರರು ಮಾರ್ಪಾಟು ವಿವರಣೆಯನ್ನು ತೆರಿಗೆ ಸಹಿತ ಸಲ್ಲಿಸಿದರೆ, ತೆರಿಗೆಯ ಮೇಲಿನ ಬಡ್ಡಿ ಹೊರೆ ಇರುವುದಿಲ್ಲ.

# ಅಧ್ಯಾಯ 8

## ಜಿ.ಎಸ್.ಟಿ ಪದ್ಧತಿ ಅಡಿಯಲ್ಲಿ ಎಮ್.ಎಸ್.ಎಮ್.ಈ ಗಳಿಗೆ ಅನ್ವಯಿಸುವಂತಹ ಕ್ರಮಗಳು:

ಜಿ.ಎಸ್.ಟಿ ಪರಿಷತ್ತು, ಎಮ್.ಎಸ್.ಎಮ್.ಈ ಗಳಿಗೆ ಸೌಲಭ್ಯ ಒದಗಿಸಲು ತನ್ನ ಸಭೆಗಳಲ್ಲಿ ತೆಗೆದುಕಂಡಿರುವ ಅನೇಕ ನಿರ್ಧಾರಗಳು ಈ ಕೆಳಕಂಡಂತೆ ಇವೆ.

1) ಎಂ.ಎಸ್.ಎಂ.ಈ ಕ್ಷೇತ್ರದ ತೆರಿಗೆದಾರರು ಉಪಯೋಗಿಸುವ ಮತ್ತು / ಅಥವಾ ಉತ್ಪದಿಸುವ ಸರಕುಗಳನ್ನು ಬಹುತೇಕ ಕಡಿಮೆ ದರದ ತೆರಿಗೆಯಲ್ಲಿ ಇರಿಸಲಾಗಿದೆ, ಇಲ್ಲವೆ ತೆರಿಗೆ ವಿನಾಯಿತಿ ನೀಡಲಾಗಿದೆ. ಉದಾಹರಣೆಗೆ, ವಿದ್ಯುತ್ ಸ್ವಿಚ್ಗಳು ಮತ್ತು ವೈರ್‌ಗಳು, ಪೈಪ್ ಲೈನ್‌ಗಳು, ಪ್ಲಾಸ್ಟಿಕ್ ಉತ್ಪನ್ನಗಳು, ಮುಂತಾದವನ್ನು ಎಂ.ಎಸ್.ಎಂ.ಈ ಗಳೇ ಹೆಚಾಗಿ ಉತ್ಪಾದಿಸುತ್ತವೆ. ಈ ಹಿಂದೆ ಅವುಗಳಿಗೆ ಕೇಂದ್ರೀಯ ಅಬಕಾರಿ ವಿಧಿಸದಿದ್ದ ಕಾರಣ, ಅವುಗಳ ಮೇಲಿನ ತೆರಿಗೆ ದರವನ್ನು 28% ದಿಂದ 18% ಕ್ಕೆ ಕಡಿತಗೊಳಿಸಲಾಗಿದೆ. ಅಂತೆಯೇ, ಗೋಣಿ ಮತ್ತು ನಾರಿನ ಕೈಚೀಲಗಳು, ಹಗ್ಗಗಳು ಮುಂತಾದವು ಮುಖ್ಯವಾಗಿ ಗುಡಿ ಕೈಗಾರಿಕೆ ಉದ್ದಿಮೆಗಳಲ್ಲಿ ತಯಾರಾಗುವುದರಿಂದ ಅವುಗಳ ಮೇಲಿನ ತೆರಿಗೆ ದರವನ್ನು 12% ಇಂದ 5% ಗೆ ಕಡಿತಗೊಳಿಸಲಾಗಿದೆ. ಅತಿ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಮತ್ತು ನಗಣ್ಯ ಐ.ಟಿ.ಸಿ ಇರುವ ಮೀನುಗಾರಿಕೆ ಕ್ಷೇತ್ರ, ಮೀನುಗಾರಿಕೆಗೆ ಉಪಯೋಗಿಸುವ ಹುಕ್‌ಗಳ ಮೇಲಿನ ತೆರಿಗೆ ದರವನ್ನು 12% ಇಂದ 5% ಗೆ ಕಡಿತಗೊಳಿಸಲಾಗಿದೆ.

2) ಸಂಯೋಜಿತ ಯೋಜನೆಯ ಅಡಿಯಲ್ಲಿ ನೋಂದಾಯಿಸಿಕೊಳ್ಳಲು ಕನಿಷ್ಠ ಪರಿಮಿತಿಯನ್ನು 1 ಕೋಟಿಯಿಂದ 1.5 ಕೋಟಿಗೆ ಏರಿಸಲಾಗಿದೆ.

3) ಸಂಯೋಜಿತ ಯೋಜನೆಯ ಅಡಿಯಲ್ಲಿ ಸೇವೆಗಳನ್ನು ಸಹ ಪೂರೈಸಬಹುದು. ₹.50 ಲಕ್ಷದ ವರೆಗೂ ವಾರ್ಷಿಕ ವಹಿವಾಟು ಇರುವ ಸೇವೆ ಪೂರೈಕೆದಾರರು ಸಂಯೋಜಿತ ಯೋಜನೆಯಲ್ಲಿ ನೋಂದಾಯಿಸಿಕೊಂಡರೆ, 6% ಜಿ.ಎಸ್.ಟಿ ದರದಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ.

4) ಜಿ.ಎಸ್.ಟಿ ಪರಿಷತ್ತಿನ ಶಿಫಾರಸಿನಂತೆ, ಕೆಲವು ಅಧಿಸೂಚಿತ ವರ್ಗದ ನೋಂದಾಯಿತ ವ್ಯಕ್ತಿಗಳಿಗೆ, ನಿರ್ದಿಷ್ಟ ಸರಕುಗಳ ಮೇಲೆ ನೋಂದಾಯಿಸಿ ಕೊಳ್ಳದ ಪೂರೈಕೆದಾರರು ಪಡೆಯುವ ಪೂರೈಕೆಗಳ ಮೇಲೆ ರಿವರ್ಸ್ ಚಾರ್ಜ್ (ವ್ಯತಿರಿಕ್ತ ತೆರಿಗೆ ಪದ್ಧತಿ) ಪ್ರಣಾಲಿಕೆಯಲ್ಲಿ ಜಿ.ಎಸ್.ಟಿ ಯನ್ನು ಹೊರಿಸಲಾಗುವುದು.

5) ಇನ್‌ವಾಯ್ಸ್ ಜಾರಿಯಾದ ದಿನದಿಂದ 180 ದಿನದೊಳಗೆ, ಸರಕು / ಸೇವೆಯನ್ನು ಪಡೆದವರು, ಪೂರೈಕೆದಾರರಿಗೆ ಸಲ್ಲುವ ಮೊತ್ತವನ್ನು ಪಾವತಿಸ ಬೇಕು, ಇಲ್ಲದಿದ್ದರೆ, ಸೇವೆಯನ್ನು ಪಡೆದವರ ಐ.ಟಿ.ಸಿ ಲಾಭವನ್ನು ಹಿಂತಿರುಗಿಸಲಾಗುತ್ತದೆ.

6) ಶೂನ್ಯ ವಿವರಣೆ ಸಲ್ಲಿಕೆಯ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ.

7) ₹.20 ಲಕ್ಷ ಸಮಗ್ರ ವಾರ್ಷಿಕ ವಹಿವಾಟನ್ನು ಮೀರದ ಅಂತರ್‍ರಾಜ್ಯ ಪೂರೈಕೆಗಳನ್ನು ಮಾಡುವ ಈ–ಕಾಮರ್ಸ್ ಆಪರೇಟರ್ ಗಳನ್ನು ಒಳಗೊಂಡಂತೆ ಎಲ್ಲಾ ಪೂರೈಕೆದಾರರಿಗೆ, ಜಿ.ಎಸ್.ಟಿ ನೋಂದಣಿಯಿಂದ ವಿನಾಯಿತಿ ನೀಡಲಾಗಿದೆ.

8) ವಿದೇಶಿ ಆಮದು ಮತ್ತು ದೇಶದೊಳಗೇ ಖರೀದಿಸುವ ಕಚ್ಚಾ ಸಾಮಗ್ರಿಗಳಿಗೆ ಸಂಬಂಧಿಸಿದಂತೆ, ಮುಂಗಡ ಪ್ರಾಧಿಕರಿಸುವ ಪ್ರಕ್ರಿಯೆ (ಎಎ) / ಬಂಡವಾಳ ಸರಕುಗಳ ರಫ್ತಿಗೆ ಪ್ರೋತ್ಸಾಹ (ಈಪಿಸಿಜಿ)/ 100% ರಫ್ತಿಗೆ ಮೀಸಲಾದ ಘಟಕಗಳು (ಈಓಯು) ಇತ್ಯಾದಿ ಯೋಜನೆಗಳನ್ನು ವಿಸ್ತರಿಸಲಾಗಿದೆ. ಎಎ, ಈಪಿಸಿಜಿ, ಈಓಯು ಇತ್ಯಾದಿ ಘಟಕಗಳನ್ನು ಹೊಂದಿರುವವರು, ಆಮದು ವಸ್ತುಗಳ ಮೇಲೆ ಐ.ಜಿ.ಎಸ್.ಟಿ, ಉಪಕರ ಇತ್ಯಾದಿಯನ್ನು ಪಾವತಿಸುವ ಅಗತ್ಯವಿಲ್ಲ. ಎಎ, ಈಪಿಸಿಜಿ, ಈಓಯು ಘಟಕಗಳನ್ನು ಹೊಂದಿರುವವರಿಗೆ ಒದಗಿಸಲಾದ ದೇಶೀಯ ಪೂರೈಕೆಗಳನ್ನು ಕೇಂದ್ರೀಯ ಜಿ.ಎಸ್.ಟಿ / ರಾಜ್ಯ ಜಿ.ಎಸ್.ಟಿ ಕಾಯಿದೆಯ ಸೆಕ್ಷನ್ 147 ರ ಅಡಿಯಲ್ಲಿ , ರಫ್ತು ಎಂದು ಪರಿಗಣಿಸಲಾಗುವುದು, ದಿನಾಂಕ 18.10.2017 ರ ಅಧಿಸೂಚನೆ ಸಂಖ್ಯೆ.48/2017 Central Tax ಮೂಲಕ ಅಂತಹ ಪೂರೈಕೆಗಳಿಗೆ ಸಂಬಂಧಿಸಿದಂತೆ ತೆರಿಗೆ ಮರುಪಾವತಿಯನ್ನು ಪೂರೈಕೆದಾರರಿಗೆ ಅಥವಾ ಸರಕು ಖರೀದಿಸುವವರಿಗೆ ಕೊಡಲಾಗುವುದು.

9) ರಫ್ತು ವ್ಯಾಪಾರಿಗಳು ರಫ್ತು ಮಾಡುವ ಸಲುವಾಗಿ, ತೆರಿಗೆಗೆ ಅರ್ಹ ಸರಕುಗಳನ್ನು ನೋಂದಾಯಿತ ಪೂರೈಕೆದಾರರಿಂದ ಪಡೆದರೆ, ಅಂತಹ ಪೂರೈಕೆಗಳ ಮೇಲೆ 0.1% ದರದಲ್ಲಿ ಜಿ.ಎಸ್.ಟಿ ಪಾವತಿಸಬೇಕು, ಇದರಿಂದ ರಫ್ತು ವ್ಯಾಪಾರಿಗಳಿಗೆ ಕಾಮಗಾರಿ ಬಂಡವಾಳ ತಡೆಯನ್ನು ಕಡಿತಗೊಳಿಸಿದಂತಾಗುತ್ತದೆ. ಈ ಸೌಲಭ್ಯವನ್ನು ದಿನಾಂಕ 23.10.2017 ರ ಅಧಿಸೂಚನೆ ಸಂಖ್ಯೆ 40/2017 Central Tax ಮೂಲಕ ಜಾರಿಗೆ ತರಲಾಗಿದೆ.

ಜಿ.ಎಸ್.ಟಿ ಅಡಿಯಲ್ಲಿ ಪಾವತಿಯಾದ ಸಮಗ್ರ ತೆರಿಗೆ

| ತೆರಿಗೆ | ಜುಲೈ 2017 ರಂದ ಮೇ 2019 ರ ಅವಧಿ |
|---|---|
| ಐ.ಜಿ.ಎಸ್.ಟಿ (ಭಾರತಕ್ಕೆ ಆಮದು ಮಾಡಿಕೊಂಡ ಸರಕುಗಳ ಮೇಲಿನ ಐ.ಜಿ. ಎಸ್.ಟಿ ಹೊರತು ಪಡಿಸಿ) | ₹.5.57 ಲಕ್ಷ ಕೋಟಿ |
| ಸಿ.ಜಿ.ಎಸ್.ಟಿ | ₹.3.60 ಲಕ್ಷ ಕೋಟಿ |
| ಎಸ್.ಜಿ.ಎಸ್.ಟಿ | ₹.5.03 ಲಕ್ಷ ಕೋಟಿ |
| ಪರಿಹಾರ ಉಪಕರ | ₹.1.58 ಲಕ್ಷ ಕೋಟಿ |

ದಿನಾಂಕ 31.05.2019 ರ ಅನ್ವಯ

10) ಸರಕುಗಳನ್ನು ಪೂರೈಕೆ ಮಾಡುವ ನೋಂದಾಯಿತ ಪೂರೈಕೆದಾರರು, ಇನ್ವಾಯ್ಸ್ ಜಾರಿಗೊಳಿಸುವಾಗಲೇ ತೆರಿಗೆ ಪಾವತಿಸಬೇಕು, ಮುಂಗಡವನ್ನು ಪಡೆಯುವ ಸಮಯದಲ್ಲಿ ಅಲ್ಲ. ಈ ಸೌಲಭ್ಯವನ್ನು ದಿನಾಂಕ 15 ನವಂಬರ್, 2017 ರ ಅಧಿಸೂಚನೆ ಸಂಖ್ಯೆ 66/2017 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ.

11) ದಿನಾಂಕ 10.11.2017 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 23ನೇ ಸಭೆಯಲ್ಲಿ, ಜಿ.ಎಸ್.ಟಿ.ಆರ್–3ಬಿ ಪ್ರಾರೂಪದಲ್ಲಿ ಸಲ್ಲಿಸುವ ವಿವರಣೆಯನ್ನು, ತಡವಾಗಿ ಸಲ್ಲಿಸಿದರೆ, ದಿನಕ್ಕೆ ₹.200/–ರಂತೆ ಪಾವತಿಸಬೇಕಿದ್ದ ಶುಲ್ಕವನ್ನು ಕಡಿತಗೊಳಿಸಲಾಗಿದೆ. ಈ ನಿರ್ಣಯವನ್ನು ದಿನಾಂಕ 15 ನವಂಬರ್, 2017 ರ ಅಧಿಸೂಚನೆ ಸಂಖ್ಯೆ 64/2017 Central Tax ಮೂಲಕ ಜಾರಿಗೊಳಿಸಲಾಗಿದೆ, ಅಕ್ಟೋಬರ್, 2017 ರ ಅನ್ವಯ, ನೋಂದಾಯಿತ ತೆರಿಗೆದಾರರ ಮೇಲೆ ಯಾವುದೇ ತಿಂಗಳಲ್ಲಿ ತೆರಿಗೆ ಬಾಧ್ಯತೆ ಇಲ್ಲದಿದ್ದರೆ, ತಡವಾಗಿ ಸಲ್ಲಿಸುವ ವಿವರಣೆಗೆ ಸಂಬಂಧಿಸಿದಂತೆ ದಿನಕ್ಕೆ ₹.20/– ರಂತೆ , ಗರಿಷ್ಟ ಮೊತ್ತ ₹.5000/– ದ ವರೆಗೂ ಶುಲ್ಕ ಪಾವತಿಸಬೇಕಾಗುತ್ತದೆ. ಬೇರೆ ಎಲ್ಲಾ ಸಂದರ್ಭಗಳಲ್ಲೂ , ಅಕ್ಟೋಬರ್, 2017 ರ ಅನ್ವಯ, ನೋಂದಾಯಿತ ತೆರಿಗೆದಾರರು, ತಡವಾಗಿ ಸಲ್ಲಿಸುವ ವಿವರಣೆಗೆ ಸಂಬಂಧಿಸಿದಂತೆ ದಿನಕ್ಕೆ ₹.50/– ರಂತೆ (ಕೇಂದ್ರ ಜಿ.ಎಸ್.ಟಿ. ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ ದಿನಕ್ಕೆ ₹.25/– ರಂತೆ), ಗರಿಷ್ಟ ಮೊತ್ತ ₹.5000/– ದ ವರೆಗೂ ಶುಲ್ಕ ಪಾವತಿಸಬೇಕಾಗುತ್ತದೆ.

12) 01 ಜನವರಿ, 2018 ರ ಅನ್ವಯ, ನಿಬಂಧಿತ ಯೋಜನೆ ಅಡಿಯಲ್ಲಿ ಬರುವ ಉತ್ಪಾದಕರು ಮತ್ತು ವ್ಯಾಪಾರಿಗಳು, ಸಮನಾಗಿ 1% (ಕೇಂದ್ರ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮತ್ತು ರಾಜ್ಯ ಜಿ. ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮೊತ್ತ)ದರದಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ. ಈ ಸೌಲಭ್ಯವನ್ನು ದಿನಾಂಕ 1 ಜನವರಿ, 2018 ರ ಅಧಿಸೂಚನೆ ಸಂಖ್ಯೆ 1/2018 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ.

13) ಸಂಯೋಜಿತ ಯೋಜನೆ ಅಡಿಯಲ್ಲಿ ಅರ್ಹತೆ ಪಡೆದಿರುವ ವ್ಯಕ್ತಿಯು, ಜಮೆ, ಸಾಲ, ಮುಂಗಡ ಇತ್ಯಾದಿ ವಿನಾಯಿತಿ ಪಡೆದ ಸೇವೆಗಳನ್ನು ಪೂರೈಸುತ್ತಿದ್ದರೆ, ಅವಕ್ಕೆ ಬಡ್ಡಿ ಇಲ್ಲವೇ ರಿಯಾಯಿತಿ ರೂಪದಲ್ಲಿ ಲಾಭ ಪಡೆದರೆ, ಮಾನ್ಯತೆ ರದ್ದಾಗುವುದಿಲ್ಲ. ನಿಬಂಧಿತ ಯೋಜನೆ ಅಡಿಯಲ್ಲಿ ಸಮಗ್ರ ವಹಿವಾಟಿನ ಅರ್ಹತೆ ಲೆಕ್ಕಾಚಾರಕ್ಕೆ, ಜಮೆ, ಸಾಲ, ಮುಂಗಡ ಇತ್ಯಾದಿ ವಿನಾಯಿತಿ ಪಡೆದ ಸೇವೆಗಳ ಒಟ್ಟು ಲಾಭವನ್ನು , ಬಡ್ಡಿ / ರಿಯಾಯಿತಿ ರೂಪದಲ್ಲಿ ಒಳಗೊಂಡಂತೆ ಪಡೆದ ಲಾಭವನ್ನು ಪರಿಗಣಿಸಲಾಗುವುದಿಲ್ಲ. ಈ ಸೌಲಭ್ಯವನ್ನು ದಿನಾಂಕ 13.10.2017 ರ ಅಧಿಸೂಚನೆ ಸಂಖ್ಯೆ 1/2017 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ.

14) ದಿನಾಂಕ 18.1.2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 25ನೇ ಸಭೆಯಲ್ಲಿ, ಸ್ವಯಂ ನೋಂದಾಯಿತ ತೆರಿಗೆದಾರರಿಗೆ, ನೋಂದಣಿಕರಣದ ದಿನದಿಂದ ಒಂದು ವರ್ಷದ ಅವಧಿಯೊಳಗೆ ನೋಂದಣಿ ರದ್ದತಿಗೆ ಅರ್ಜಿ ಸಲ್ಲಸಲು ಅನುಮತಿ ನೀಡಿದೆ.

ಪರಿಸಮಾಪ್ತಿ

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆ ಕ್ಷೇತ್ರವು (ಎಂ.ಎಸ್.ಎಂ.ಈ) ಭಾರತ ಸರಕಾರದ ವಿಶೇಷ ಗಮನ ಸೆಳೆದಿದ್ದು, 2020 ರ ಸುಮಾರಿಗೆ ಅತ್ಯಧಿಕ ಉದ್ಯೋಗಾವಕಾಶವನ್ನು ಸೃಷ್ಟಿಸುವ ತೆರದಲ್ಲಿ ಇದೆ. ಎಂ.ಎಸ್.ಎಂ.ಈ ಕ್ಷೇತ್ರವನ್ನು ಪ್ರೋತ್ಸಾಹಿಸಿ ಅಭಿವೃದ್ಧಿಗೊಳಿಸಲು ಅನೇಕ ವಿನಾಯಿತಿಗಳನ್ನು ನೀಡಲಾಗುತ್ತಿದೆ. ಎಂ.ಎಸ್.ಎಂ.ಈ ಗಳು ತೆರಿಗೆ ಅನುಪಾಲನೆ ಪದ್ಧತಿಯನ್ನು ಅನುಸರಿಸಿದಂತೆಲ್ಲಾ, ಇಡೀ ವ್ಯಾಪಾರ ವಹಿವಾಟಿನ ಪ್ರಕ್ರಿಯೆಯಲ್ಲಿ ಉತ್ತಮವಾದ ಶಿಸ್ತು , ಸಿದ್ದತೆ ಕ್ರಮಬದ್ಧವಾಗಿ ನೆಲೆಸುತ್ತವೆ. ಎಂ.ಎಸ್.ಎಂ.ಈ ಗಳನ್ನು ಜಿ.ಎಸ್.ಟಿ ಒಳಗೊಂಡಂತೆ ಎಲ್ಲಾ ರೀತಿಯಿಂದಲೂ ಬಲ ಪಡಿಸಲು ಸರಕಾರವು ಬದ್ಧವಾಗಿರುವುದರಿಂದ, ಉದ್ದಿಮೆ ಕ್ಷೇತ್ರದ ಈಗಿನ ಸಮಸ್ಯೆಗಳು ಸಮಾಧಾನಗೊಂಡು, ರಾಷ್ಟ್ರದ ಸಂಕಲ್ಪವು ಸಾಕಾರಗೊಳ್ಳುತ್ತದೆ.

# ಭಾಗ II

# ಜಿ.ಎಸ್.ಟಿ ಪರಿಷತ್ತಿನ ಪ್ರಮುಖ ನಿರ್ಣಯಗಳು

# ಅಧ್ಯಾಯ I

## ಪರಿಚಯ

ಭಾರತೀಯ ಅರ್ಥ ವ್ಯವಸ್ಥೆಯಲ್ಲಿ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ಯಮ ಕ್ಷೇತ್ರವು ಕಳೆದ ಐದು ದಶಕಗಳಲ್ಲಿ, ಅತಿ ಹೆಚ್ಚು ವಿಕಸನಗೊಂಡು ಸಕ್ಷಮ ಕ್ಷೇತ್ರವಾಗಿ ಹೊರಹೊಮ್ಮಿದೆ. ಕೃಷಿ ಕ್ಷೇತ್ರದ ನಂತರ, ಕಡಿಮೆ ಬಂಡವಾಳ ಹೂಡಿಕೆಯೊಡನೆ ಅತಿ ಹೆಚ್ಚು ಉದ್ಯೋಗಾವಕಾಶವನ್ನೂ ಹಾಗೂ ಉದ್ಯಮಶೀಲತೆಯನ್ನು ಒದಗಿಸಿ ದೇಶದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಗಮನಾರ್ಹ ಕೊಡುಗೆಯನ್ನು ನೀಡಿದೆ. ಎಂ.ಎಸ್.ಎಂ.ಈ ಗಳು, ಬೃಹತ್ ಕೈಗಾರಿಕೆಗಳ ಆಂಗಿಕ ಘಟಕಗಳಾಗಿ ಕಾರ್ಯ ನಿರ್ವಹಿಸುವುದರಿಂದ ಅವುಗಳಿಗೆ ಪೂರಕವಾಗಿವೆ, ಆದ್ದರಿಂದ ದೇಶದ ಸಮಗ್ರ ಔದ್ಯೋಗಿಕ ಬೆಳವಣಿಗೆಗೆ ಕಾರಣವಾಗಿವೆ. ಈ ಕ್ಷೇತ್ರವು ಉದ್ಯೋಗಗಳ ಸೃಷ್ಟಿಗೆ ಮತ್ತು ಗ್ರಾಮೀಣ ಹಂತದ ಔದ್ಯೋಗಿಕೀಕರಣಕ್ಕೆ ಸಾಕಾರವಾಗಿದ್ದು , ಪಾರಂಪರಿಕ ಕುಶಲತೆಯೊಡನೆ ತಾಂತ್ರಿಕ ಜ್ಞಾನವನ್ನು ಬೆಸೆದಿದೆ. ಎಂ.ಎಸ್.ಎಂ.ಈ ಗಳು ಅರ್ಥವ್ಯವಸ್ಥೆಯ ಹಲವು ಕ್ಷೇತ್ರಗಳಲ್ಲಿ ತಮ್ಮ ತಾಣವನ್ನು ವಿಸ್ತ-ರಿಸುವುದಲ್ಲದೇ, ದೇಶದೊಳಗಿನ ಹಾಗೂ ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಯನ್ನು ನಿವಾರಿಸಲು ವಿವಿಧ ಬಗೆಯ ಉತ್ಪಾದನೆಗಳ ಮತ್ತು ಸೇವೆಗಳ ಪೂರೈಕೆ ಮಾಡುತ್ತಿವೆ.

ಎಂ.ಎಸ್.ಎಂ.ಈ ಸಚಿವಾಲಯದಲ್ಲಿ ಲಭ್ಯವಿರುವ ವಿವರಣೆಯ ಪ್ರಕಾರ, ಉತ್ಪಾದನೆ ಮತ್ತು ಸೇವೆಗಳ ಪೂರೈಕೆಯನ್ನು ಒಳಗೊಂಡಂತೆ ವಿಭಿನ್ನ ವ್ಯಾಪಾರ ವಹಿವಾಟುಗಳಲ್ಲಿ ಸುಮಾರು 63 ದಶಲಕ್ಷ ಎಂ.ಎಸ್. ಎಂ.ಈ ಗಳು ಕಾರ್ಯನಿರತವಾಗಿವೆ, ಇವುಗಳಲ್ಲಿ ಅರ್ಧಕ್ಕೂ ಹೆಚ್ಚು ಉದ್ಯಮಗಳು ಗ್ರಾಮೀಣ ಪ್ರದೇಶಗಳಲ್ಲಿವೆ. 2015–16 ರಲ್ಲಿ 73ನೇ ಸಾಲಿನ ರಾಷ್ಟ್ರೀಯ ನಮೂನೆ ಸರ್ವೇಕ್ಷಣೆಯ ಪ್ರಕಾರ, ಒಟ್ಟು ಸುಮಾರು 110 ದಶಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದಲ್ಲದೇ ದೇಶದ ಶೇಕಡ 29% ಆರ್ಥಿಕ ಕೊಡುಗೆಗೆ ಕಾರಣವಾಗಿವೆ. ಉದ್ಯೋಗ ಸೃಷ್ಟಿಯಲ್ಲಿ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅತಿ ದೊಡ್ಡ ಪಾತ್ರ ವಹಿಸಿರುವ ಕಾರಣ, ಎಂ.ಎಸ್. ಎಂ.ಈ ಗಳ ವ್ಯಾಪಾರ ಚಟುವಟಿಕೆಗೆ ಪೂರಕವಾದ ಹಾಗೂ ನಿಯಮಾವಳಿಗಳನ್ನು ಪಾಲಿಸಲು ಸುಲಭವಾದ ಉಪಾಯಗಳನ್ನು ರೂಢಿಸುವುದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಇದನ್ನರಿತು, ಜಿ.ಎಸ್.ಟಿ ಕಾನೂನಿನಲ್ಲಿ ಈ ಕ್ಷೇತ್ರದ ಪ್ರಣಾಲಿಕೆಗಳನ್ನು ಸರಳಗೊಳಿಸಿ ದರವನ್ನು ಕಡಿತಗೊಳಿಸುವುದು ಮುಖ್ಯ. ಆದ್ದರಿಂದ ಇಲ್ಲಿಯವರೆಗೂ ನಡೆದ ಹಲವಾರು ಜಿ.ಎಸ್.ಟಿ ಸಭೆಗಳಲ್ಲಿ ಎಂ.ಎಸ್.ಎಂ.ಈ ಗಳಿಗೆ ಅನುಕೂಲವಾಗುವ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಪ್ರಮುಖ ನಿರ್ಣಯಗಳು ಈ ಕೆಳಕಂಡಂತೆ ಇವೆ.

ದಿನಾಂಕ 04 ಆಗಸ್ಟ್, 2018 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 29ನೇ ಸಭೆಯಲ್ಲಿ, ಎಂ.ಎಸ್.ಎಂ.ಈ ಗಳಿಗೆ ಪೂರಕವಾದ ಹಲವು ನಿರ್ಣಯಗಳನ್ನು ತೆಗೆದು ಕೊಳ್ಳಲಾಗಿದೆ. ಎಂ.ಎಸ್.ಎಂ.ಈ ಕ್ಷೇತ್ರದ ಪಾಲುದಾರ–ರಿಂದ ಪಡೆದ ಅರ್ಜಿಗಳು ಮತ್ತು ಸಲಹೆಗಳನ್ನು ಆಧರಿಸಿ, ಕಾನೂನು ಸಮಿತಿ, ಫಿಟ್‌ಮೆಂಟ್ ಸಮಿತಿ ಮತ್ತು ಮಾಹಿತಿ ತಂತ್ರಜ್ಞಾನ ಸಮಿತಿಗಳ ಶಿಫಾರಸುಗಳನ್ನು ಪರಿಶೀಲಿಸಿದ ನಂತರ ಎಂ.ಎಸ್.ಎಂ.ಈ ಗಳ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಮತ್ತು ಪರಿಹಾರವನ್ನು ಸೂಚಿಸಲು ಪ್ರತ್ಯೇಕವಾದ ಸಚಿವರ ಸಮಿತಿಯನ್ನು ರಚಿಸುವುದು, ಪ್ರಮುಖವಾದ ನಿರ್ಣಯ.

ಏತನ್ಮಧ್ಯೆ, 10 ಜನವರಿ, 2019 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 32ನೇ ಸಭೆಯಲ್ಲಿ, ಎಂ.ಎಸ್.ಎಂ.ಈ ಕ್ಷೇತ್ರಕ್ಕೆ ಪೂರಕವಾಗಿ ತೆಗೆದುಕೊಂಡ ಈ ಕೆಳಕಂಡ ನಿರ್ಣಯಗಳನ್ನು 01.04.2019 ರಿಂದ ಕಾರ್ಯರೂಪಕ್ಕೆ ತರಲಾಗಿದೆ.

| ಜಿ.ಎಸ್.ಟಿ ಪರಿಷತ್ತಿನ ಕಾರ್ಯಸಾರ | |
|---|---|
| ಜಿ.ಎಸ್.ಟಿ ಪರಿಷತ್ತಿನ ಒಟ್ಟು ಸಭೆಗಳು | 35 |
| ಜಿ.ಎಸ್.ಟಿ ಪರಿಷತ್ತಿನ ಸಭೆಗಳಲ್ಲಿ ವಿನಿಯೋಗವಾದ ಒಟ್ಟು ಸಮಯ (ಗಂಟೆಗಳ ಅವಧಿ) | 25200 |
| ಜಿ.ಎಸ್.ಟಿ ಪರಿಷತ್ತಿನ ಸಭೆಗಳಲ್ಲಿ ಮತ್ತು ಅಧಿಕಾರಿಗಳ ಸಭೆಗಳಲ್ಲಿ ವಿನಿಯೋಗವಾದ ಅಧಿಕಾರಿಗಳ ಒಟ್ಟು ಸಮಯ (ಗಂಟೆಗಳ ಅವಧಿ) | 28000 |

ಜಿ.ಎಸ್.ಟಿ ಪರಿಷತ್ತಿನ 35ನೇ ಸಭೆಯವರೆಗಿನ ವಿವರಣೆ

- ದಿನಾಂಕ 01.04.2019 ರ ಅನ್ವಯ, ನೋಂದಣಿ ಮತ್ತು ಜಿ.ಎಸ್.ಟಿ ಪಾವತಿಯ ವಿನಾಯಿತಿ ಪಡೆಯಲು ಸೇವೆಗಳ ಪೂರೈಕೆದಾರರಿಗೆ ಅನ್ವಯಿಸುವಂತೆ, ಸಮಗ್ರ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.20 ಲಕ್ಷಕ್ಕೆ ನಿಗದಿ ಪಡಿಸಲಾಗಿದೆ. (ಮಣಿಪುರ, ಮಿಝೋರಾಮ್, ನಾಗಾಲ್ಯಾಂಡ್ ಮತ್ತು ತ್ರಿಪುರ ರಾಜ್ಯಗಳಲ್ಲಿ ₹.10 ಲಕ್ಷ ಪರಿಮಿತಿ).

- ದಿನಾಂಕ 01.04.2019 ರ ಅನ್ವಯ, ನೋಂದಣಿ ಮತ್ತು ಜಿ.ಎಸ್.ಟಿ ಪಾವತಿಯ ವಿನಾಯಿತಿ ಪಡೆಯಲು ಸರಕುಗಳ ಪೂರೈಕೆದಾರರಿಗೆ ಅನ್ವಯಿಸುವಂತೆ, ಸಮಗ್ರ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.40 ಲಕ್ಷಕ್ಕೆ ನಿಗದಿ ಪಡಿಸಲಾಗಿದೆ. (ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಮ್, ನಾಗಾಲ್ಯಾಂಡ್, ಪುದುಚೇರಿ, ಸಿಕ್ಕಿಂ, ತೆಲಂಗಾಣ, ತ್ರಿಪುರ ಮತ್ತು ಉತ್ತರಾ ಖಂಡ ರಾಜ್ಯಗಳಿಗೆ ₹.20 ಲಕ್ಷ ಪರಿಮಿತಿ).

- ಕರಕುಶಲ ಕಾಮಗಾರಿಗೆ ಸಂಬಂಧಿಸಿದಂತೆ, ಅಂತರ್ರಾಜ್ಯ ಪೂರೈಕೆದಾರರು ಮತ್ತು ಸಾಮಾನ್ಯ ತೆ–ರಿಗೆದಾರರು ನೀಡುವ ಪೂರೈಕೆಗಳ ವಾರ್ಷಿಕ ವಹಿವಾಟು ವಿಶೇಷ ವರ್ಗದ ರಾಜ್ಯಗಳಿಗೆ ಅನ್ವಯಿಸುವಂತೆ ₹.10 ಲಕ್ಷ ಮೀರದಿದ್ದರೆ (ಜಮ್ಮು ಕಾಶ್ಮೀರವನ್ನು ಹೊರತು ಪಡಿಸಿ) ಮತ್ತು ಇತರೆ ರಾಜ್ಯಗಳಿಗೆ ಅನ್ವಯಿಸುವಂತೆ ₹. 20 ಲಕ್ಷ ಮೀರದಿದ್ದರೆ, ಅಂತಹ ಪೂರೈಕೆದಾರರಿಗೆ ನೋಂದಣಿಕರಣ ಮತ್ತು ಜಿ.ಎಸ್.ಟಿ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

- ₹.20 ಲಕ್ಷ ಸಮಗ್ರ ವಾರ್ಷಿಕ ವಹಿವಾಟನ್ನು ಮೀರದ ಅಂತರ್ರಾಜ್ಯ ಪೂರೈಗಳನ್ನು ಮಾಡುವ ಈ–ಕಾಮರ್ಸ್ ಆಪರೇಟರ್ ಗಳನ್ನು ಒಳಗೊಂಡಂತೆ ಎಲ್ಲಾ ಪೂರೈಕೆದಾರರಿಗೆ, ಜಿ.ಎಸ್.ಟಿ ನೋಂದಣಿಯಿಂದ ವಿನಾಯಿತಿ ನೀಡಲಾಗಿದೆ.

- ಸ್ವಯಂ ನೋಂದಾಯಿತ ತೆರಿಗೆದಾರರಿಗೆ, ನೋಂದಣಿಯ ದಿನದಿಂದ ಒಂದು ವರ್ಷದ ಅವಧಿಯೊಳಗೆ ನೋಂದಣಿ ರದ್ದತಿಗೆ ಅರ್ಜಿ ಸಲ್ಲಸಲು ಅನುಮತಿ ನೀಡಲಾಗಿದೆ.

- ದಿನಾಂಕ 21.07.2018 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯಲ್ಲಿ, ಎಂ.ಎಸ್.ಎಂ.ಈ ಗಳಿಗೆ ಪೂರಕವಾಗಿ ಕೇಂದ್ರೀಯ ಜಿ.ಎಸ್.ಟಿ ಕಾಯಿದೆ ಮತ್ತು ಸಮಗ್ರ ಜಿ.ಎಸ್.ಟಿ ಕಾಯಿದೆಯಲ್ಲಿ ಕೆಲವು ಮಾರ್ಪಾಟುಗಳನ್ನು ತರಲು ಶಿಫಾರಸು ಗಳನ್ನು ಮಾಡಲಾಗಿದೆ.

- ಈ ಸಂಬಂಧವಾಗಿ ಗಮನಾರ್ಹವಾದ ಶಿಫಾರಸುಗಳು ಈ ಕೆಳಕಂಡಂತೆ ಇವೆ:

  1. ಅಸ್ಸಾಂ, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ , ಮೇಘಾಲಯ, ಸಿಕ್ಕಿಂ ಮತ್ತು ಉತ್ತರಾಖಂಡ ರಾಜ್ಯಗಳಿಗೆ ಅನ್ವಯಿಸುವಂತೆ ನೋಂದಣಿಗೆ ಕನಿಷ್ಠ ವಿನಾಯಿತಿ ಪರಿಮಿತಿಯನ್ನು ₹.10 ಲಕ್ಷದಿಂದ ₹.20 ಲಕ್ಷಕ್ಕೆ ಏರಿಸಲಾಗಿದೆ.

  2. ಒಂದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಿಂದಲೇ ವಿಭಿನ್ನ ಸ್ಥಳಗಳಲ್ಲಿನ ತಮ್ಮ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಬಹು ನೋಂದಣಿಗಳನ್ನು ಪಡೆಯ ಬಹುದು.

  3. ಕೇಂದ್ರ ಜಿ.ಎಸ್.ಟಿ ಕಾಯಿದೆ, 2017 ರ ಸೆಕ್ಷನ್ 52 ರ ಅನ್ವಯ , ಮೂಲದಲ್ಲಿಯೇ ತೆರಿಗೆ ವಸೂಲಿ ಮಾಡವ ಅವಶ್ಯಕತೆ ಇರುವ ಈ–ವಾಣಿಜ್ಯ ಕರ್ಮಿಗಳು ಅನಿವಾರ್ಯವಾಗಿ ನೋಂದಣಿಯನ್ನು ಹೊಂದಿರಬೇಕು.

  4. ನೋಂದಣಿಯನ್ನು ರದ್ದು ಪಡಿಸುವ ಪ್ರಕ್ರಿಯೆಯ ಕಾಲಾವಧಿಯಲ್ಲಿ ನೋಂದಣಿಯನ್ನು ತಾತ್ಕಾಲಿಕವಾಗಿ ತಡೆಯಲು ಅನುಮತಿ ಇರುತ್ತದೆ.

  ಈ ಮೇಲ್ಕಂಡ ಮಾರ್ಪಾಟುಗಳನ್ನು ಕಾನೂನಿನಲ್ಲಿ ಅಳವಡಿಸಲಾಗಿದೆ ಮತ್ತು 01.02.2019 ರ ಅನ್ವಯ ಕಾರ್ಯರೂಪಕ್ಕೆ ತರಲಾಗಿದೆ.

ತೆರಿಗೆ ವಿಸ್ತರಣೆ

| | |
|---|---|
| ಹೊಸ ನೋಂದಣಿಗಳ ಸಂಖ್ಯೆ | 1,22,47,629 |
| ವಲಸೆ ತೆರಿಗೆದಾರರ ಸಂಖ್ಯೆ | 58,48,375 |
| ಸಂಯೋಜಿತ ಡೀಲರ್ ಗಳ ಸಂಖ್ಯೆ | 17,55,832 |
| ₹.5 ಕೋಟಿಗಿಂತ ಕಡಿಮೆ ವಹಿವಾಟು ಇರುವ ತೆ–ರಿಗೆದಾರರ ಶೇಕಡ | 93% |

ದಿನಾಂಕ 15.06.2019

# ಅಧ್ಯಾಯ 2

## ಸಂಯೋಜಿತ ಯೋಜನೆ (Composition Scheme)

ದಿನಾಂಕ 11.06.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 16ನೇ ಸಭೆಯ ಶಿಫಾರಸುಗಳ ಅನ್ವಯ, ಸಂಯೋಜಿತ ಯೋಜನೆಯಡಿಯಲ್ಲಿ ಅರ್ಹತೆ ಹೊಂದಿರುವ ಎಲ್ಲಾ ತೆರಿಗೆದಾರರಿಗೂ ಕನಿಷ್ಠ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.50 ಲಕ್ಷದಿಂದ ₹.75 ಲಕ್ಷಕ್ಕೆ ಏರಿಸಲಾಯಿತು. (ಉತ್ಪಾದಕರಿಗೆ ಅನ್ವಯಿಸುವಂತೆ 2%, ರೆಸ್ಟೋರೆಂಟ್‌ಗಳಿಗೆ ಅನ್ವಯಿಸುವಂತೆ 5%, ವ್ಯಾಪಾರಿಗಳಿಗೆ ಅನ್ವಯಿಸುವಂತೆ 1% ಜಿ.ಎಸ್.ಟಿ ಯಂತೆ).

- ದಿನಾಂಕ 6.10.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 22ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ, 27 ರಾಜ್ಯಗಳಲ್ಲಿ (ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರಾಖಂಡ ವನ್ನು ಒಳಗೊಂಡಂತೆ) ಸಂಯೋಜಿತ ಯೋಜನೆಯಡಿಯಲ್ಲಿ ಅರ್ಹತೆ ಹೊಂದಲು ಕನಿಷ್ಠ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.75 ಲಕ್ಷದಿಂದ ₹.1 ಕೋಟಿಗೆ ಏರಿಸಲಾಗಿದೆ ಮತ್ತು ವಿಶೇಷ ವರ್ಗದ ರಾಜ್ಯಗಳಿಗೆ (ಸಂವಿಧಾನದ ಅನುಚ್ಛೇದ 279 ಏ , ಕಲಮು (4), ಉಪ ಕಲಮು (ಜಿ) ಯಲ್ಲಿ ನಮೂದಿಸಿರುವಂತೆ) ಅನ್ವಯಿಸುವಂತೆ (ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರಾಖಂಡ ವನ್ನು ಹೊರತುಪಡಿಸಿ) ಕನಿಷ್ಠ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.50 ಲಕ್ಷದಿಂದ ₹. 75 ಲಕ್ಷಕ್ಕೆ ಏರಿಸಲಾಗಿದೆ. ಮೇಲ್ಕಂಡ ನಿರ್ಣಯವನ್ನು, ದಿನಾಂಕ 13 ಅಕ್ಟೋಬರ್, 2017 ರ ಅಧಿಸೂಚನೆ ಸಂಖ್ಯೆ 46/2017 Central Tax ಮೂಲಕ ಜಾರಿಗೊಳಿಸಲಾಗಿದೆ.

- ಸಂಯೋಜಿತ ಯೋಜನೆ ಅಡಿಯಲ್ಲಿ ಅರ್ಹತೆ ಪಡೆದಿರುವ ವ್ಯಕ್ತಿಯು, ಜಮೆ, ಸಾಲ, ಮುಂಗಡ ಇತ್ಯಾದಿ ವಿನಾಯಿತಿ ಪಡೆದ ಸೇವೆಗಳನ್ನು ಪೂರೈಸುತ್ತಿದ್ದರೆ, ಅವಕ್ಕೆ ಬಡ್ಡಿ ಇಲ್ಲವೇ ರಿಯಾಯಿತಿ ರೂಪದಲ್ಲಿ ಲಾಭ ಪಡೆದರೆ, ಮಾನ್ಯತೆ ರದ್ದಾಗುವುದಿಲ್ಲ. ಸಂಯೋಜಿತ ಯೋಜನೆ ಅಡಿಯಲ್ಲಿ ಸಮಗ್ರ ವಹಿವಾಟಿನ ಅರ್ಹತೆ ಲೆಕ್ಕಾಚಾರಕ್ಕೆ, ಜಮೆ, ಸಾಲ, ಮುಂಗಡ ಇತ್ಯಾದಿ ವಿನಾಯಿತಿ ಪಡೆದ ಸೇವೆಗಳ ಒಟ್ಟು ಲಾಭವನ್ನು , ಬಡ್ಡಿ / ರಿಯಾಯಿತಿ ರೂಪದಲ್ಲಿ ಒಳಗೊಂಡಂತೆ ಪಡೆದ ಲಾಭವನ್ನು ಪರಿಗಣಿಸಲಾಗುವುದಿಲ್ಲ. ಈ ಸೌಲಭ್ಯವನ್ನು ದಿನಾಂಕ 13.10.2017 ರ ಅಧಿಸೂಚನೆ ಸಂಖ್ಯೆ 1/2017 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ.

- ದಿನಾಂಕ 10.11.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 23ನೇ ಸಭೆಯ ಶಿಫಾರಸುಗಳ ಅನ್ವಯ, ಸಂಯೋಜಿತ ಯೋಜನೆ ಅಡಿಯಲ್ಲಿ ಬರುವ ಉತ್ಪಾದಕರು ಮತ್ತು ವ್ಯಾಪಾರಿಗಳು, ಸಮನಾಗಿ 1% (ಕೇಂದ್ರ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮೊತ್ತ) ದರದಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ. ಈ ಸೌಲಭ್ಯವನ್ನು ದಿನಾಂಕ 1 ಜನವರಿ, 2018 ರ ಅಧಿಸೂಚನೆ ಸಂಖ್ಯೆ 1/2018 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ. (ರೆಸ್ಟೋರಂಟ್‌ಗಳಿಗೆ ಅನ್ವಯಿಸುವಂತೆ 5% ದರದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ.)

- ದಿನಾಂಕ 21 ಜುಲೈ, 2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯ ಶಿಫಾರಸುಗಳ ಅನ್ವಯ, ಸಂಯೋಜಿತ ಯೋಜನೆಯಡಿಯಲ್ಲಿ ಅರ್ಹತೆ ಹೊಂದಲು ಕನಿಷ್ಠ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹. 1 ಕೋಟಿ ಯಿಂದ ₹.1.5 ಕೋಟಿಗೆ ಏರಿಸಲಾಗಿದೆ. (ರೆಸ್ಟೋರೆಂಟ್‌ಗೆ ಸಂಬಂಧಿಸಿದ ಸೇವೆಗಳನ್ನು ಹೊರತುಪಡಿಸಿ) ಸಂಯೋಜಿತ ಯೋಜನೆಯ ಡೀಲರ್‌ಗಳು, ತಮ್ಮ ಹಿಂದಿನ ವರ್ಷದ ವಾರ್ಷಿಕ ವಹಿವಾಟಿನ 10% ಮೊತ್ತ ಅಥವಾ ₹.5 ಕೋಟಿ, ಇವೆರಡರಲ್ಲಿ ಯಾವುದು ಹೆಚ್ಚೋ , ಆ ಮೊತ್ತಕ್ಕೆ ಸಮನಾದ ಸೇವಾ ಪೂರೈಕೆಗಳನ್ನು ಮಾಡಲು ಈ ಯೋಜನೆ ಅಡಿಯಲ್ಲಿ ಅನುಮತಿ ನೀಡಲಾಗುತ್ತದೆ. ಈ ಕ್ರಮವನ್ನು ಕೇಂದ್ರೀಯ ಜಿ.ಎಸ್.ಟಿ (ಪರಿಶೋಧನೆ) ಕಾಯಿದೆ, 2018 ರಲ್ಲಿ ಅಳವಡಿಸಲಾಗಿದೆ ಮತ್ತು ದಿನಾಂಕ 1.2.2019 ರ ಅನ್ವಯ ಜಾರಿಗೊಳಿಸಲಾಗಿದೆ.

- ದಿನಾಂಕ 10.01.2019 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 32ನೇ ಸಭೆಯ ಶಿಫಾರಸುಗಳ ಅನ್ವಯ, ಸಂಯೋಜಿತ ಯೋಜನೆಯಡಿಯಲ್ಲಿ ಅರ್ಹತೆ ಹೊಂದಲು ಸರಕು ಪೂರೈಕೆದಾರರ ಹಿಂದಿನ ವರ್ಷದ ಕನಿಷ್ಠ ವಾರ್ಷಿಕ ವಹಿವಾಟಿನ ಪರಿಮಿತಿಯನ್ನು ₹.1.5 ಕೋಟಿಗೆ ಏರಿಸಲಾಗಿದೆ. ವಿಶೇಷ ವರ್ಗದ ರಾಜ್ಯಗಳಾದ ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಮ್, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರ ಮತ್ತು ಉತ್ತರಾ ಖಂಡ ರಾಜ್ಯಗಳಿಗೆ ₹.75 ಲಕ್ಷ ಪರಿಮಿತಿಯನ್ನು ನಿಗದಿ ಪಡಿಸಲಾಗಿದೆ. ಸಂಯೋಜಿತ ಯೋಜನೆಯ ಅಡಿಯಲ್ಲಿ ತೆರಿಗೆ ದಾಯಿತ್ವವನ್ನು ಸರಳಗೊಳಿಸಲಾಗಿದೆ, ಈ ತೆರಿಗೆದಾರರು ವಾರ್ಷಿಕವಾಗಿ ಒಂದು ವಿವರಣೆಯನ್ನು ಸಲ್ಲಿಸಬೇಕು ಮತ್ತು ತ್ರೈಮಾಸಿಕ ರೂಪದಲ್ಲಿ (ಸರಳ ಘೋಷಣೆ ಯೊಂದಿಗೆ) ತೆರಿಗೆ ಪಾವತಿ ಮಾಡಬೇಕು. ಈ ಸೌಲಭ್ಯವನ್ನು ದಿನಾಂಕ 1.04.2019 ರ ಅಧಿಸೂಚನೆ ಸಂಖ್ಯೆ 14/2019 Central Tax ಮೂಲಕ ಜಾರಿಗೊಳಿಸಲಾಗಿದೆ.

- ಇಲ್ಲಿಯವರೆಗೂ ಸಂಯೋಜಿತ ಯೋಜನೆಯಡಿಯಲ್ಲಿ ಅರ್ಹತೆ ಪಡೆಯದ ಸೇವಾ ಪೂರೈಕೆದಾರ–ರಿಗಾಗಿಯೇ ಹೊಸದಾಗಿ ಸಂಯೋಜಿತ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಕನಿಷ್ಠ ₹.50 ಲಕ್ಷದವರೆಗೂ ವಾರ್ಷಿಕ ವಹಿವಾಟು ಹೊಂದಿರುವ ಸೇವಾ ಪೂರೈಕೆದಾರರು 6% ತೆರಿಗೆ ದರದಲ್ಲಿ ಸೇವೆಗಳ ಪೂರೈಕೆ ಮಾಡಿ, ಈ ಯೋಜನೆಯ ಲಾಭ ಪಡೆಯ ಬಹುದು. ಈ ತೆರಿಗೆದಾರರು ವಾರ್ಷಿಕವಾಗಿ ಒಂದು ವಿವರಣೆಯನ್ನು ಸಲ್ಲಿಸಬೇಕು ಮತ್ತು ತ್ರೈಮಾಸಿಕ ರೂಪದಲ್ಲಿ (ಸರಳ ಘೋಷಣೆ ಯೊಂದಿಗೆ) ತೆರಿಗೆ ಪಾವತಿ ಮಾಡಬೇಕು. ಈ ಸೌಲಭ್ಯವನ್ನು ದಿನಾಂಕ 1.04.2019 ರ ಅಧಿಸೂಚನೆ ಸಂಖ್ಯೆ 2/2019 Central Tax ಮೂಲಕ ಜಾರಿಗೊಳಿಸಲಾಗಿದೆ.

  ಸಂಯೋಜಿತ ಯೋಜನೆಯಡಿಯಲ್ಲಿ ಕಾರ್ಯನಿರತ ತೆರಿಗೆದಾರರು, 'ಸ್ವ–ನಿಗದಿತ ತೆರಿಗೆ' ಯನ್ನು ತ್ರೈಮಾಸಿಕ ರೂಪದಲ್ಲಿ ಆಯಾ ತ್ರಿಮಾಸದ ನಂತರದ ತಿಂಗಳಿನ 18ನೇ ತಾರೀಖಿನೊಳಗೆ ಪಾವತಿಸುವ ಅನುಮತಿ ನೀಡಲಾಗಿದೆ. ಈ ಸೌಲಭ್ಯವನ್ನು ದಿನಾಂಕ 1.04.2019 ರ ಅಧಿಸೂಚನೆ ಸಂಖ್ಯೆ 20/2019 Central Tax ಮೂಲಕ ಜಾರಿಗೊಳಿಸಲಾಗಿದೆ.

## ಅಧ್ಯಾಯ 3

## ವಿವರಣೆಗಳನ್ನು ಸಲ್ಲಿಸುವ ಕ್ರಮ

ದಿನಾಂಕ 10.11.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 23ನೇ ಸಭೆಯ ನಿರ್ಣಯದಂತೆ, ಹಿಂದಿನ ಹಣಕಾಸು ವರ್ಷದ ವಾರ್ಷಿಕ ವಹಿವಾಟಿನ ಮೊತ್ತ ₹.1.5 ಕೋಟಿಯೊಳಗಿದ್ದರೆ, ಅಂತಹ ತೆರಿಗೆದಾರರು, ತ್ರೈಮಾಸಿಕ ರೂಪದಲ್ಲಿ ವಿವರಣೆಗಳನ್ನು ಸಲ್ಲಿಸಬಹುದು. ಈ ಸೌಲಭ್ಯವನ್ನು ದಿನಾಂಕ 15 ನವಂಬರ್,2017 ರ ಅಧಿಸೂಚನೆ ಸಂಖ್ಯೆ 57/2017 Central Tax ಮೂಲಕ ಜಾರಿಗೊಳಿಸಲಾಗಿದೆ.

- ದಿನಾಂಕ 21.07.2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯಲ್ಲಿ, ಹಿಂದಿನ ಹಣಕಾಸು ವರ್ಷದ ವಾರ್ಷಿಕ ವಹಿವಾಟಿನ ಮೊತ್ತ ₹.5 ಕೋಟಿಯವರೆಗೂ ಇದ್ದರೆ, ಅಂತಹ ತೆರಿಗೆದಾರರು, ತ್ರೈಮಾಸಿಕ ರೂಪದಲ್ಲಿ ವಿವರಣೆಗಳನ್ನು ಸಲ್ಲಿಸುವ ಸೌಲಭ್ಯವನ್ನು ಕಲ್ಪಿಸಲು, ಜಿ.ಎಸ್.ಟಿ ಕಾನೂನಿನ ಅಡಿಯಲ್ಲಿ ಪರಿಶೋಧನೆ ಮಾಡಲು ಶಿಫಾರಸು ಮಾಡಲಾಗದೆ. ಹಾಗೆಯೇ ಭವಿಷ್ಯದಲ್ಲಿ ಹೊಸದಾಗಿ ಸರಳ ರೂಪದಲ್ಲಿ ವಿವರಣೆ ಸಲ್ಲಿಸುವ ಪದ್ಧತಿಯನ್ನು ಕಾನೂನಿನಲ್ಲಿ ಅಳವಡಿಸಲಾಗುವುದು. ಪ್ರಸ್ತಾಪಿತ ಹೊಸ, ಸರಳ ವಿವರಣೆ ಸಲ್ಲಿಸುವ ಪದ್ಧತಿಯನ್ನು ಅಕ್ಟೋಬರ್ 2019 ರಿಂದ ಕ್ರಮಬದ್ಧವಾಗಿ ಹಂತ ಹಂತವಾಗಿ ಅಳವಡಿಸಲಾಗುವುದು.

- ದಿನಾಂಕ 10.01.2019 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 32ನೇ ಸಭೆಯ ನಿರ್ಣಯಗಳ ಅನ್ವಯ, ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ದಾಯಿತ್ವವನ್ನು ಸರಳಗೊಳಿಸಲಾಗಿದೆ, ಈ ತೆರಿಗೆದಾರರು ವಾರ್ಷಿಕವಾಗಿ ಒಂದು ವಿವರಣೆಯನ್ನು ಸಲ್ಲಿಸಬೇಕು ಮತ್ತು ತ್ರೈಮಾಸಿಕ ರೂಪದಲ್ಲಿ (ಸರಳ ಘೋಷಣೆ ಯೊಂದಿಗೆ) ತೆರಿಗೆ ಪಾವತಿ ಮಾಡಬೇಕು. ಈ ಸೌಲಭ್ಯವನ್ನು ದಿನಾಂಕ 1.04.2019 ರ Central Tax ಅಧಿಸೂಚನೆ ಸಂಖ್ಯೆ 14/2019 ರ ಅನ್ವಯ ಜಾರಿಗೊಳಿಸಲಾಗಿದೆ.

ವಿವರಣೆಗಳನ್ನು ಸಲ್ಲಿಸಲು ವಿಳಂಬವಾದರೆ ಪಾವತಿಸಬೇಕಾದ ಶುಲ್ಕದಲ್ಲಿ ರಿಯಾಯಿತಿ:

- ದಿನಾಂಕ 10.11.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 23ನೇ ಸಭೆಯಲ್ಲಿ, ಜಿ.ಎಸ್.ಟಿ.ಆರ್–3ಬಿ ಪ್ರಾರೂಪದಲ್ಲಿ ಸಲ್ಲಿಸುವ ವಿವರಣೆಯನ್ನು, ತಡವಾಗಿ ಸಲ್ಲಿಸಿದರೆ, ದಿನಕ್ಕೆ ₹.200/–ರಂತೆ ಪಾವತಿಸಬೇಕಿದ್ದ ಶುಲ್ಕವನ್ನು ದಿನಾಂಕ 15 ನವಂಬರ್, 2017 ರ ಅಧಿಸೂಚನೆ ಸಂಖ್ಯೆ 64/2017 Central Tax ಮೂಲಕ ಕಡಿತಗೊಳಿಸಲಾಗಿದೆ. ಅಕ್ಟೋಬರ್, 2017 ರ ಅನ್ವಯ, ನೋಂದಾಯಿತ ತೆರಿಗೆದಾರರ ಮೇಲೆ ಯಾವುದೇ ತಿಂಗಳಲ್ಲಿ ತೆರಿಗೆ ಬಾಧ್ಯತೆ ಇಲ್ಲದಿದ್ದರೆ, ಅಂತಹವರು, ತಡವಾಗಿ ಸಲ್ಲಿಸುವ ವಿವರಣೆಗೆ ಸಂಬಂಧಿಸಿದಂತೆ ದಿನಕ್ಕೆ ₹.20/– ರಂತೆ (ಕೇಂದ್ರ ಜಿ.ಎಸ್.ಟಿ. ಶುಲ್ಕ ₹.10/–ಮತ್ತು ರಾಜ್ಯ ಜಿ.ಎಸ್.ಟಿ. ಶುಲ್ಕ ದಿನಕ್ಕೆ ₹.10 /– ರಂತೆ) , ಗರಿಷ್ಟ ಮೊತ್ತ ₹.5000/– ದ ವರೆಗೂ ಶುಲ್ಕ ಪಾವತಿಸಬೇಕಾಗುತ್ತದೆ. ಬೇರೆ ಎಲ್ಲಾ ಸಂದರ್ಭಗಳಲ್ಲೂ , ಅಕ್ಟೋಬರ್, 2017 ರ ಅನ್ವಯ, ನೋಂದಾಯಿತ ತೆರಿಗೆದಾರರು, ತಡವಾಗಿ ಸಲ್ಲಿಸುವ ವಿವರಣೆಗೆ ಸಂಬಂಧಿಸಿದಂತೆ ದಿನಕ್ಕೆ ₹.50/– ರಂತೆ (ಕೇಂದ್ರ ಜಿ.ಎಸ್.ಟಿ. ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ ದಿನಕ್ಕೆ ₹.25/–), ಗರಿಷ್ಟ ಮೊತ್ತ ₹.5000/– ದ ವರೆಗೂ ಶುಲ್ಕ ಪಾವತಿಸಬೇಕಾಗುತ್ತದೆ.

- ದಿನಾಂಕ 18.01.2018 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 25ನೇ ಸಭೆಯಲ್ಲಿ , ತಡವಾಗಿ ಸಲ್ಲಿಸುವ ವಿವರಣೆಗಳಿಗೆ ಸಂಬಂಧಸಿದಂತೆ ಶುಲ್ಕವನ್ನು ಕಡಿತಗೊಳಿಸಲಾಗಿದೆ, ಜಿ.ಎಸ್.ಟಿ.ಆರ್–1 (ಪೂರೈಕೆ ವಿವರಣೆಗಳು) ಪ್ರಾರೂಪದಲ್ಲಿ ಸಲ್ಲಿಸುವ ವಿವರಣೆಯನ್ನು, ತಡವಾಗಿ ಸಲ್ಲಿಸಿದರೆ, ನೋಂದಾಯಿತ ತೆರಿಗೆದಾರರು ದಿನಕ್ಕೆ ₹.50/–ರಂತೆ (ಕೇಂದ್ರ ಜಿ.ಎಸ್.ಟಿ. ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ ದಿನಕ್ಕೆ ₹.25/–) ಮತ್ತು ಶೂನ್ಯ ವಿವರಣೆ ಹೊಂದಿದವರು ದಿನಕ್ಕೆ ₹.20/– (ಕೇಂದ್ರ ಜಿ.ಎಸ್.ಟಿ. ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ ದಿನಕ್ಕೆ ₹.10/–) ರಂತೆ ಶುಲ್ಕವನ್ನು ಪಾವತಿಸಬೇಕು.

- ಜುಲೈ, 2017 ರಿಂದ ಸೆಪ್ಟೆಂಬರ್, 2018 ರ ವರೆಗಿನ ತಿಂಗಳುಗಳು ಅಥವಾ ತ್ರೈ ಮಾಸದ ಅವಧಿಯಲ್ಲಿ ಪೂರೈಸಿದ ಉತ್ಪಾದನೆಗಳು /ಸೇವೆಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ.ಆರ್–1 (ಪೂರೈಕೆ ವಿವರಣೆಗಳು) ಪ್ರಾರೂಪದಲ್ಲಿ ವಿವರಣೆಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಿರದಿದ್ದರೂ ಸಹ 02.12.2018 ರಿಂದ 31.3.2019 ರ ನಡುವಣ ಅವಧಿಯಲ್ಲಿ ಈ ವಿವರಣೆಗಳನ್ನು ಜಿ. ಎಸ್.ಟಿ.ಆರ್–1 ಪ್ರಾರೂಪದಲ್ಲಿ ಸಲ್ಲಿಸಿದ್ದರೆ, ಅಂತಹ ನೋಂದಾಯಿತ ವ್ಯಕ್ತಿಳಿಗೆ, ಈ ಮೇಲ್ಕಂಡ ಕಾಯಿದೆ ಯ ಸೆಕ್ಷನ್ 47 ರ ಅನ್ವಯ ವಿಲಂಬಿತ ಶುಲ್ಕದ ಪೂರ್ಣ ವಿನಾಯಿತಿ ಕೊಡಲಾಗಿದೆ. ಈ ಸೌಲಭ್ಯವನ್ನು ದಿನಾಂಕ 31.12.2018 ರ ಅಧಿಸೂಚನೆ ಸಂಖ್ಯೆ 75/2018 Central Tax ರ ಅನ್ವಯ ಜಾರಿಗೊಳಿಸಲಾಗಿದೆ.

- ಜುಲೈ, 2017 ರಿಂದ ಸೆಪ್ಟೆಂಬರ್, 2018 ರ ವರೆಗಿನ ತಿಂಗಳುಗಳು ಅಥವಾ ತ್ರೈ ಮಾಸದ ಅವಧಿಯಲ್ಲಿ ಪೂರೈಸಿದ ಉತ್ಪಾದನೆಗಳು /ಸೇವೆಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ.ಆರ್–3ಬಿ (ಪೂರೈಕೆ ವಿವರಣೆಗಳು) ಪ್ರಾರೂಪದಲ್ಲಿ ವಿವರಣೆಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಿರದಿದ್ದರೂ ಸಹ 02.12.2018 ರಿಂದ 31.3.2019 ರ ನಡುವಣ ಅವಧಿಯಲ್ಲಿ ಈ ವಿವರಣೆಗಳನ್ನು ಜಿ.ಎಸ್.ಟಿ.ಆರ್–3ಬಿ ಪ್ರಾರೂಪದಲ್ಲಿ ಸಲ್ಲಿಸಿದ್ದರೆ, ಅಂತಹ ನೋಂದಾಯಿತ ವ್ಯಕ್ತಿಳಿಗೆ, ಈ ಮೇಲ್ಕಂಡ ಕಾಯಿದೆ ಯ ಸೆಕ್ಷನ್ 47 ರ ಅನ್ವಯ ವಿಲಂಬಿತ ಶುಲ್ಕದ ಪೂರ್ಣ ವಿನಾಯಿತಿ ಕೊಡಲಾಗಿದೆ.ಈ ಸೌಲಭ್ಯವನ್ನು ದಿನಾಂಕ 31.12.2018 ರ ಅಧಿಸೂಚನೆ ಸಂಖ್ಯೆ 76/2018 Central Tax ರ ಅನ್ವಯ ಜಾರಿಗೊಳಿಸಲಾಗಿದೆ.

# ಅಧ್ಯಾಯ 4

## ಹೂಡುವಳಿ ತೆರಿಗೆ ಜಮೆಯ ವ್ಯಾಪ್ತಿ

ಹೂಡುವಳಿ ತೆರಿಗೆ ಜಮೆ ಯ (ಉತ್ಪಾದನೆಯಲ್ಲಿ ಒಳಗೊಂಡ ವಸ್ತುಗಳಿಗೆ ತಗುಲುವ ತೆರಿಗೆ ಮೊತ್ತದ ಜಮೆ) ವ್ಯಾಪ್ತಿಯನ್ನು ವಿಸ್ತರಿಸಲಾಗಿದ್ದು ಈ ಕೆಳಕಂಡವುಗಳಿಗೆ ಲಭ್ಯವಿರುತ್ತದೆ.

1) ಮೋಟಾರು ವಾಹನಗಳು (ಚಾಲಕನ ಸಹಿತ 13 ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ಕುಳಿತುಕೊಳ್ಳ ಬಹುದಾದುದು), ಇಂತಹ ಮೋಟಾರು ವಾಹನಗಳನ್ನು ಸಾಗಿಸಲು ಮತ್ತು ಯಾತ್ರಿಕರನ್ನು ಕೊಡೊಯ್ಯಲು ಬಳಸುವ ಹಡಗುಗಳು ಮತ್ತು ವಿಮಾನಗಳು, ಇಲ್ಲವೇ ಇಂತಹ ವಾಹನಗಳನ್ನು ಚಲಾಯಿಸಲು ನೀಡುವ ತರಬೇತಿಗೆ ಉಪಯೋಗಿಸುವ ಮೋಟಾರು ವಾಹನಗಳು;

2) ಮೇಲೆ (ii) ಸಂದರ್ಭಿತ ಮೋಟಾರು ವಾಹನಗಳು, ಹಡಗುಗಳು ಮತ್ತು ವಿಮಾನಗಳನ್ನು ಅವುಗಳನ್ನು ನಮೂದಿಸಲಾದ ಪ್ರಯೋಜನಗಳಿಗೆ ಉಪಯೋಗಿಸಿದರೆ ಮತ್ತು ಈ ಸೇವೆಗಳನ್ನು ತೆರಿಗೆದಾರರು ಪಡೆದರೆ, ಅಂತಹ ವಾಹನಗಳ ಸಾಮಾನ್ಯ ವಿಮೆ, ರಿಪೇರಿ ಮತ್ತು ನಿರ್ವಹಣೆ ಸೇವೆಗಳಿಗೆ ಜಮೆ ಲಭ್ಯವಿರುತ್ತದೆ.

3) ತಾತ್ಕಾಲಿಕವಾಗಿ ಜಾರಿಯಲ್ಲಿರುವ ಕಾನೂನಿನ ಚೌಕಟ್ಟಿನಲ್ಲಿ, ಉದ್ಯಮಿಯು ತನ್ನ ನೌಕರರಿಗೆ ಅನಿವಾರ್ಯವಾಗಿ ಒದಗಿಸುವ ಸರಕು ಮತ್ತು ಸೇವೆಗಳ ಪೂರೈಕೆಗಳ ಮೇಲೆ ಹೂಡುವಳಿ ತೆರಿಗೆ ಜಮೆ ಲಭ್ಯವಾಗುತ್ತದೆ.

ಈ ಕ್ರಮಗಳನ್ನು ಕೇಂದ್ರೀಯ ಸರಕು ಮತ್ತು ಸೇವೆ ತೆರಿಗೆ (ಪರಿಷ್ಕೃತ) ಕಾಯಿದೆ, 2018ರ ಅಡಿಯಲ್ಲಿ 01.02.2019ರ ಅನ್ವಯ ಜಾರಿಗೆ ತರಲಾಗಿದೆ.

ತೆರಿಗೆದಾರರ ಸೌಲಭ್ಯಕ್ಕಾಗಿ ಹಣಕಾಸು ವರ್ಷ 2017–18 ರಲ್ಲಿ ಜಾರಿ ಮಾಡಿದ ಇನ್ವಾಯ್ಸ್ ಗಳು ಇಲ್ಲವೇ ಡೆಬಿಟ್ ನೋಟ್ ಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ಪಡೆಯುವ ಕೊನೇ ದಿನಾಂಕವನ್ನು ಮುಂದೂಡಲಾಗಿದ್ದು, ಈ ಸಂಬಂಧ ಕಠಿನತೆ ನಿವಾರಣಾ ಆದೇಶವನ್ನು ಜಾ–ರಿಗೊಳಿಸಲಾಗಿದೆ.

# ಅಧ್ಯಾಯ 5

## ರಫ್ತು

ವಿದೇಶಿ ಆಮದು ಮತ್ತು ದೇಶದೊಳಗೇ ಖರೀದಿಸುವ ಕಚ್ಚಾ ಸಾಮಗ್ರಿಗಳಿಗೆ ಸಂಬಂಧಿಸಿದಂತೆ, ಮುಂಗಡ ಪ್ರಾಧಿಕರಿಸುವ ಪ್ರಕ್ರಿಯೆ (ಏಏ) / ಬಂಡವಾಳ ಸರಕುಗಳ ರಫ್ತಿಗೆ ಪ್ರೋತ್ಸಾಹ (ಈಪಿಸಿಜಿ)/ 100% ರಫ್ತಿಗೆ ಮೀಸಲಾದ ಘಟಕಗಳು (ಈಓಯು) ಇತ್ಯಾದಿ ಯೋಜನೆಗಳನ್ನು ವಿಸ್ತರಿಸಲಾಗಿದೆ. ಏಏ, ಈಪಿಸಿಜಿ, ಈಓಯು ಹೊಂದಿರುವವರು, ಆಮದು ವಸ್ತುಗಳ ಮೇಲೆ ಐ.ಜಿ.ಎಸ್.ಟಿ, ಉಪಕರ ಇತ್ಯಾದಿಯನ್ನು ಪಾವತಿಸುವ ಅಗತ್ಯವಿಲ್ಲ. ಏಏ, ಈಪಿಸಿಜಿ, ಈಓಯು ಘಟಕಗಳನ್ನು ಹೊಂದಿರುವವರಿಗೆ ಒದಗಿಸಲಾದ ದೇಶೀಯ ಪೂರೈಕೆಗಳನ್ನು ಕೇಂದ್ರೀಯ ಜಿ.ಎಸ್.ಟಿ / ರಾಜ್ಯ ಜಿ.ಎಸ್.ಟಿ ಕಾಯಿದೆಯ ಸೆಕ್ಷನ್ 147 ರ ಅಡಿಯಲ್ಲಿ , ರಫ್ತು ಎಂದು ಪರಿಗಣಿಸಲಾಗುವುದು, ದಿನಾಂಕ 18.10.2017 ರ ಅಧಿಸೂಚನೆ ಸಂಖ್ಯೆ.48/2017 Central Tax ಮೂಲಕ , ಅಂತಹ ಪೂರೈಕೆಗಳಿಗೆ ಸಂಬಂಧಿಸಿದಂತೆ ತೆರಿಗೆ ಮರು ಪಾವತಿಯನ್ನು ಪೂರೈಕೆದಾರರಿಗೆ ಅಥವಾ ಸರಕು ಪಡೆಯುವವರಿಗೆ ಕೊಡಲಾಗುವುದು.

ನಿಭಾಯಿಸಲಾದ ಜಿ.ಎಸ್.ಟಿ ಮರುಪಾವತಿ

| ಮರುಪಾವತಿ | ದಾವೆಗಳ ಸಂಖ್ಯೆ | ಜುಲೈ 2017 ರಿಂದ ಮೇ, 2019 ಕೋಟಿಗಳಲ್ಲಿ ಮೊತ್ತ |
|---|---|---|
| ಒಟ್ಟು ಮರುಪಾವತಿ (ಸಿ.ಜಿ.ಎಸ್‌ಟಿ+ ಎಸ್.ಜಿ.ಎಸ್‌ಟಿ+ ಯೂ.ಜಿ.ಎಸ್.ಟಿ+ ಉಪಕರ+ಐ.ಜಿ.ಎಸ್.ಟಿ | 25,74,452 | 1,54,828 |

ದಿನಾಂಕ 23.06.2019 ರ ಅನ್ವಯ

- ರಫ್ತು ವ್ಯಾಪಾರಿಗಳು ರಫ್ತು ಮಾಡುವ ಸಲುವಾಗಿ, ತೆರಿಗೆಗೆ ಅರ್ಹ ಸರಕುಗಳನ್ನು ನೋಂದಾಯಿತ ಪೂರೈಕೆದಾರರಿಂದ ಪಡೆದರೆ, ಅಂತಹ ಪೂರೈಕೆಗಳ ಮೇಲೆ 0.1% ದರದಲ್ಲಿ ಜಿ.ಎಸ್.ಟಿ ಪಾವತಿಸಬೇಕು, ಇದರಿಂದ ರಫ್ತು ವ್ಯಾಪಾರಿಗಳಿಗೆ ಕಾಮಗಾರಿ ಬಂಡವಾಳ ತಡೆಯನ್ನು ಕಡಿತಗೊಳಿಸಿದಂತಾಗುತ್ತದೆ.
- ದಿನಾಂಕ 21.07.2018 ರಂದು ನಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯಲ್ಲಿ ಈ ಕೆಳಕಂಡ ಶಿಫಾರಸುಗಳನ್ನು ಮಾಡಲಾಗಿದೆ :

    1) ಭಾರತೀಯ ರಿಸರ್ವ್ ಬ್ಯಾಂಕ್ ಯಿಂದ ಅನುಮತಿ ಇದ್ದಲ್ಲಿ, ಸೇವಾ ಪೂರೈಕೆಗೆ ಸಂಬಂಧಿಸಿದಂತೆ ಭಾರತೀಯ ಮುದ್ರೆ ರುಪಾಯಿಗಳಲ್ಲಿ ಮಾಡಲಾದ ಪಾವತಿಯನ್ನು ಕೂಡ ರಫ್ತು ಎಂದು ಪರಿಗಣಿಸಲಾಗುವುದು.

    2) ಬಿಡಿ ಕಾಮಗಾರಿಗೆ ಸಂಬಂಧಿಸಿದಂತೆ, ಸರಕುಗಳ ಸಂಸ್ಕರಣ ಇಲ್ಲವೇ ಅನ್ಯಪ್ರಕ್ರಿಯೆಗಾಗಿ ತಾತ್ಕಾಲಿಕವಾಗಿ ಭಾರತಕ್ಕೆ ಆಮದು ಮಾಡಿಕೊಂಡು ಅವುಗಳನ್ನು ಅನ್ಯಥಾ ಬಳಸದೇ ರಫ್ತು ಮಾಡಿದ ಸಂದರ್ಭದಲ್ಲಿ ಅಂತಹ ಪೂರೈಕೆಯ ಸ್ಥಳವನ್ನು ವಿದೇಶವೆಂದೇ ಪರಿಗಣಿಸಲಾಗುವುದು.

- ಮರುಪಾವತಿಗೆ ಅರ್ಜಿಯನ್ನು ಸಲ್ಲಿಸುವಾಗಲೇ ಅದಕ್ಕೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು / ಇನ್‌ವಾಯ್ಸ್ ಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮ ಮುಖೇಣ ಸಾಮಾನ್ಯ ಪೋರ್ಟಲ್‌ನಲ್ಲಿ ಜಿ.ಎಸ್.ಟಿ. ಆರ್. ಎಫ್.ಡಿ –01ಏ ಪ್ರಾರೂಪ ದಲ್ಲಿ ಸಲ್ಲಿಸ ಬೇಕು, ಇದರಿಂದ ತೆರಿಗೆದಾರರು ಮರುಪಾವತಿ ಅರ್ಜಿಯನ್ನು ಸಲ್ಲಿಸಲು ಸ್ವತಃ ತೆರಿಗೆ ಕಾರ್ಯಾಲಯಕ್ಕೆ ಭೇಟಿ ಕೊಡುವ ಅವಶ್ಯಕತೆ ಇರುವುದಿಲ್ಲ.

## ಅಧ್ಯಾಯ 6

## ತೆರಿಗ ಪಾವತಿಕರಣ

ಸರಕುಗಳನ್ನು ಪೂರೈಕೆ ಮಾಡುವ ನೋಂದಾಯಿತ ಪೂರೈಕೆದಾರರು, ಇನ್ವಾಯ್ಸ್ ಜಾರಿಗೊಳಿಸುವಾಗಲೇ ತೆರಿಗೆ ಪಾವತಿಸಬೇಕು, ಮುಂಗಡವನ್ನು ಪಡೆಯುವ ಸಮಯದಲ್ಲಿ ಅಲ್ಲ. ಈ ಸೌಲಭ್ಯವನ್ನು ದಿನಾಂಕ 15 ನವಂಬರ್, 2017 ರ ಅಧಿಸೂಚನೆ ಸಂಖ್ಯೆ 66/2017 Central Tax ಮೂಲಕ ಜಾರಿಗೊಳಿಸಿ ಕಾರ್ಯರೂಪಕ್ಕೆ ತರಲಾಗಿದೆ.

- ಕೇಂದ್ರೀಯ ಜಿ.ಎಸ್.ಟಿ ಕಾಯಿದೆ, 2017 ರ ಸೆಕ್ಷನ್ 9, ಉಪ ಸೆಕ್ಷನ್ (4) ಅನ್ವಯ ಮತ್ತು ಸಮಗ್ರ ಜಿ.ಎಸ್.ಟಿ ಕಾಯಿದೆ, 2017 ರ ಸೆಕ್ಷನ್ 5, ಉಪ ಸೆಕ್ಷನ್ (4) ಅನ್ವಯ ಹಾಗೂ ಕೇಂದ್ರಾಡಳಿತ ಪ್ರದೇಶ ಜಿ.ಎಸ್.ಟಿ ಕಾಯಿದೆ, 2017 ರ ಸೆಕ್ಷನ್ 7, ಉಪ ಸೆಕ್ಷನ್ (4) ಅನ್ವಯ ರಿವರ್ಸ್ ಚಾರ್ಜ್ (ವ್ಯತಿರಿಕ್ತ ತೆರಿಗೆ ಪದ್ಧತಿ) ಪ್ರಣಾಲಿಕೆಯ ಸೌಲಭ್ಯಗಳನ್ನು ಮಾರ್ಪಾಟು ಮಾಡಲಾಗಿದ್ದು, ನಿರ್ದಿಷ್ಟವಾಗಿ ನಮೂದಿಸಲ್ಪಟ್ಟ ಕೆಲವು ಸರಕುಗಳು ಅಥವಾ ಸೇವೆಗಳು ಇಲ್ಲವೇ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ರಿವರ್ಸ್ ಚಾರ್ಜ್ ಪ್ರಣಾಲಿಕೆಯಲ್ಲಿ ತೆರಿಗೆ ಪಾವತಿಸಲು , ಪ್ರತ್ಯೇಕವಾದ ವ್ಯಕ್ತಿವರ್ಗವನ್ನು ಅಧಿಸೂಚಿಸಲು ಸರಕಾರವು ಸಶಕ್ತವಾಗಿರುತ್ತದೆ. ಈ ಸಂಬಂಧದಲ್ಲಿ ಯಾವುದೇ ಅಧಸೂಚನೆಯನ್ನೂ ಇನ್ನೂ ಜಾ–ರಿಗೊಳಿಸಿಲ್ಲ.

# ಅಧ್ಯಾಯ 7

## ಇತರೆ ಬದಲಾವಣೆಗಳು

- ದಿನಾಂಕ 21 ಜುಲೈ, 2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯಲ್ಲಿ, ಎಂ.ಎಸ್.ಎಂ.ಈ ವ್ಯಾಪಾರ ವರ್ಗಕ್ಕೆ ಪೂರಕವಾಗಿ ಕೇಂದ್ರೀಯ ಜಿ.ಎಸ್.ಟಿ ಕಾಯಿದೆ, 2017 ಮತ್ತು ಸಮಗ್ರ ಜಿ.ಎಸ್.ಟಿ ಕಾಯಿದೆಯಲ್ಲಿ ಕೆಲವು ಮಾರ್ಪಾಟುಗಳನ್ನು ಅಳವಡಿಸಲು ಶಿಫಾರಸುಗಳನ್ನು ಮಾಡಲಾಗಿದೆ.

- ನೋಂದಾಯಿತ ವ್ಯಕ್ತಿಗಳು, ಒಂದೇ ಹಣಕಾಸು ವರ್ಷದ ವಿಭಿನ್ನ ಇನ್‌ವಾಯ್ಸ್‌ಗಳಿಗೆ ಸಂಬಂದಿಸಿದಂತೆ ಸಮಗ್ರವಾಗಿ ಒಂದೇ ಕ್ರೆಡಿಟ್ /ಡೆಬಿಟ್ ನೋಟ್ ಅನ್ನು ಜಾರಿಗೊಳಿಸಬಹುದು.

- ಬಿಡಿ ಕಾಮಗಾರಿಗೆ ಸಂಬಂಧಿಸಿದಂತೆ, ಬಂಡವಾಳವನ್ನು ಹಿಂತಿರುಗಿಸಲು ಎರಡು ವರ್ಷದವರೆಗೂ ಮತ್ತು ಉತ್ಪಾದನೆಯಲ್ಲಿ ಒಳಗೊಂಡ ವಸ್ತುಗಳನ್ನು(ಇನ್‌ಪುಟ್ಸ್) ಹಿಂತಿರುಗಿಸಲು ಒಂದು ವರ್ಷದವರೆಗೂ ಕಾಲಾವಧಿಯನ್ನು ವಿಸ್ತರಿಸಲು ಆಯುಕ್ತರಿಗೆ ಅಧಿಕಾರ ನೀಡುವುದು.

- ಕೇಂದ್ರೀಯ ಜಿ.ಎಸ್.ಟಿ ಕಾಯಿದೆ, 2017 ರ ಅನ್ವಯ ಅಪೆಲೆಟ್ ಪ್ರಾಧಕರಣದ ಎದುರು ಅಪೀಲ್ ದಾಖಲಿಸಲು ₹. 25 ಕೋಟಿ ಮತ್ತು ಅಪೆಲೆಟ್ ಟ್ರಿಬ್ಯೂನಲ್ ಎದುರು ಅಪೀಲ್ ದಾಖಲಿಸಲು ₹.50 ಕೋಟಿ ವರೆಗೂ ಮುಂಗಡ ಹಣದ ಗರಿಷ್ಠ ಮೊತ್ತವನ್ನು ನಿಗದಿ ಪಡಿಸುವುದು.

  ದಿನಾಂಕ 01.02.2019 ರ ಅನ್ವಯ ಈ ಮೇಲ್ಕಂಡ ಕ್ರಮಗಳನ್ನು ಕಾರ್ಯರೂಪಕ್ಕೆ ತರಲಾಗಿದೆ.

# ಅಧ್ಯಾಯ 8

## ಕರ ಕುಶಲ ಕಾಮಗಾರಿಗೆ ಸಂಬಂಧಿಸಿದಂತೆ ಜಿ. ಎಸ್.ಟಿ

ದಿನಾಂಕ 09.09.2017 ರಂದು ನೆಡೆದ 21 ನೇ ಸಭೆಯಲ್ಲಿ ಜಿ.ಎಸ್.ಟಿ ಪರಿಷತಿನ ಶಿಫಾರಸುಗಳ ಅನ್ವಯ ಕರ ಕುಶಲ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಪಾಟುಗಳನ್ನು ಅಳವಡಿಸಲಾಗಿದೆ.

- ಕರ ಕುಶಲ ಕಾಮಗಾರಿ ಪೂರೈಕೆಯಲ್ಲಿ ತೊಡಗಿರುವ ಪೂರೈಕೆದಾರರ ವಾರ್ಷಿಕ ವಹಿವಾಟು, ವಿಶೇಷ ವರ್ಗದ ರಾಜ್ಯಗಳಿಗೆ ಅನ್ವಯಿಸುವಂತೆ ₹.10 ಲಕ್ಷ (ಜಮ್ಮು ಮತ್ತು ಕಾಶ್ಮೀರ ವನ್ನು ಹೊರತು ಪಡಿಸಿ) ಮತ್ತು ಬೇರೆ ರಾಜ್ಯಗಳಿಗೆ ಅನ್ವಯಿಸುವಂತೆ ₹.20 ಲಕ್ಷದೊಳಗೆ ಇದ್ದರೆ, ಅಂತಹ ಅಂತರರಾಜ್ಯ ಪೂರೈಕೆದಾರರು ಮತ್ತು ಸಾಮಾನ್ಯ ತೆರಿಗೆದಾರರಿಗೆ ನೋಂದಣಿ ವಿನಾಯಿತಿ ನೀಡಲಾಗಿದೆ.

ಈ ಮುಂತಾದ ಕಾಮಗಾರಿಗೆ ಜಿ.ಎಸ್.ಟಿ ದರವನ್ನು 28% ಇಂದ 12% ಗೆ ಕಡಿತ ಗೊಳಿಸಲಾಗಿದೆ.

- ವಿಗ್ರಹಗಳು, ಕೆತ್ತನೆ ಪ್ರತಿಮೆಗಳು, ಉಬ್ಬು–ತಿಟ್ಟ ಕೆತ್ತನೆಗಳ ಸಾಮಗ್ರಿಗಳು, ಪೆಡೆಸ್ಟಲ್ ವೇದಿಕೆಗಳು, ಶಿಲಭೆಗಳು, ಪ್ರಾಣಿಗಳ ಆಕಾರಗಳು, ಬೋಗಣಿಗಳು, ಹೂದಾನಿಗಳು, ಬಟ್ಟಲು, ಸುಗಂಧ ಪೆಟ್ಟಿಗೆಗಳು, ಬರಹಕ್ಕೆ ಸಂಬಂಧಿಸಿದ ಸೆಟ್ಗಳು, ಆಶ್ಟ್ರೇಗಳು, ಪೇಪರ್ ವೇಟ್, ಕೃತಕ ಹಣ್ಣುಗಳು ಮತ್ತು ಎಲೆ ಗೊಂಚಲು; ಮುಂತಾದ ಕಲ್ಲಿನಿಂದ ನಿರ್ಮಿತವಾದ ಆಲಂಕಾರಿಕ ವಸ್ತುಗಳು
- ಕಲ್ಲಿನೊಳಗೆ ಅಳವಡಿಸಲಾದ ಕೊರೆದು ಮಾಡಿದ ಕುಸುರಿ ಕಾಮಗಾರಿ
- ದಂತ, ಮೂಳೆ, ಆಮೆ ಚಿಪ್ಪು, ಕೊಂಬು, ಕೋಡು, ಹವಳ, ಮುತ್ತು ಸೀಪಿ ಮುಂತಾದ ವಸ್ತುಗಳಿಂದ ತಯಾರಿಸಿದ ಅಥವ ಅವುಗಳ ಮೇಲಿನ ಕರಕುಶಲ ಕಾಮಗಾರಿ(ಈ ವಸ್ತುಗಳ ಮೌಲ್ಡಿಂಗ್ ಇಂದ ತಯಾರಾದ ವಸ್ತುಗಳು)
- ಮಡಕೆ, ಜಾಡಿ ಮುಂತಾದ ವಸ್ತುಗಳು, ಪಿಂಗಾಣಿ ಪದಾರ್ಥಗಳನ್ನು ಪ್ಯಾಕ್ ಮಾಡಿ ಸಾಗಣೆ ಮಾಡುವ ಕಾಮಗಾರಿ
- ಮೇಜಿನ ಮೇಲೆ ಇಡುವ ಆಲಂಕಾರಿಕಗಳು, ಅಡುಗೆ ಪಾತ್ರೆಗಳು, ಇನ್ನಿತರ ಗೃಹೋಪಯೋಗಿ ವಸ್ತುಗಳು, ಶೌಚಾಲಯದಲ್ಲಿ ಬಳಸುವ ಪದಾರ್ಥಗಳು(ಪಿಂಗಾಣಿ ವಸ್ತುಗಳನ್ನು ಹೊರತು ಪಡಿಸಿ, ಫಿಟ್ಟಿಂಗುಗಳು, ಟವಲ್ ಹುಕ್, ಟಾಯ್ಲೆಟ್ ಪೇಪರ್ ಹೋಲ್ಡರ್, ಟೂತ್‌ಬ್ರಶ್ ಹೋಲ್ಡರ್, ಸ್ಪಂಜಿನ ಬುಟ್ಟಿ, ಸಾಬೂನು ಡಿಶ್ ಇತ್ಯಾದಿ)
- ಬಿದಿರು/ಬೆತ್ತದ ಪೀಠೋಪಕರಣಗಳ ಮೇಲೆ ಜಿ.ಎಸ್.ಟಿ ದರವನ್ನು 28% ರಿಂದ 18% ಗೆ ಕಡಿತ ಗೊಳಿಸಲಾಗಿದೆ.
- ಕಾಗದ ಕಲಾಕೃತಿಗಳ ಮೇಲೆ ಜಿ.ಎಸ್.ಟಿ ದರವನ್ನು 18% ಇಂದ 5% ಗೆ ಕಡಿತ ಗೊಳಿಸಲಾಗಿದೆ.
- ಈ ವಸ್ತುಗಳ ಮೇಲೆ ಜಿ.ಎಸ್.ಟಿ ದರವನ್ನು 18% ಇಂದ 12% ಗೆ ಕಡಿತ ಗೊಳಿಸಲಾಗಿದೆ.
- ಗಾಜಿನ ವಿಗ್ರಹಗಳು
- ಮರದಿಂದ ತಯಾರಿಸಿದ ಮೇಜಿನ ಮತ್ತು ಅಡುಗೆ ಪಾತ್ರೆಗಳು
- ಮರದಲ್ಲಿ ಕೊರೆದು ತಯಾರಿಸಿದ ಪೆಟ್ಟಿಗೆಗಳು, ಕುಸುರಿ ಕಾಮಗಾರಿ ಸಂದೂಕಗಳು ಮುಂತಾದವು

- ವಿದ್ಯುತೇತರ, ಮೂಲ ಲೋಹದ ಗಂಟೆ, ಗಾಂಗ್, ವಿಗ್ರಹಗಳು ಮತ್ತು ಇತರೆ ಆಭರಣಗಳು, ಮೂಲ ಲೋಹದ ಚಿತ್ರ, ಭಾವಚಿತ್ರ ದ ಕಟ್ಟುಗಳು, ಕನ್ನಡಿಗಳು, ಬಿದುರಿನ ಸಾಮಗ್ರಿಗಳು
- ಊದುಬತ್ತಿ, ಧೂಪ, ಸಾಂಬ್ರಾಣಿ ಮುಂತಾದವು, ಹುಲ್ಲು, ಕಡ್ಡಿ, ಎಲೆ, ಬಳ್ಳಿ, ಕಾಂಡ, ನಾರು ಇಂತಹ ವಸ್ತುಗಳಿಂದ ತಯಾರಿಸಿದ ಉತ್ಪನ್ನಗಳು – ಚಾಪೆ, ಪೌಚ್, ವಾಲೆಟ್ ಮುಂತಾದ ವಸ್ತುಗಳ ಮೇಲೆ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.

ದಿನಾಂಕ 21.7.2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯ ಶಿಫಾರಸುಗಳ ಅನ್ವಯ ಕರಕುಶಲ ವಸ್ತುಗಳಿಗೆ ಸಂಬಂಧಿಸಿದಂತೆ ಈ ಮಾರ್ಪಾಟುಗಳನ್ನು ಮಾಡಲಾಗಿದೆ.

- ಈ ವಸ್ತುಗಳ ಮೇಲೆ ಜಿ.ಎಸ್.ಟಿ ದರವನ್ನು 18% ಇಂದ 12% ಗೆ ಕಡಿತ ಗೊಳಿಸಲಾಗಿದೆ.
    - ಪೌಚ್, ಪರ್ಸ್‌ಗಳನ್ನು ಒಳಗೊಂಡಂತೆ ಕೈಚೀಲಗಳು; ಆಭರಣ ಪೆಟ್ಟಿಗೆ
    - ಚಿತ್ರ, ಭಾವಚಿತ್ರ ದ ಕಟ್ಟುಗಳು, ಕನ್ನಡಿಗಳು
    - ಕಾರ್ಕ್/ಬೆಂಡಿನ ಕಲಾಕೃತಿಗಳು
    - ಕಲ್ಲಿನ ಕಲಾಕೃತಿಗಳು, ಕಲ್ಲಿನಲ್ಲಿ ಕೊರೆದ ಕೃತಿಗಳು
    - ಆಲಂಕಾರಿಕ ಕಟ್ಟಿನ ಕನ್ನಡಿಗಳು
    - ಗಾಜಿನ ವಿಗ್ರಹಗಳು(ಹರಳು/ಸ್ಫಟಿಕದ ವಸ್ತುಗಳನ್ನು ಹೊರತು ಪಡಿಸಿ)
    - ಗಾಜಿನ ಕಲಾಕೃತಿಗಳು(ಮಡಕೆ, ಜಾಡಿ, ಸಂಪುಟ, ಕೇಕ್ ರಟ್ಟು/ಮುಸುಕು, ಟುಲಿಪ್ ಬಾಟಲಿಗಳು, ಹೂದಾನಿ)
    - ಕಬ್ಬಿಣದ ಕಲಾಕೃತಿಗಳು
    - ತಾಮ್ರ, ಹಿತ್ತಾಳೆ, ಕಂಚು, ತವರ ದ ವಸ್ತುಗಳು, ನಿಕಲ್/ಬೆಳ್ಳಿಯಿಂದ ಎಲೆಕ್ಟ್ರೋಪ್ಲೇಟ್ ಮಾಡಿದ ವಸ್ತುಗಳು
    - ಅಲ್ಯೂಮಿನಿಯಮ್ ಕಲಾಕೃತಿಗಳು
    - ಕರಕುಶಲ ದೀಪಗಳು (ಪಂಚಲೋಹದ ದೀಪವನ್ನು ಸೇರಿ)
    - ಕುಸುರಿ ಮಾಡಿದ ತರಕಾರಿ ಕಲಾಕೃತಿಗಳು, ಕೊರೆದ ಅದಿರು ಕಲಾಕೃತಿಗಳು, ಮೇಣ, ಅರಗು, ನೈಸರ್ಗಿಕ ಅಂಟು, ಜಿಗುಟುಮಣ್ಣು , ಚಿಪ್ಪುಸೀಪಿ ಮುಂತಾದ ಪದಾರ್ಥಗಳ ವಸ್ತು/ಕಲಾಕೃತಿಗಳು
    - ಗಂಜೀಫಾ ಕಾರ್ಡ್

ಈ ಕರಕುಶಲ ವಸ್ತುಗಳ ಮೇಲೆ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.

- ಕೈಕಾಮಗಾರಿಯಿಂದ ತಯಾರಿಸಿದ ನೆಲ ಹಾಸುಗಳು, ಕಾರ್ಪೆಟ್ಟುಗಳು
- ಕೈಕಾಮಗಾರಿ ಲೇಸ್‌ಗಳು, ಕಸೂತಿ ಪಟ್ಟಿ
- ಕೈಕಾಮಗಾರಿಯಲ್ಲಿ ಹೆಣೆದ ಸಾಮಗ್ರಿಗಳು
- ಕಸೂತಿ ಅಂಚುಗಳು, ಗೋಟುಕಾಮಗಾರಿ, ಆಲಂಕಾರಿಕ ಹೆಣಿಗೆಗಳು, ಚಿಂದಿಜೋಡಣೆ
- ತೋರಣ

ಅಧ್ಯಾಯ 9

# ವಸ್ತ್ರಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ದರಗಳು

ದಿನಾಂಕ 3.06.2017 ರಂದು ಜಿ.ಎಸ್.ಟಿ ಪರಿಷತ್ತಿನ 15ನೇ ಸಭೆಯಲ್ಲಿ ವಸ್ತ್ರ ಸರಪಳಿ ಸಾಮಗ್ರಿಗಳ ಸಂಬಂಧವಾಗಿ ವಿಸ್ತೃತ ಚರ್ಚೆ ನೆಡೆಸಲಾಯಿತು. ಜಿ.ಎಸ್.ಟಿ. ಪದ್ಧತಿಗೆ ಮುನ್ನ ಇದ್ದಂತಹ ತೆರಿಗೆ ಯನ್ನು ಗಮನಿಸಿ ಜಿ.ಎಸ್.ಟಿ ಪರಿಷತ್ತು ಕೃತಕ (ಮಾನವ ನಿರ್ಮಿತ) ನೂಲು ಮತ್ತು ಎಳೆಗಳ ಮೇಲೆ 18% ಜಿ.ಎಸ್.ಟಿ ಯ ಶಿಫಾರಸು ಮಾಡಿತ್ತು. ಆದರೆ, ಈ ಹಿಂದೆ ಕೇಂದ್ರೀಯ ಅಬಕಾರಿ ಮತ್ತು ವ್ಯಾಟ್ ಗಳ ಹೇರಿಕೆಯಿಂದ ಒಟ್ಟು ತೆರಿಗೆ ದರ 11% ಇದ್ದರೂ, ಮೂಲತಃ ಜಿ.ಎಸ್.ಟಿ. ಪದ್ದತಿಗೆ ಮುನ್ನ, ಕೃತಕ ನೂಲು ಮತ್ತು ಎಳೆಗಳ ಮೇಲೆ ಯಾವ ತೆರಿಗೆ ಹೊರೆಯೂ ಇಲ್ಲದ ಕಾರಣ, ಪರಿಷತ್ತು, ಎಲ್ಲಾ ವಸ್ತ್ರ ಪ್ರಕಾರಗಳಿಗೂ ಅನ್ವಯಿಸುವಂತೆ 5% ಜಿ.ಎಸ್.ಟಿ. ತೆರಿಗೆಯನ್ನು ನಿಗದಿ ಪಡಿಸಿದೆ. ಹಾಗೆಯೇ, ಮಾನವ ನಿರ್ಮಿತ ವಸ್ತ್ರಗಳ ಉತ್ಪಾದನೆಗೆ ಸಂಬಂಧಿಸಿದಂತೆ, ಮರುಪಾವತಿ ಮೊತ್ತದ ಅಧಿಕ ಶೇಕರಣೆಯನ್ನು ತಡೆಯಲು, ಕೃತಕ ವಸ್ತ್ರ ನಿರ್ಮಾಣಕ್ಕೆ ಐ.ಟಿ.ಸಿ ಮರುಪಾವತಿಯನ್ನು ಸೀಮಿತಗೊಳಿಸುವ ಶಿಫಾರಸನ್ನು ಕೂಡ ಮಾಡಿದೆ.

ಪರಿಣಾಮವಾಗಿ ವಸ್ತ್ರಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ದರಗಳಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ತರಲಾಗಿದೆ:

- ದಿನಾಂಕ 09.09.2017 ರಂದು ನೆಡೆದ ಜಿ.ಎಸ್.ಟಿ ಪರಿಷತಿನ 21ನೇ ಸಭೆಯ ಶಿಫಾರಸಿನಂತೆ, ಎಂ.ಎಸ್.ಎಂ.ಈ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಪ್ರಮಾಣೀಕೃತ ಕೇಂದ್ರಗಳಲ್ಲಿ ಮಾರುವ ಖಾದಿ ವಸ್ತ್ರಗಳ ಮೇಲೆ ಜಿ.ಎಸ್.ಟಿ ಯ ಪೂರ್ಣ ವಿನಾಯಿತಿ ನೀಡಲಾಗಿದೆ. ಸೀರೆಗೆ ಹಾಕುವ ಫಾಲ್ಸ್ (ಎಂ.ಎಸ್.ಎಂ.ಈ ಕ್ಷೇತ್ರದಲ್ಲಿ ಬಳಸುವುದರಿಂದ) ಮೇಲಿನ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.
- ದಿನಾಂಕ 06.10.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 22ನೇ ಸಭೆಯ ಶಿಫಾರಸಿನಂತೆ, ಎಂ.ಎಂ.ಎಫ್ ನೂಲುಗಳನ್ನು ಎಂ.ಎಸ್.ಎಂ.ಈ ಕ್ಷೇತ್ರದಲ್ಲಿ ವಸ್ತ್ರ ಉತ್ಪಾದನೆಗೆ ಬಳಸುವುದರಿಂದ ಅವುಗಳ ಮೇಲಿನ ಜಿ.ಎಸ್.ಟಿ ದರವನ್ನು 18% ಇಂದ 12% ಗೆ ಕಡಿತ ಗೊಳಿಸಲಾಗಿದೆ. ಸೂರತ್ ಜರಿ ಉತ್ಪಾದಕ ಸಂಘದ ಕೋರಿಕೆಯ ಮೇರೆಗೆ ಅಸಲಿ ಜರಿಗಳ ಮೇಲೆ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.
- ದಿನಾಂಕ 10.11.2017 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 23ನೇ ಸಭೆಯ ಶಿಫಾರಸಿನಂತೆ, ಎಂ.ಎಸ್.ಎಂ.ಈ ಕ್ಷೇತ್ರದ ಈ ಕೆಳಕಂಡ ವಸ್ತ್ರ ಉತ್ಪನ್ನಗಳ ಮೇಲಿನ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.
    - ಗೋಣಿ ದಾರ, ನಾರಿನ ಹುರಿ , ಹಗ್ಗ
    - ಹೆಣೆದ ಹುರಿ ದಾರ, ಹಗ್ಗ, ಮೀನುಗಾರಿಕೆಗೆ ಉಪಯೋಗಿಸುವ ಹೆಣೆದ ಬಲೆಗಳು ಮತ್ತು ಇನ್ನಿತರ ವಸ್ತ್ರಗಳಿಂದ ಹೆಣೆದ ಬಲೆಗಳು
    - ನಾರಿನ ಉತ್ಪನ್ನಗಳು

- ನವಿರಾಗಿ ನೇಯ್ದ ಬಟ್ಟೆ, 5807 ಶೀರ್ಷಿಕೆಯಡಿಯಲ್ಲಿರುವ ಸಾಮಗ್ರಿಗಳನ್ನು ಹೊರತು ಪಡಿಸಿ, ಗೋಂದಿನ ಮೂಲಕ ಸಜ್ಜು ಗೊಳಿಸಿದ ನೆಯ್ಗೆ ಮಾಡದೆಯೇ ಗೋಂದನ್ನು ಬಳಸಿ ಸಜ್ಜು ಗೊಳಿಸಿದ ನೆರಿಗೆ ಬಟ್ಟೆ/ವಸ್ತ್ರ.

- ಸವೆದ ಉಡುಪು ಮತ್ತು ಸವೆದ ವಸ್ತುಗಳು, ರ್‍ಯಾಗ್

– ದಿನಾಂಕ 21.07.2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯ ಶಿಫಾರಸಿನಂತೆ, ಚೆನಿಲ್ಲೆ ವಸ್ತ್ರ ಮತ್ತು 5801 ಶೀರ್ಷಿಕೆಯಡಿಯಲ್ಲಿರುವ ವಸ್ತ್ರಗಳ ಮೇಲಿನ ಜಿ.ಎಸ್.ಟಿ ದರವನ್ನು 12% ಇಂದ 5% ಗೆ ಕಡಿತ ಗೊಳಿಸಲಾಗಿದೆ.

- ಜಿ.ಎಸ್.ಟಿ ಪದ್ಧತಿಯಲ್ಲಿ ವಸ್ತ್ರದ ಮೇಲಿನ ಪ್ರಸ್ತುತ ತೆರಿಗೆ ದರವು ಈ ಕೆಳಕಂಡಂತೆ ಇದೆ:

– ಹತ್ತಿ (ಅರಳೆ) ನೂಲು ಮತ್ತು ಎಲ್ಲಾ ನೈಸರ್ಗಿಕ ನೂಲು  5%

– ಕೃತಕ ನೂಲಿನ ವಸ್ತ್ರ – 18%

– ಕೃತಕ ನೂಲು – 12%

– ಒಟ್ಟಾರೆಯಾಗಿ ಅಧ್ಯಾಯ 50 ರಿಂದ 55 ಮತ್ತು 60 ರಲ್ಲಿ ನಮೂದಿಸಿರುವ ವಸ್ತ್ರ (ಸಂಚಿತ ಐ.ಟಿ.ಸಿ ಗೆ ಮರುಪಾವತಿ ದೊರೆಯುವುದಿಲ್ಲ).

– ಎಲ್ಲಾ ತರಹದ ವಸ್ತ್ರಗಳು/ಬಟ್ಟೆ ಗಳಿಗೆ (ವಸ್ತ್ರ ಸುರುಳಿ, ಉಣ್ಣೆ ಬಟ್ಟೆ, ನೆಯ್ಗೆಗೆ ಒಳಪಡದ ವಸ್ತ್ರ,ವಿಶೇಷ ನೂಲು, ಹುರಿ, ಹಗ್ಗ, ಕೇಬಲ್‌ಗಳು ಮತ್ತು ಇವುಗಳಿಂದ ತಯಾರಾದ ವಸ್ತುಗಳು, ಕಾರ್ಪೆಟ್‌ಗಳು ಮತ್ತು ವಸ್ತ್ರದ ಇತರೆ ನೆಲಹಾಸುಗಳು, ವಿಶೇಷವಾದ ನೆಯ್ದ ವಸ್ತ್ರಗಳು, ಕುಚ್ಚುಗಳು, ಲೇಸ್, ಬೂಟಾ ಹಾಕಿದ ಬಟ್ಟೆಗಳು, ಅಂಚುಗಳು, ಕಸೂತಿ, ಹಚ್ಚು ಹಾಕಿದ, ಲೇಪನ ಮಾಡಿದ, ಹೊದಿಸಿರುವ, ಲಾಮಿನೇಟ್ ಮಾಡಿದ ವಸ್ತ್ರಗಳು, ಔದ್ಯೋಗಿಕ ಉಪಯೋಗಕ್ಕೆ ಯೋಗ್ಯವಾದ ವಸ್ತ್ರಗಳು ) – 12%

– ರೆಡಿಮೇಡ್ ಉಡುಪುಗಳು ಮತ್ತು ವಸ್ತ್ರದಿಂದ ಉತ್ಪಾದಿಸಿದ ವಸ್ತುಗಳು:

- ಪ್ರತ್ಯೇಕ ಉಡುಪು/ ವಸ್ತುವಿನ ವಿಕ್ರಯ ಮೂಲ್ಯ ₹.1000/–ಕ್ಕೆ ಮೀರದಿದ್ದರೆ– 5%

- ಪ್ರತ್ಯೇಕ ಉಡುಪು/ ವಸ್ತುವಿನ ವಿಕ್ರಯ ಮೂಲ್ಯ ₹.1000/– ಗಿಂತ ಹೆಚ್ಚಿದ್ದರೆ – 12%

– ವ್ಯತಿರಿಕ್ತ ತೆರಿಗೆ ಸಂರಚನೆಯ ಪರಿಣಾಮವಾಗಿ ವಸ್ತ್ರ ಉತ್ಪಾದಕರಿಗೆ ಲಭ್ಯವಿರುವ ಸಂಚಿತ ಜಮೆ ಮರುಪಾವತಿ :

– ವಸ್ತ್ರಗಳ ಮೇಲೆ 5% ದರದಲ್ಲಿ ಜಿ.ಎಸ್.ಟಿ ಅನ್ವಯವಾಗುತ್ತದೆ, ವ್ಯತಿರಿಕ್ತ ಶುಲ್ಕ ಸಂರಚನೆಯ ಪರಿಣಾಮವಾಗಿ ಸಂಚಿತ ಜಮೆ ಮರುಪಾವತಿಗೆ ಅನುಮತಿ ಇಲ್ಲ. ಈ ಶರತ್ತಿನ ಕಾರಣ ವಸ್ತ್ರ ಕ್ಷೇತ್ರವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ, ದಿನಾಂಕ 21.07.2018 ರಂದು ನೆಡೆದ ಜಿ.ಎಸ್.ಟಿ ಪರಿಷತ್ತಿನ 28ನೇ ಸಭೆಯಲ್ಲಿ , ದಿನಾಂಕ 27.07.2018 ರ ಅನ್ವಯ ಭವಿಷ್ಯದಲ್ಲಿ ವ್ಯತಿರಿಕ್ತ ಶುಲ್ಕ ಸಂರಚನೆಯ ಇದ್ದರೂ ಸಂಚಿತ ಜಮೆ ಮರುಪಾವತಿಗೆ ಶಿಫಾರಸ್ಸು ಮಾಡಲಾಗಿದೆ. ಈ ಸಂಬಂಧವಾಗಿ, ವಸ್ತ್ರ ಕ್ಷೇತ್ರಕ್ಕೆ ಮರುಪಾವತಿಯ ಪ್ರತಿಬಂಧನೆಗಳ ನಿವಾರಣೆ ಮಾಡಲು, ದಿನಾಂಕ 24.08.2018 ರ ಸುತ್ತೋಲೆ ಸಂಖ್ಯೆ 56/30/2018 ಜಿ.ಎಸ್.ಟಿ ಅನ್ನು ಜಾರಿಗೊಳಿಸಲಾಗಿದೆ.

ಅಧ್ಯಾಯ 10

## ಸರಕುಗಳ ದರದಲ್ಲಿ ಕಡಿತ

### ಎಂ.ಎಸ್.ಎಂ.ಈ ವಸ್ತುಗಳ ಮೇಲೆ ಹೊರಿಸುವ ಜಿ.ಎಸ್.ಟಿ ದರಗಳ ಮಾರ್ಪಾಟುಗಳು

| ಕ್ರಮ ಸಂಖ್ಯೆ | ವಿವರಣೆ | ಶಿಫಾರಸು ಮಾಡಿರುವ/ ಜಾರಿಯಾಗಿರುವ ಜಿ.ಎಸ್.ಟಿ ದರಗಳ ಮಾರ್ಪಾಟುಗಳು | |
|---|---|---|---|
| | 9 ಸೆಪ್ಟೆಂಬರ್, 2017 ರಂದು ನಡೆದ 21ನೇ ಸಭೆ | ಹಿಂದಿನ ದರಗಳು | ಪ್ರಸ್ತುತ ದರಗಳು |
| 1 | ರಬ್ಬರ್ ಬ್ಯಾಂಡ್ | 28% | 12% |
| 2 | ಪ್ಲಾಸ್ಟಿಕ್ ರೇನ್‌ಕೋಟ್ | 28% | 18% |
| 3 | ಮರದ, ಕಲ್ಲಿನ(ಮಾರ್ಬಲ್ ಸೇರಿದಂತೆ) ಮತ್ತು ಲೋಹದ (ಬಹುಮೂಲ್ಯ ಲೋಹಗಳನ್ನು ಹೊರತುಪಡಿಸಿ) ವಿಗ್ರಹಗಳು | 28% | 12% |
| 4 | ಜಿಗುಟು ಮಣ್ಣಿನ ವಿಗ್ರಹಗಳು | 28% | 0 |
| 5 | ಬಟ್ಟೆಯ ಟೋಪಿ (ಟೆಕ್ಸ್‌ಟೈಲ್ ಕ್ಯಾಪ್ಸ್) | 18% | 12% |
| 6 | ಮರದಿಂದ ತಯಾರಿಸಿದ ಮೇಜಿನ ಮೇಲಿನ ಮತ್ತು ಅಡುಗೆ ಪಾತ್ರೆಗಳು | 18% | 12% |
| 7 | ಅಡುಗೆ ಪಾತ್ರೆಗಳು, ಟೇಬಲ್‌ವೇರ್, ಇತರೆ ಗೃಹೋಪಯೋಗಿ ವಸ್ತುಗಳು ಮತ್ತು ಪಿಂಗಾಣಿ/ಪೋರ್ಸಲೇನ್ ಇಂದ ಮಾಡಿದ ಟಾಯ್ಲೆಟ್ ಶೌಚಾಲಯದಲ್ಲಿ ಉಪಯೋಗಿಸುವ ಪದಾರ್ಥಗಳು(ಪಿಂಗಾಣಿ ವಸ್ತುಗಳನ್ನು ಹೊರತು ಪಡಿಸಿ, ಫಿಟ್ಟಿಂಗುಗಳು, ಟವಲ್ ಹುಕ್, ಟಾಯ್‌ಲೆಟ್ ಪೇಪರ್ ಹೋಲ್ಡರ್, ಟೂತ್‌ಬ್ರಶ್ ಹೋಲ್ಡರ್, ಸ್ಪಂಜಿನ ಬುಟ್ಟಿ, ಸಾಬೂನು ಡಿಶ್ ) | 18% | 12% |
| 8 | ಹತ್ತಿಯ ಹಾಸಿಗೆ | 18% | ಪ್ರತ್ಯೇಕ ಪೀಸ್ ₹.1000/–ಕ್ಕೆ ಮೀರದಿದ್ದರೆ– 5% ₹.1000/– ಗಿಂತ ಹೆಚ್ಚಿದ್ದರೆ – 12% |
| 9 | ಸೀರೆ ಫಾಲ್ | 12% | 5% |
| 10 | ಒರಟು ಔದ್ಯೋಗಿಕ ವಜ್ರ (ಸಂಸ್ಕರಿಸದ ವಜ್ರ ಸಹಿತ) | 3% | 0.25% |
| | 6 ಅಕ್ಟೋಬರ್, 2017 ರಂದು ನಡೆದ 22ನೇ ಸಭೆ | | |
| 1 | ಖಾಕ್ರ | 12% | 5% |
| 2 | ಕಾರ್ಯಾಲಯ ಲೇಖನ ಸಾಮಗ್ರಿಗಳು:ಬಿಡಿ ಕಾಗದ ಬೈಂಡರ್ ಗಳು, ಫೈಲ್ಸ್, ಲೆಟರ್ ಕ್ಲಿಪ್ಸ್, ಲೆಟರ್ ಕಾರ್ನರ್, ಪೇಪರ್ ಕ್ಲಿಪ್, ಇನ್ಡೆಕ್ಸಿಂಗ್ ಟ್ಯಾಗ್ ಮುಂತಾದವು, ಮೂಲ ಲೋಹದ : ಸ್ಟೇಪಲ್ ಸ್ಟ್ರಿಪ್‌ಗಳು (ಉದಾಹರಣೆಗೆ ಕಾರ್ಯಾಲಯ ಉಪಯೋಗಿ, ಅಪ್‌ಹಾಸ್ಟ್ರಿ, ಪ್ಯಾಕ್ ಮಾಡಲು ಉಪಯೋಗಿಸುವ) | 28% | 18% |
| 3 | ಪೋಸ್ಟರ್ ಬಣ್ಣ | 28% | 18% |
| 4 | ಮಕ್ಕಳ ಮನೋರಂಜನೆಯ ಜಿಗುಟು ಪೇಸ್ಟ್ | 28% | 18% |

| ಕ್ರಮ ಸಂಖ್ಯೆ | ವಿವರಣೆ | ಶಿಫಾರಸು ಮಾಡಿರುವ/ ಜಾರಿಯಾಗಿರುವ ಜಿ.ಎಸ್.ಟಿ ದರಗಳ ಮಾರ್ಪಾಟುಗಳು | |
|---|---|---|---|
| | 10 ನವಂಬರ್, 2017 ರಂದು ನೆಡೆದ 23ನೇ ಸಭೆ | ಹಿಂದಿನ ದರಗಳು | ಪ್ರಸ್ತುತ ದರಗಳು |
| 1 | ಫೈರ್‌ವರ್ಕ್ಸ್, ಸಿಗ್ನಲಿಂಗ್ ಫ್ಲೇರ್ಸ್ , ರೇನ್ ಕೋಟ್, ಫಾಗ್ ಸಿಗ್ನಲ್ಸ್, ಮತ್ತು ಇತರೆ ಪೈರೋಟೆಕ್ನಿಕ್ ವಸ್ತುಗಳು | 28% | 18% |
| 2 | ಟ್ರಂಕುಗಳು, ಸೂಟ್ಕೇಸ್, ವ್ಯಾನಿಟಿ ಬ್ಯಾಗುಗಳು, ಎಕ್ಸಿಕ್ಯುಟೀವ್ ಕೇಸ್, ಬ್ರೀಫ್ಕೆಸ್, ಸ್ಕೂಲ್ ಸಾಚೆಟ್ಸ್,ಕನ್ನಡಕದ ಕೇಸ್, ಬೈನಾಕುಲರ್ ಕೇಸ್, ಕ್ಯಾಮರಾ ಕೇಸ್, ಸಂಗೀತವಾದ್ಯಗಳ ಕೇಸ್ಗಳು, ಗನ್ ಕೇಸ್, ಹೊಲ್ಸಟ–ರ್ ಮತ್ತು ಇಂತಹುದೇ ಹಿಡಿಗಳು, ಯಾತ್ರಾ ಕೈಚೀಲಗಳು, ಖಾದ್ಯ ಮತ್ತು ಪಾನೀಯ ಪದಾರ್ಥಗಳನ್ನು ಸಂರಕ್ಷಿಸಲು ಇನ್ಸುಲೇಟ್ ಮಾಡಿದ ಬ್ಯಾಗುಗಳು,  ಟಾಯ್ಲೆಟ್ ಬ್ಯಾಗುಗಳು, ರಕ್ಸ್ಯಾಕ್, ಕೈಚೀಲಗಳು, ಶಾಪಿಂಗ್ ಬ್ಯಾಗುಗಳು, ವಾಲೆಟ್, ಪರ್ಸ್, ನಕ್ಷೆ ಕೇಸ್, ಸಿಗರೇಟ್ ಕೇಸ್, ತಂಬಾಕುಪೌಚ್, ಉಪಕರಣಗಳ ಬ್ಯಾಗ್, ಬಾಟಲಿ ಕೇಸ್, ಆಭರಣ ಪೆಟ್ಟಿಗೆ, ಪೌಡರ್ ಪೆಟ್ಟಿಗೆ, ಕಟ್ಲರಿ ಕೇಸ್, ಚರ್ಮದ, ಪ್ಲಾಸ್ಟಿಕ್ನ, ವಸ್ತ್ರದ ವಲ್ಕನೈಸ್ಡ್ ನಾರಿನ ಅಥವಾ ಪೇಪರ್ ಬೋರ್ಡ್ ್ ಇಓದ ತಯಾರಿಸಿದ ಇಂತಹುದೇ ಕಂಟೇನರ್ಗಳು , ಇನ್ನಿತರೆ ಪದಾರ್ಥಗಳಿಂದದಿಲ್ಲವೇ ಕಾಗದದಿಂದ ಪೂರ್ಣವಾಗಿ ತಯಾರಾದ ಇಲ್ಲವೇ ಆವೃತವಾದ ವಸ್ತುಗಳು | 28% | 18% |
| 3 | ಮೂಲ ಲೋಹದಿಂದ ನಿರ್ಮಿತ ಫೈಲಿಂಗ್ ಕ್ಯಾಬಿನೆಟ್, ಕಾರ್ಡ್ ್ ಇಂಡೆಕ್ಸ್ ಕ್ಯಾಬಿನೆಟ್, ಪೇಪರ್ ಟ್ರೇ, ಪೇಪರ್ ರೆಸ್ಟ್, ಪೆನ್ ರೆಸ್ಟ್, ಆಫೀಸ್ ಸ್ಟಾಂಪ್ ಸ್ಟಾಂಡ್, ಮತ್ತು ಇಂತಹುದೇ ಕಾರ್ಯಾಲಯ/ಮೇಜಿನ ಸಾಮಗ್ರಿಗಳು | 28% | 18% |
| 4 | ಕಲ್ಲು ಗುಂಡಿರುವ ಒರಳುಕಲ್ಲು | 28% | 12% |
| 5 | ಕೃತಕ ಪರಿಮಳ ಇಲ್ಲವೇ ಬಣ್ಣ ಹಾಕಿದ, ಸಂಸ್ಕರಿಸಿದ  ಸಕ್ಕರೆ ಯುಕ್ತ , ಎಲ್ಲಾ ಪದಾರ್ಥಗಳು, ಸಕ್ಕರೆ ಕ್ಯೂಬ್ ಗಳು, (5% /ಶೂನ್ಯ ಜಿ.ಎಸ್.ಟಿ ಹೊರತು ಪಡಿಸಿ) | 18% | 12% |
| 6 | ಹತ್ತಿಯ ಕೈಚೀಲಗಳು ಮತ್ತು ಶಾಪಿಂಗ್ ಚೀಲಗಳು | 18% | 12% |
| 7 | ಗೋಣಿಯ ಕೈಚೀಲಗಳು ಮತ್ತು ಶಾಪಿಂಗ್ ಚೀಲಗಳು | 18% | 12% |
| 8 | ಪಾಸ್ತ, ಸ್ಪಗಾಟಿ, ಮಕರೋನಿ, ಶಾವಿಗೆ, ಲಸಗ್ನೆ, ನೋಚಿ,ರವೌಲಿ, ಕನೆಲ್ಲೋನಿ, ಕೌಸ್ಕಸ್ ತರಹದ ಹಸಿ/ಬೇಯಿಸಿದ/ ಮಾಂಸ ಇಲ್ಲವೇ ಇತರೆ ವಸ್ತುವಿನಿಂದ ಹೂರಣದಂತೆ ತುಂಬಿದ /ಇನ್ನಿತರೆ ತಯಾರಿಸಿದ ಖಾದ್ಯಗಳು | 18% | 12% |
| 9 | ಕರಿಬೇವು ಲೇಹ, ಮಯೋನೀಸ್ ಮತ್ತಿತರೆ ಸಲಾಡ್ ಡ್ರಸಿಂಗ್, ಒಗ್ಗರಣೆ ಸಹಿತ ಮಿಶ್ರಿತ ,ಕಾಂಡಿಮೆಂಟ್ಸ್ | 18% | 12% |
| 10 | ಐವಲಕ್ಕಿ ಚಿಕ್ಕಿ, ಕಡಲೆಬೀಜದ ಚಿಕ್ಕಿ, ಎಳ್ಳಿನ ಚಿಕ್ಕಿ, ಇಳ್ಳಿನ ಪಟ್ಟಿ, ಎಳ್ಳಿನ ರೇವಡಿ, ಸಕ್ಕರೆ ಮಖನ,ಗಜಕ್, ಕಡಲೆಕಾಯಿ ಸಹಿಪದಾರ್ಥಗಳು , ಖಾಜಾ, ಖಜುಲಿ,ಅನಾರಸ,ಸಕ್ಕರ, ಹರದಾ, ಸಕರಿಯ, ಗಟ್ಟ, ಕುಲಿಯ, ಇಲಾಯಿಚಿದಾನ, ಲುಕುಮ್ ದಾನಾ | 18% | 5% |
| 11 | ಚರ್ಮದಿಂದ ತಯಾರಾದ/ಚರ್ಮ ಯುಕ್ತ ಪದಾರ್ಥಗಳು | 12% | 5% |
| 12 | ಇಡ್ಲಿ /ದೋಸೆ ಹಿಟ್ಟು (ದ್ರವ್ಯ ರೂಪದ) | 12% | 5% |
| 13 | ಬೂದಿ ಧೂಳಿನ ಇಟ್ಟಿಗೆ, 90% ಅಥವಾ ಹೆಚ್ಚು ಬೂದಿ ಧೂಳಿಂದ ಯುಕ್ತ ಧೂಳು | 12% | 5% |
| 14 | ಅರಗು/ಚಿಪ್ಪಿನ ಬಳೆಗಳು | 3% | 0 |

| ಕ್ರಮ ಸಂಖ್ಯೆ | ವಿವರಣೆ | ಶಿಫಾರಸು ಮಾಡಿರುವ/ ಜಾರಿಯಾಗಿರುವ ಜಿ.ಎಸ್.ಟಿ ದರಗಳ ಮಾರ್ಪಾಟುಗಳು |
|---|---|---|

| | 18 ಜನವರಿ, 2018 ರಂದು ನಡೆದ 25ನೇ ಸಭೆ | ಹಿಂದಿನ ದರಗಳು | ಪ್ರಸ್ತುತ ದರಗಳು |
|---|---|---|---|
| 1 | ಕಟ್ಟಡ ನಿರ್ಮಾಣದಲ್ಲಿ ಬಳಸುವ ಬೊಂಬಿನ ಜೋಡಣೆಗಳು | 18% | 12% |
| 2 | ಸಕ್ಕರೆ ರಸದಿಂದ ತಯಾರಿಸಿದ ಸಿಹಿ ತಿನಿಸುಗಳು | 18% | 12% |
| 3 | ಹುಣಸೆ ಪುಡಿ | 18% | 5% |
| 4 | ಕೋನ್ ಗಳಲ್ಲಿ ಲಭ್ಯವಾಗುವ ಮೆಹಂದಿ ಪೇಸ್ಟ್ | 18% | 5% |
| 5 | ಹೆಣಿಗೆ ಪದಾರ್ಥಗಳಿಂದ ಹೆಣೆದಿರುವ ಪದಾರ್ಥಗಳು, ಬುಟ್ಟಿ , ಕುಕ್ಕೆ, ಮಂಕ್ರಿ ಮುಂತಾದುವುಗಳು, ಸಳ್ಳು ಹೆಣಿಗೆ ಪದಾರ್ಥಗಳು | 12% | 5% |
| | 21 ಜುಲೈ, 2018 ರಂದು ನಡೆದ 28ನೇ ಸಭೆ | | |
| 1 | • ಕಲ್ಲು/ಅಮೃತ ಶಿಲೆ/ಮರ ದ ವಿಗ್ರಹಗಳು<br>• ರಾಖಿ (ಬಹುಮೂಲ್ಯ/ಅರೆ ಬಹುಮೂಲ್ಯ ವಸ್ತುಗಳನ್ನುಹೊರತುಪಡಿಸಿ– ಅಧ್ಯಾಯ 71 )<br>• ಸ್ಯಾನಿಟರಿ ನ್ಯಾಪ್ಕಿನ್<br>• ನಾರಿನ ಗೊಬ್ಬರ<br>• ತೇಗ ಎಲೆಗಳು, ಸಿಯಾಲಿ ಎಲೆಗಳು ಮತ್ತು ಉತ್ಪನ್ನಗಳು, ಸಬೈ ಹಗ್ಗ<br>• ಫೂಲ್ ಭರೀ ಝಾದೂ (ಝಾದೂಗೆ ಕಚ್ಚಾ ಸಾಮಗ್ರಿ)<br>• ಖಾಲಿ ದೋನ | 18%/ 12%/ 5% | 0 |
| 2 | ಕೈ ಕಾಮಗಾರಿ ದರಿ<br>ಹೆಣೆದ ಟೋಪಿ/₹.1000/– ಬಿಡಿ ವಿಕ್ರಯ ಬೆಲೆ ಮೀರದ ಟೋಪಿಗಳು | 12% | 5% |
| 3 | ಹಿತ್ತಾಳೆಯ ಸೀಮೆಎಣ್ಣೆ ಪ್ರೆಜಷರ್ ಸ್ಟೋವ್ | 18% | 12% |
| 4 | ನೈಸರ್ಗಿಕ ಇಂಧನ ಗುಳಿಗೆಗಳು | 18% | 5% |
| 5 | ಬಿಡಿಯಾಗಿ ₹.1000/ ವರೆಗಿನ ಬೆಲೆಯ ಪಾದರಕ್ಷೆ ಜೋಡುಗಳಿಗೆ 5%<br>ಬಿಡಿಯಾಗಿ ₹.1000/ ವರೆಗಿನ ಬೆಲೆಯ ಪಾದರಕ್ಷೆ ಜೋಡುಗಳಿಗೆ 18% | 18% | 5% |
| | 22 ಡಿಸಂಬರ್, 2018 ರಂದು ನಡೆದ 31ನೇ ಸಭೆ | | |
| 1 | ರಿ–ಟ್ರೆಡ್ ಅಥವಾ ಉಪಯೋಗಿಸಿದ ನೋತರ ಸಂಸ್ಕರಿಸಿದ ರಬ್ಬರ್ ಟೈರುಗಳು | 28% | 18% |
| 2 | ಂ ಉಜ್ಜಿ ಸಂಸ್ಕರಿಸಿದ ಕಾರ್ಕ್<br>ಂ ನೈಸರ್ಗಿಕ ಕಾರ್ಕ್ ಇಂದ ತಯಾರಾದ ವಸ್ತುಗಳು<br>ಂ ಅಗ್ಲೊಮರೇಟೆ ಮಾಡಲಾದ ಕಾರ್ಕ್ | 18% | 12% |
| 3 | ಂ ನೈಸರ್ಗಿಕ ಕಾರ್ಕ್<br>ಂ ವಾಕಿಂಗ್ ಸ್ಟಿಕ್ | 12% | 5% |

## ಅಧ್ಯಾಯ 11

## ಸೇವೆಗಳಿಗೆ ಸಂಬಂಧಿಸಿದಂತೆ ತೆರಿಗೆ ದರದಲ್ಲಿ ಕಡಿತ

### ಎಂ.ಎಸ್.ಎಂ.ಈ ಸೇವಾಕ್ಷೇತ್ರದ ಹಿತದೃಷ್ಟಿಯಿಂದ ತೆಗೆದುಕೊಂಡಿರುವ ಕ್ರಮಗಳು

ಬಹುತೇಕ ಬಿಡಿ ಕಾಮಗಾರಿ ಸೇವೆಗಳು, ಮುಖ್ಯವಾಗಿ ವಸ್ತ್ರ, ಚರ್ಮ,ಖಾದ್ಯ ಸಂಸ್ಕರಣೆ, ಮುದ್ರಣ, ಆಭರಣ ಮತ್ತು ವಜ್ರಗಳು, ಕರಕುಶಲ ವಸ್ತುಗಳು ಇವುಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ದರವನ್ನು 18% ಇಂದ 5% ಗೆ ಕಡಿತಗೊಳಿಸಲಾಗಿದೆ.

- ಕಾರ್ಯಾಲಯಗಳು, ಶಾಲೆಗಳು, ಆಸ್ಪತ್ರೆಗಳು, ಮುಂತಾದ ವಾಣಿಜ್ಯ ಅಥವಾ ಔದ್ಯೋಗಿಕ ಪ್ರಯೋಜನಗಳನ್ನು ಹೊರತುಪಡಿಸಿ, ರಸ್ತೆ ಕಾಮಗಾರಿ, ಸೇತುವೆ, ನಾಲೆಗಳು, ಅಣೆಕಟ್ಟು ಮುಂತಾದ ಸಾರ್ವಜನಿಕ ಸಂರಚನೆಗಳ ನಿರ್ಮಾಣ ಕಾರ್ಯಕ್ಕೆ ಒಪ್ಪಿಸುವ ಸರಕಾರಿ ಗುತ್ತಿಗೆಗಳಿಗೆ ಜಿ.ಎಸ್.ಟಿ ದರವನ್ನು 18% ಇಂದ 12% ಗೆ ಕಡಿತಗೊಳಿಸಲಾಗಿದೆ. ಇಂತಹ ಕಾಮಗಾರಿ ಗುತ್ತಿಗೆಯನ್ನು ಒಪ್ಪಿಕೊಳ್ಳುವ ಉಪಕ್ರಮಗಳಿಗೂ ಸಹ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಬಹುತೇಕ ಸರಕಾರಿ ಗುತ್ತಿಗೆದಾರರು ಮತ್ತು ಉಪ–ಗುತ್ತಿಗೆದಾರರು ಎಂ.ಎಸ್.ಎಂ.ಈ ಕ್ಷೇತ್ರಕ್ಕೆ ಸೇರಿರುತ್ತಾರೆ.

- ದಿನಾಂಕ 01.04.2019 ರ ಅನ್ವಯ, ಪ್ರಧಾನ ಮಂತ್ರಿ ಆವಾಸ್ ಯೋಜನಾ(ಪಿ.ಎಂ.ಎ.ವೈ) ಅಡಿಯಲ್ಲಿ ಬಡವರಿಗಾಗಿ ನಿರ್ಮಾಣವಾಗುವ ಮನೆಗಳಿಗೆ ಅನ್ವಯಿಸುವಂತೆ ಜಿ.ಎಸ್.ಟಿ ದರವನ್ನು 8% ಇಂದ 1% ಗೆ ಕಡಿತಗೊಳಿಸಲಾಗಿದೆ.

- ರೆಸ್ಟೋರೆಂಟ್‌ಗಳು (ಪ್ರತಿದಿನ ಪ್ರತಿ ಘಟಕಕ್ಕೆ ಸಂಬಂಧಿಸಿದಂತೆ, ₹.7,500/– ಅಥವಾ ಮಿಗಿಲಾದ ಟ್ಯೆರಿಫ್ ಹೊಂದಿರುವ ಹೊಟೆಲುಗಳಲ್ಲಿನ ರೆಸ್ಟೋರೆಂಟ್‌ಗಳನ್ನು ಹೊರತು ಪಡಿಸಿ) ಒದಗಿಸುವ ಸೇವೆಗಳ ಮೇಲೆ ಜಿ.ಎಸ್.ಟಿ ದರವನ್ನು 8% ಇಂದ 1% ಗೆ ಕಡಿತಗೊಳಿಸಲಾಗಿದೆ.

- ದಿನಕ್ಕೆ ₹.1000/– ಕ್ಕಿಂತ ಕಡಮೆ ಟ್ಯೆರಿಫ್ ಹೊರಿಸುವ ಹೊಟೆಲುಗಳ ಮೇಲೆ ಜಿ.ಎಸ್.ಟಿ ವಿನಾಯಿತಿ ನೀಡಲಾಗಿದೆ, ₹.2500/– ರ ವರೆಗೂ ಟ್ಯೆರಿಫ್ ಹೊರಿಸುವ ಹೊಟೆಲುಗಳ ಮೇಲೆ ಜಿ.ಎಸ್.ಟಿ ದರವನ್ನು 12% ಗೆ ಕಡಿತಗೊಳಿಸಲಾಗಿದೆ. ಈ ಎರಡೂ ತರಹದ ವಸತಿಯನ್ನು ಪೂರೈಸುವ ಹೋಟೆಲುಗಳು ಎಂ.ಎಸ್.ಎಂ.ಈ ಕ್ಷೇತ್ರಕ್ಕೆ ಸೇರಿರುತ್ತವೆ.

- ಎಂ.ಎಸ್.ಎಂ.ಈ ಯೋಜನೆಯಡಿಯಲ್ಲಿ ಸೇರಿರುವ ಎರಡು ಪ್ರಮುಖ ಕ್ಷೇತ್ರಗಳೆಂದೆ, ಆರೋಗ್ಯ ಸೇವೆಗಳನ್ನು ಪೂರೈಸುವ ಚಿಕಿತ್ಸಾ ಸಂಘಟನೆಗಳು ಮತ್ತು ಶಕ್ಷಣ ಸೇವೆಗಳನ್ನು ಒದಗಿಸುವ ಶಿಕ್ಷಣ ಸಂಸ್ಥೆಗಳು, ಇವುಗಳಿಗೆ ಜಿ.ಎಸ್.ಟಿ ವಿನಾಯಿತಿ ನೀಡಲಾಗಿದೆ.

- ₹.20 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಇರುವ ಸೇವಾ ಪೂರೈಕೆದಾರರು (ಜಮ್ಮು ಕಾಶ್ಮೀರವನ್ನು ಹೊರತುಪಡಿಸಿ ವಿಶೇಷ ವರ್ಗದ ರಾಜ್ಯಗಳಿಗೆ ₹.10 ಲಕ್ಷ ಪರಿಮಿತಿ) ಅಂತರ್ರಾಜ್ಯಗಳಲ್ಲಿ ತೆರಿಗೆಗೆ ಅರ್ಹವಾದ ಸೇವಾ ಪೂರೈಕೆಗಳನ್ನು ಮಾಡುತ್ತಿದ್ದರೂ ಸಹ ನೋಂದಣಿಕರಣದಿಂದ ವಿನಾಯಿತಿ ನೀಡಲಾಗಿದೆ. ಈ ಕ್ರಮದಿಂದ ಸಣ್ಣ ಮಟ್ಟದಲ್ಲಿ ಸೇವೆಗಳನ್ನು ಪೂರೈಸುವವರಿಗೆ ತೆರಿಗೆ ಹೊರೆಯನ್ನು ಗಮನಾರ್ಹವಾಗಿ ಕಡಿತಗೊಳಿಸುತ್ತದೆ.

- ಎಂ.ಎಸ್.ಎಂ.ಈ ಕ್ಷೇತ್ರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸರಕು ಸಾಗಣೆ ಏಜೆನ್ಸಿಗಳು (ಜಿ.ಟಿ.ಏ) ಪೂರೈಸುವ ಸೇವೆಗಳನ್ನು ರಿವರ್ಸ್ ಚಾರ್ಜ್ ಪ್ರಣಾಲಿಕೆಯಲ್ಲಿ ಇರಿಸಿರುವುದರಿಂದ ಇಡೀ ತೆರಿಗೆ ಹೊರೆಯು ಸೇವೆಗಳನ್ನು ಪಡೆಯುವವರ ಮೇಲೆ ಅನ್ವಯವಾಗುತ್ತದೆ. ಜಿ.ಟಿ.ಏ ಗಳು ಜಿ.ಎಸ್.ಟಿ ಯನ್ನು ಪೂರ್ಣ ಐ.ಟಿ.ಸಿ ಸೌಲಭ್ಯದೊಂದಿಗೆ 12% ದರದಲ್ಲಿ ಪಾವತಿಸಬಹುದು.

- ವಿಮಾ ಏಜೆಂಟುಗಳು, ವಸೂಲಿ ಏಜೆಂಟುಗಳು ಅಥವಾ ಪ್ರತ್ಯೇಕವಾಗಿ ನೇರ ಮಾರಾಟಗಾರರು ಪೂರೈಸುವ ಸೇವೆಗಳನ್ನು ರಿವರ್ಸ್ ಚಾರ್ಜ್ ಪ್ರಣಾಲಿಕೆಯಲ್ಲಿ ಇರಿಸಿರುವುದರಿಂದ ಇಡೀ ತೆರಿಗೆ ಹೊರೆಯು ಸೇವೆಗಳನ್ನು ಪಡೆಯುವವರ ಮೇಲೆ ಅನ್ವಯವಾಗುತ್ತದೆ.

- ಭಾರತೀಯ ರೈಲು  ಅಥವಾ ಭಾರತೀಯ ರೈಲು ಖಾದ್ಯ ಸರಬರಾಜು ಮತ್ತು ಯಾತ್ರಾ ನಿಗಮ ನಿಯಮಿತ ಇಲ್ಲವೇ ಇವುಗಳ ಮೂಲಕ ಲೈಸೆಂಸ್ ಪಡೆದ ಸಂಸ್ಥೆಗಳು ರೈಲಿನಲ್ಲಿ ಅಥವಾ ಪ್ಲಾಟ್‌ಫಾರ್ಮ್‌ನಲ್ಲಿ ಪೂರೈಕೆ ಮಾಡುವ ಜನೋಪಯೋಗಿ ಪದಾರ್ಥಗಳು, ಖಾದ್ಯ ಮತ್ತು ಪಾನೀಯಗಳ ಮೇಲಿನ ಜಿ.ಎಸ್.ಟಿ ದರವನ್ನು 5% ಗೆ ಕಡಿತಗೊಳಿಸಲಾಗಿದೆ.

- ವ್ಯಾಪಾರ ಬಾತ್ಮೀದಾರರು , ವ್ಯಾಪಾರ ಸೌಕರ್ಯ ಒದಗಿಸುವ, ನಿಗಮ ನಿಕಾಯಗಳನ್ನು ಹೊರತು ಪಡಿಸಿ, ನೋಂದಾಯಿತ ತೆರಿಗೆದಾರರಿಗೆ ರಕ್ಷಣಾ ಸಿಬ್ಬಂದಿಯನ್ನು ಒದಗಿಸುವ ಅನ್ಯ ವ್ಯಕ್ತಿಗಳು, ಈ ಸೇವೆಗಳನ್ನು ಪೂರೈಸುವವರನ್ನು ರಿವರ್ಸ್ ಚಾರ್ಜ್ (ವ್ಯತಿರಿಕ್ತ ತೆರಿಗೆ) ಪ್ರಣಾಲಿಕೆಯಲ್ಲಿ ಇರಿಸಿರುವುದರಿಂದ ಇಡೀ ತೆರಿಗೆ ಹೊರೆಯು ಸೇವೆಗಳನ್ನು ಪಡೆಯುವವರ ಮೇಲೆ ಅನ್ವಯವಾಗುತ್ತದೆ.

- ಸರಕು ಸರಬರಾಜು ವಾಹನಗಳಿಗೆ ಅನ್ವಯಿಸುವಂತೆ ಅನ್ಯ ಪಾರ್ಟಿ ವಿಮೆಕಂತಿನ ಮೇಲಿನ ಜಿ.ಎಸ್.ಟಿ ದರವನ್ನು 18% ಇಂದ 12% ಗೆ ಕಡಿತಗೊಳಿಸಲಾಗಿದೆ.

- ಈ–ಪುಸ್ತಕ ಪೂರೈಕೆ ಸೇವೆಗೆ ಅನ್ವಯಿಸುವಂತೆ ಜಿ.ಎಸ್.ಟಿ ದರವನ್ನು 5% ಗೆ ಕಡಿತಗೊಳಿಸಲಾಗಿದೆ.

- ಎಂ.ಎಸ್.ಎಂ.ಈ ಕ್ಷೇತ್ರವನ್ನು ಬಲಗೊಳಿಸಲು , ದಿನಾಂಕ 1.04.2019 ರ ಅನ್ವಯ, ಸೇವಾ ಪೂರೈಕೆದಾರರಿಗಾಗಿಯೇ ಹೊಸದಾಗಿ ಸಂಯೋಜಿತ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಕನಿಷ್ಠ ₹.50 ಲಕ್ಷದವರೆಗೂ ವಾರ್ಷಿಕ ವಹಿವಾಟು ಹೊಂದಿರುವ ಸೇವಾ ಪೂರೈಕೆದಾರರು ಈ ಸೌಲಭ್ಯವನ್ನು ಪಡೆಯಬಹುದು.  ಮೇಲ್ಕಂಡ ಹೊಸ ಸಂಯೋಜಿತ ಯೋಜನೆಯ ಲಾಭ ಪಡೆಯುವ ಪೂರೈಕೆದಾರರು,  6% ದರದಲ್ಲಿ ಜಿ.ಎಸ್.ಟಿ ಪಾವತಿಸಬಹುದು ಆದರೆ ಹೂಡುವಳಿ ತೆರಿಗೆ ಜಮೆ ಸೌಲಭ್ಯ ದೊರಕುವುದಿಲ್ಲ.

# ಭಾಗ III

## ಎಂ.ಎಸ್.ಎಂ.ಈ ಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು ಮತ್ತು ಸಮಾಧಾನ

# ಎಂ.ಎಸ್.ಎಂ.ಈ ಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು

ಪ್ರಶ್ನೆ: ಜಿ.ಎಸ್.ಟಿ ಎಂದರೇನು ?

ಉತ್ತರ: ಜಿ.ಎಸ.ಟಿ ಎಂದರೆ ಸರಕು ಮತ್ತು ಸೇವಾ ತೆರಿಗೆ, ಈ ತೆರಿಗೆಯನ್ನು ಸರಕುಗಳ ಅಥವಾ ಸೇವೆಗಳ ಅಥವಾ ಇವೆರಡರ ಪೂರೈಕೆಗಳ ಮೇಲೆ ಹೊರಿಸಲಾಗುತ್ತದೆ. "ಪೂರೈಕೆ" ಎಂಬುದು ಕಾನೂನಿನ ಪದವಾಗಿದ್ದು ವಿಸ್ತೃತ ವ್ಯಾಪ್ತಿ ಹೊಂದಿರುತ್ತದೆ, ವಿಭಿನ್ನ ಪ್ರಕಾರದ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಅನ್ಯಥಾ ನಮೂದಿಸದಿದ್ದಲ್ಲಿ, ಯಾವುದೇ 'ಪೂರೈಕೆ'ಯನ್ನು ಲಾಭಕ್ಕಾಗಿ ಮತ್ತು ವ್ಯಾಪಾರ ಸರಪಳಿಯನ್ನು ಮುಂದುವರಿಸಲು ಮಾಡಲಾಗುತ್ತದೆ. ಉದಾಹರಣೆಗೆ, ಸಗಟು ಮಾರಾಟಗಾರರಿಂದ ಚಿಲ್ಲರೆ ವ್ಯಾಪಾರಿಗಳಿಗೆ ಒಪ್ಪಂದದ ಬೆಲೆಗೆ ಮಾರುವುದು ಒಂದು ರೀತಿಯ ಪೂರೈಕೆ.

ಪ್ರಶ್ನೆ: ಯಾವ ತರಹದ ಮೇಲೆ ಜಿ.ಎಸ್.ಟಿ ಹೊರಿಸಲಾಗುತ್ತದೆ ?

ಉತ್ತರ: ಲಾಭಕ್ಕಾಗಿ ಮಾಡುವ ಮತ್ತು ವ್ಯಾಪಾರ ಸರಪಳಿಯನ್ನು ಮುಂದುವರಿಸುವ ಉದ್ದೇಶ್ಯದ ಎಲ್ಲಾ ಪೂರೈಕೆಗಳ ಮೇಲೂ ಜಿ.ಎಸ್.ಟಿ ಹೊರಿಸಲಾಗುತ್ತದೆ. ಮೇಲಿನ ಶರತ್ತುಗಳು ಪೂರ್ಣ ಗೊಳ್ಳದಿದ್ದರೂ ಪೂರೈಕೆ ಎಂದು ಪರಿಗಣಿಸಲಾಗುವ ಕೆಲವು ಅಪವಾದಗಳು ಇವೆ. ಉದಾಹರಣೆಗೆ: ಯಾವುದೇ ಲಾಭವಿಲ್ಲದಿದ್ದರೂ ವ್ಯಾಪಾರ ಸರಪಳಿಯನ್ನು ಮುಂದುವರಿಸಲು ಸರಕುಗಳ ಅಂತರರಾಜ್ಯ ಪೂರೈಕೆ .

ಪ್ರಶ್ನೆ:ಜಿ.ಎಸ್.ಟಿ ಯನ್ನು ಸರಕುಗಳು, ಸೇವೆಗಳು ಇಲ್ಲವೇ ಇವೆರಡನ್ನೂ ಸೇರಿದಂತೆ ಹೊರಿಸಲಾಗುತ್ತದೆಯೇ ?

ಉತ್ತರ: ಇಲ್ಲ. ಸಂವಿಧಾನದಲ್ಲಿ, ಜನಬಳಕೆಯ ಮದ್ಯಸಾರದ ಮೇಲೆ ಜಿ.ಎಸ್.ಟಿ ಹೊರಿಸುವುದು ನಿಷೇಧಿಸಲಾಗಿದೆ. ಕಚ್ಚಾ ತೈಲ, ಮೊಟಾರು ಸ್ಪಿರಿಟ್ (ಪೆಟ್ರೋಲ್), ಹೆಚ್ಚು ವೇಗದ ಡೀಸಲ್, ವೈಮಾನಿಕ ಇಂಧನ ಮತ್ತು ನೈಸರ್ಗಿಕ ಅನಿಲದ ಮೇಲೆ ಜಿ.ಎಸ್.ಟಿಯನ್ನು ಜಿ.ಎಸ್.ಟಿ ಪರಿಷತ್ತು ಭವಿಷ್ಯದಲ್ಲಿ ನಿಗದಿ ಪಡಿಸುವ ದಿನಾಂಕದಿಂದ ಜಾರಿಗೊಳಿಸಲಾಗುವುದು. ವಿದ್ಯುತ್ತಿನ ಮೇಲೆ ಜಿ.ಎಸ್.ಟಿ ವಿನಾಯಿತಿ ಇದೆ. ಕಾಯಿದೆಯ ದೃಷ್ಟಿಯಲ್ಲಿ, ಸೆಕ್ಯೂರಿಟಿಗಳು ಸರಕೂ ಅಲ್ಲ, ಸೇವೆಯೂ ಅಲ್ಲ, ಹಾಗಾಗಿ ಸೆಕ್ಯೂರಿಟಿಗಳ ಪೂರೈಕೆಯು ತೆರಿಗೆಯ ವ್ಯಾಪ್ತಿಗೆ ಬರುವುದಿಲ್ಲ. ಇನ್ನೂ ಅನೇಕ ಸರಕು ಮತ್ತು ಸೇವೆಗಳನ್ನು ಜಿ.ಎಸ್.ಟಿ ಇಂದ ವಿನಾಯಿತಿಗೊಳಿಸಲಾಗಿದೆ.

ಪ್ರಶ್ನೆ: ವಭಿನ್ನ ಸರಕುಗಳ ಮತ್ತು ಸೇವೆಗಳ ಮೇಲೆ ಎಷ್ಟು ತರಹದ ಜಿ.ಎಸ್.ಟಿ ಯನ್ನು ವಿಧಿಸಲಾಗುತ್ತದೆ?

ಉತ್ತರ: ಜಿ.ಎಸ್.ಟಿ ಯಲ್ಲಿ, ಕೇಂದ್ರ ಹಾಗೂ ರಾಜ್ಯಗಳಿಂದ ಹೊರಿಸಲ್ಪಡುವ ಒಟ್ಟಾರೆ ಎರಡು ಬಗೆಯ ತೆರಿಗೆ ಅಡಗಿರುತ್ತದೆ. ರಾಜ್ಯ / ಕೇಂದ್ರಾಡಳಿತ ಪ್ರದೇಶದಲ್ಲಿ ಮಾಡಲಾಗುವ ಪ್ರತಿಯೊಂದು ಪೂರೈಕೆಯ ಮೇಲೆ ಹೊರಿಸಲಾಗುವ ಜಿ.ಎಸ್.ಟಿ ಯಲ್ಲಿ ಎರಡು ಅಂಶಗಳಿರುತ್ತವೆ, ಕೇಂದ್ರೀಯ ತೆರಿಗೆ ಮತ್ತು ರಾಜ್ಯ/ಕೇಂದ್ರಾಡಳಿತ ತೆರಿಗೆ, ಸಿ.ಜಿ.ಎಸ್.ಟಿ ಮತ್ತು ಎಸ್. ಜಿ.ಎಸ್.ಟಿ/ಯೂ.ಟಿ. ಜಿ.ಎಸ್.ಟಿ ಕ್ರಮವಾಗಿ. ರಾಜ್ಯಗಳ / ಕೇಂದ್ರಾಡಳಿತ ಪ್ರದೇಶದ ನಡುವಣ ಸರಕು ಇಲ್ಲವೇ ಸೇವೆಯ ಪೂರೈಕೆಯ ಮೇಲೆ ಸಮಗ್ರ ಜಿ.ಎಸ್.ಟಿ, ಐ.ಜಿ.ಎಸ್.ಟಿ ಹೊರಿಸಲಾಗುತ್ತದೆ. ಸಿ.ಜಿ.ಎಸ್.ಟಿ ಮತ್ತು ಎಸ್. ಜಿ.ಎಸ್.ಟಿ/ಯೂ.ಟಿ. ಜಿ.ಎಸ್.ಟಿ ದರಗಳು ಸಮಪಾಲು ಹೊಂದಿರುತ್ತವೆ. ಐ.ಜಿ.ಎಸ್.ಟಿ ಯು ಸಿ.ಜಿ.ಎಸ್.ಟಿ ಮತ್ತು ಎಸ್. ಜಿ.ಎಸ್.ಟಿ/ಯೂ.ಟಿ.ಜಿ.ಎಸ್.ಟಿ ಗಳ ಕೂಡಿಕೆಯಾಗಿರುತ್ತದೆ.

ಪ್ರಶ್ನೆ: ಕಾಯಿದೆಯಡಿ, ನೋಂದಾಯಿತ ವ್ಯಕ್ತಿಯು ವಿಭಿನ್ನ ಅನುಮತಿಗಳನ್ನು ಪಡೆಯಲು, ಲೆಕ್ಕ ಪರಿಶೀಲನೆಗೆ ಕೇಂದ್ರ ಹಾಗೂ ರಾಜ್ಯಗಳ ಎರಡೂ ಪ್ರಾಧಿಕರಣಗಳನ್ನು ಭೇಟಿ ಮಾಡಬೇಕೆ ?

ಉತ್ತರ: ಇಲ್ಲ. ನೋಂದಾಯಿತ ವ್ಯಕ್ತಿಯು ವ್ಯಾವಹಾರಿಕ ದೃಷ್ಟಿಯಿಂದ ಒಂದು ತೆರಿಗೆ ಪ್ರಾಧಿಕಾರವನ್ನು ಭೇಟಿ ಮಾಡಬೇಕಾಗುತ್ತದೆ. ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ ಕೇಂದ್ರ ಇಲ್ಲವೇ ರಾಜ್ಯದ ಒಂದೇ ತೆರಿಗೆ ಆಡಳಿತ ಕಾರ್ಯಾಲಯವು ಇರುತ್ತದೆ. ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ ಒಂದೇ ತೆರಿಗೆ ಪ್ರಾಧಿಕರಣವು ಸಿ.ಜಿ.ಎಸ್.ಟಿ, ಎಸ್.ಜಿ.ಎಸ್.ಟಿ/ಯೂ.ಟಿ.ಜಿ.ಎಸ್.ಟಿ, ಐ.ಜಿ.ಎಸ್.ಟಿ, ಈ ಎಲ್ಲಾ ಪ್ರಕಾರಗಳ ತೆರಿಗೆ ಕಾರ್ಯವಿಧಿಗಳನ್ನು ಪೂರ್ಣಗೊಳಿಸ ಬಹುದು. ನೋಂದಾಯಿತ ವ್ಯಕ್ತಿಗೆ ಅವರಿಗೆ ಅನ್ವಯಿಸುವ ತೆ–ರಿಗೆ ಪ್ರಾಧಿಕರಣದ ವಿವರವನ್ನು ನೀಡಲಾಗುವುದು. ಸಿ.ಜಿ.ಎಸ್.ಟಿ, ಎಸ್.ಜಿ.ಎಸ್.ಟಿ/ಯೂ.ಟಿ.ಜಿ.ಎಸ್.ಟಿ, ಐ.ಜಿ.ಎಸ್.ಟಿ ಗೆ ಸಂಬಂಧಿಸಿದಂತೆ ಒಂದೇ ನೋಂದಣಿಯನ್ನು ನೀಡಲಾಗುವುದು.

ಪ್ರಶ್ನೆ: ಗಂತವ್ಯ ಆಧಾರಿತ ಗ್ರಾಹಕ ತೆರಿಗೆ ಎಂದರೇನು ?

ಉತ್ತರ: ಒಂದು ರಾಜ್ಯದಲ್ಲಿ ಪೂರೈಕೆಯ ಮೂಲವಿದ್ದು ಇನ್ನೊಂದು ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಸರಕು ಅಥವಾ ಸೇವೆ ಪೂರೈಕೆಯಾದರೆ, ತೆರಿಗೆಯು ಯಾವ ರಾಜ್ಯಕ್ಕೆ ಬೇಕಾದರೂ ಸೇರಬಹುದು. ಗಂತವ್ಯ ಆಧಾರಿತ ಗ್ರಾಹಕ ತೆರಿಗೆ ಪದ್ದತಿಯಲ್ಲಿ ತೆರಿಗೆಯು, ಪೂರೈಕೆಯನ್ನು ಬಳಸುವ ರಾಜ್ಯಕ್ಕೆ ಸೇರುತ್ತದೆ. ಪೂರೈಕೆಯು ಉತ್ಪಾದನೆಯಮೂಲ ಆಧಾರಿತ ತೆರಿಗೆ ಪದ್ಧತಿಯಲ್ಲಿ, ಪೂರೈಕೆಯು ಯಾವ ರಾಜ್ಯದಿಂದ ಮಾಡಲಾಗುತ್ತದೆಯೋ ಆ ರಾಜ್ಯಕ್ಕೆ ತೆರಿಗೆಯು ಸೇರುತ್ತದೆ. ಜಿ.ಎಸ್.ಟಿಯು ಮೂಲತಹ ಗಂತವ್ಯ ಆಧಾರಿತ ಗ್ರಾಹಕ ತೆರಿಗೆ. ಉದಾಹರಣೆಗೆ: ಚೆನ್ನೈನಲ್ಲಿ ಉತ್ಪಾದಿತ ಕಾರ್ ಮುಂಬೈಯಲ್ಲಿ ಮಾರಾಟವಾದರೆ, ಎಸ್.ಜಿ. ಎಸ್.ಟಿ(ಅಥವಾ ಐ.ಜಿ.ಎಸ್.ಟಿ ಯ ರಾಜ್ಯ ತೆರಿಗೆ ಅಂಶ) ಮಹಾರಾಷ್ಟ್ರ ರಾಜ್ಯಕ್ಕೆ ಸೇರುತ್ತದೆ, ತಮಿಳುನಾಡಿಗೆ ಅಲ್ಲ.

ಪ್ರಶ್ನೆ: ಸರಕಾರಕ್ಕೆ ಯಾರು ಜಿ.ಎಸ್.ಟಿ ಪಾವತಿಸುತ್ತಾರೆ ?

ಉತ್ತರ: ಸಾಮಾನ್ಯವಾಗಿ ಪೂರೈಕೆದಾರರು ಸರಕಾರಕ್ಕೆ ಜಿ.ಎಸ್.ಟಿ ಪಾವತಿಸುತ್ತಾರೆ, ಅಂದರೆ ಪೂರೈಕೆಯ ನಂತರ ಗ್ರಾಹಕರಿಂದ ಜಿ.ಎಸ್.ಟಿ ಮೊತ್ತವನ್ನು ವಸೂಲಿ ಮಾಡುವವರು. ಪೂರೈಕೆದಾರರು ಲಾಭಾಂಶವಾಗಿ ಜಿ.ಎಸ್.ಟಿ ಮೊತ್ತವನ್ನು ಗ್ರಾಹಕರಿಂದ ವಸೂಲಿ ಮಾಡುತ್ತಾರೆ. ಆದರೆ ಕೆಲವು ಅಪವಾದಗಳಲ್ಲಿ, ಸರಕು ಅಥವಾ ಸೇವೆ ಪಡೆದವರು ವ್ಯತಿರಿಕ್ತ ತೆರಿಗೆ ಪಾವತಿ ಪದ್ಧತಿಯಲ್ಲಿ ಸರಕಾರಕ್ಕೆ ಜಿ.ಎಸ್.ಟಿ ಪಾವತಿಸುತ್ತಾರೆ.

ಪ್ರಶ್ನೆ: ಹೂಡುವಳಿ ತೆರಿಗೆ ಕ್ರೆಡಿಟ್ ಎಂದರೇನು?

ಉತ್ತರ: ವ್ಯಾಪಾರಿಗಳು ವ್ಯಾಪಾರದ ಸರಪಳಿಯಲ್ಲಿ ಇನ್ನೊಬ್ಬರಿಂದ ತಮ್ಮ ವ್ಯಾಪಾರಕ್ಕೆ ಬೇಕಾಗುವ ಸರಕುಗಳನ್ನು ಸೇವೆಗಳನ್ನು ಖರೀದಿಸುತ್ತಾರೆ. ಅಂತಹ ಖರೀದಿಗಳ ಮೇಲೆ ಅವುಗಳ ಪೂರೈಕೆದಾರರಿಂದ ತೆರಿಗೆ ವಸೂಲಿ ಮಾಡಲಾಗಿರುತ್ತದೆ. ಈಗಾಗಲೇ ಆ ವಸ್ತುಗಳಿಗೆ ತೆರಿಗೆ ಪಾವತಿ ಮಾಡಿರುವ ಕಾರಣ ಆ ಮೊತ್ತದ ಜಮೆಯನ್ನು ಹಿಂದಕ್ಕೆ ಪಡೆಯುವ ಸೌಲಭ್ಯ ಇದೆ. (ವ್ಯಾಪಾರಿಯು ಭವಿಷ್ಯದಲ್ಲಿ ತೆರಿಗೆ ಪಾವತಿಸುವಾಗ ಈಗಾಗಲೇ ವಸೂಲಾದ ತೆರಿಗೆ ಮೊತ್ತವನ್ನು ವಜಾ ಮಾಡಿಕೊಳ್ಳ ಬಹುದು.). ಸೇವೆ ಪಡೆಯುವವರಿಗೆ ಹೂಡುವಳಿ ತೆರಿಗೆ ಕ್ರೆಡಿಟ್ ಲಭ್ಯವಾಗುತ್ತದೆ..

ಪ್ರಶ್ನೆ: ವ್ಯಾಪಾರ ಸಮೂಹದ ಮೇಲೆ ಜಿ.ಎಸ್.ಟಿ ಪದ್ಧತಿಯು ಹೊರೆಯಾಗುತ್ತದೆಯೇ ?

ಉತ್ತರ: ಇಲ್ಲ. ವ್ಯತಿರಿಕ್ತವಾಗಿ, ಜಿ.ಎಸ್.ಟಿ ತೆರಿಗೆ ಪದ್ಧತಿಯು ಪ್ರಕ್ರಿಯೆಗಳನ್ನು ಸರಳಗೊಳಿಸಿ ತೆರಿಗೆ ಬದ್ಧತೆಯ ಹೊರೆಯನ್ನು ಕಡಿಮೆ ಮಾಡುತ್ತದೆ. ಜಿ.ಎಸ್.ಟಿ ಸರಳವಾದ, ದೇಶದೆಲ್ಲೆಡೆ ಸಮನಾಗಿ ಅಳವಡಿಸಿರುವ ತೆರಿಗೆಯು. ಜಿ.ಎಸ್.ಟಿ ಪದ್ಧತಿಯಲ್ಲಿ ಮಾನವ ಹಸ್ತಕ್ಷೇಪ ಕಡಿಮೆ, ಜಿ.ಎಸ್.ಟಿ.ಎನ್ ಮೂಲಕ ಮಾಹಿತಿ ತಂತ್ರಜ್ಞಾನದ ಬಲವಾದ ವೇದಿಕೆಯಡಿ ಕಾರ್ಯರೂಪಗೊಳ್ಳುತ್ತದೆ. ಮೊದಲಿನ ತೆರಿಗೆ ಪದ್ಧತಿಯಲ್ಲಿ, ಕೇಂದ್ರೀಯ ಅಬಕಾರಿ, ಸೇವಾ ತೆರಿಗೆ, ವ್ಯಾಟ್, ಮುಂತಾದ ಕೇಂದ್ರ ಹಾಗೂ ರಾಜ್ಯಗಳ ವಿಭಿನ್ನ ತೆರಿಗೆ ಪ್ರಕಾರಗಳನ್ನು ಪಾಲಿಸಬೇಕಾಗಿತ್ತು. ಜಿ.ಎಸ್.ಟಿ ಮೂಲಕ ದೇಶದಾದ್ಯಂತ ಸಮನಾದ, ಏಕೀಕೃತ ಪರೋಕ್ಷ ತೆರಿಗೆಯು ಜಾರಿಗೆ ಬಂದಿದೆ.

ಪ್ರಶ್ನೆ: ಜಿ.ಎಸ್.ಟಿ ನೋಂದಣಿಗೆ ಕನಿಷ್ಠ ಮಿತಿ ಎಷ್ಟು ?

ಉತ್ತರ: ಸರಕು ಪೂರೈಕೆದಾರರಿಗೆ, ಒಂದು ಪ್ಯಾನ್ ಸಂಖ್ಯೆಯಡಯಲ್ಲಿ ₹.40 ಲಕ್ಷ ಕ್ಕಿಂತ ಹೆಚ್ಚು ಸಮಗ್ರ ವಾರ್ಷಿಕ ವಹಿವಾಟು ಇರುವ ವ್ಯಾಪಾರಿಗಳು ಜಿ.ಎಸ್.ಟಿ ನೋಂದಣಿ ಪಡೆಯಬೇಕು. ಜಿ.ಎಸ್.ಟಿ ಕಾಯಿದೆಯ ಸೆಕ್ಷನ್ 24ರಲ್ಲಿ ಸೂಚಿಸಿರುವಂತೆ ಈ ನಿಯಮಕ್ಕೆ ಕೆಲವು ಅಪವಾದಗಳಿವೆ. ಮೇಲೆ ಹೇಳಿದ ಕಾಯಿದೆಯ ಸೆಕ್ಷನ್ 2(6)ರಲ್ಲಿ ಸಮಗ್ರ ವಹಿವಾಟಿನ ಪರಿಭಾಷೆ ಇದೆ. ಸೇವಾ ಪೂರೈಕೆಗೆ ಸಂಬಂಧಿಸಿದಂತೆ, ಸಮಗ್ರ ವಹಿವಾಟಿನ ಕನಿಷ್ಠ ಮಿತಿ ₹.20 ಲಕ್ಷ. ಕೆಲವು ವಶೇಷ ವರ್ಗದ ರಾಜ್ಯಗಳಿಗೆ ಸಂಬಂಧಿಸಿದಂತೆ ಸಮಗ್ರ ವಹಿವಾಟಿನ ಕನಿಷ್ಠ ಮಿತಿ ₹.10 ಲಕ್ಷ ಇರುತ್ತದೆ.

ಪ್ರಶ್ನೆ: ಕೃಷಿಕರಿಗೆ ನೋಂದಣಿ ದಾಯಿತ್ವ ಇರುತ್ತದೆಯೇ ?

ಉತ್ತರ: ಇಲ್ಲ. ಕೃಷಿಕರು ಭೂಮಿಯಿಂದ ಬೆಳೆದ ಬೆಳೆಗಳ ಪೂರೈಕೆಗೆ ಸೀಮಿತವಾದರೆ ನೋಂದಣಿಯ ಅವಶ್ಯಕತೆ ಇರುವುದಿಲ್ಲ.

ಪ್ರಶ್ನೆ: ಕನಿಷ್ಠ ಮಿತಿ ವಿನಾಯಿತಿ ಪಡೆಯಲು ಅತಿ ಮುಖ್ಯವಾಗಿ ಬೇಕಾಗುವ ಅರ್ಹತೆ ಏನು ?

ಉತ್ತರ: ಕನಿಷ್ಠ ಮಿತಿ ವಿನಾಯಿತಿ ಪಡೆಯಲು ಎಂ.ಎಸ್.ಎಂ.ಈ ಗಳು ಯಾವುದೇ ಅಂತರರಾಜ್ಯ ಪೂರೈಕೆಗಳನ್ನು ಮಾಡಬಾರದು, ಆದರೆ ಬೇರೆ ರಾಜ್ಯಗಳಿಂದ ಪೂರೈಕೆಯನ್ನು ಪಡೆಯ ಬಹುದು.

ಪ್ರಶ್ನೆ: ಜಿ.ಎಸ್.ಟಿ ವಿನಾಯಿತಿ ಪಡೆದ ಸರಕುಗಳ ಮತ್ತು ಸೇವೆಗಳನ್ನು ಮಾತ್ರ ನಾನು ಪೂರೈಕೆ ಮಾಡುತ್ತೇನೆ. ನಾನು ನೋಂದಣಿ ಪಡೆಯಬೇಕೆ ?

ಉತ್ತರ: ಇಲ್ಲ.

ಪ್ರಶ್ನೆ: ನೋದಣಿಗೆ ಅರ್ಜಿ ಸಲ್ಲಿಸದೆಯೇ ನಾನು ಪೂರೈಕೆಗಳನ್ನು ಹೇಗೆ ಮಾಡಬಹುದು ?

ಉತ್ತರ: ಜಿ.ಎಸ್.ಟಿ ಸಾಮಾನ್ಯ ಪೋರ್ಟಲ್ ನಲ್ಲಿ ಶೀಘ್ರವಾಗಿ ಅರ್ಜಿ ಸಲ್ಲಿಸಿ ಅರ್ಜಿ ಸಂದರ್ಭ ಸಂಖ್ಯೆಯನ್ನು (ಎ.ಆರ್.ಎನ್) ಪಡೆಯ ಬೇಕು. ಈ ಮಧ್ಯೆ ನಿಮ್ಮ ವ್ಯಾಪಾರವನ್ನು ಸ್ಥಗಿತ ಗೊಳಿಸುವ ಅವಶ್ಯಕತೆ ಇರುವುದಿಲ್ಲ. ಜಿ.ಎಸ್.ಟಿ.ಐ.ಎನ್ ಇಲ್ಲದೆಯೇ ಪೂರೈಕೆಯನ್ನು ಮಾಡಬಹುದು. ವಾರ್ಷಿಕ ವಹಿವಾಟು ₹. 20 ಲಕ್ಷ ಮಿತಿಯನ್ನು ದಾಟಿದ ದಿನದಿಂದ 30 ದಿನದೊಳಗೆ ಅಥವಾ ಸೆಕ್ಷನ್ 24 ರಲ್ಲಿ ನಮೂದಿಸಿರುವ ಯಾವುದೇ ಶರತ್ತಿನ ಅನ್ವಯ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಜಿ.ಎಸ್.ಟಿ ಕಾಯಿದೆ ಯ ಸೆಕ್ಷನ್ 31(3)(ಎ) ಅಡಿ ನೀಡಿರುವ ಅನುಮತಿಯಂತೆ ನೋಂದಣಿಯ ನಂತರ ನೋಂದಣಿಕರಣದ ಜಾರಿ ದಿನಾಂಕ ಮತ್ತು ಜಿ. ಎಸ್.ಟಿ.ಐ.ಎನ್ ಉತ್ಪತ್ತಿಯ ದಿನಾಂಕ ದೊಳಗಿನ ಅವಧಿಗೆ ಸಂಬಂಧಿಸಿದಂತೆ ಮಾಡಿದ ಎಲ್ಲಾ ಪೂರೈಕೆಗಳಿಗೆ ಪರಿಷ್ಕೃತ ಇನ್ವಾಯ್ಸ್ ಜಾರಿ ಮಾಡಬೇಕಾಗುತ್ತದೆ.

ಪ್ರಶ್ನೆ: ಜಿ.ಎಸ್.ಟಿ ಅಡಿಯಲ್ಲಿ ಹೊಸದಾಗಿ ನೋಂದಣಿಗೆ ಹೇಗೆ ಅರ್ಜಿ ಸಲ್ಲಿಸಬೇಕು ? ಎಷ್ಟು ಕಾಲಾವಧಿಯಲ್ಲಿ ನೋಂದಣಿ ದೊರೆಯುತ್ತದೆ ?

ಉತ್ತರ: ಜಿ.ಎಸ್.ಟಿ ಅಡಿಯಲ್ಲಿ ಹೊಸದಾಗಿ ನೋಂದಣಿ ಪಡೆಯಲು ಜಿ.ಎಸ್.ಟಿ ಸಾಮಾನ್ಯ ಪೋರ್ಟಲ್ ಅಲ್ಲಿ, ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಜಿ.ಎಸ್.ಟಿ ನೋಂದಣಿ–01 ಪ್ರಾರೂಪದಲ್ಲಿ ಅರ್ಜಿ ಸಲ್ಲಿಸಬೇಕು. ಯಾವುದೇ ಆಕ್ಷೇಪಣೆ ಇಲ್ಲದಿದ್ದರೆ, ವಿವರಣೆಗಳು ಮತ್ತು ದಾಖಲೆಗಳು ಕ್ರಮಬದ್ಧವಾಗಿದ್ದರೆ, 3 ಕಾರ್ಯ ದಿನಗಳಲ್ಲಿ ನೊಂದಣಿಯನ್ನು ನೀಡಲಾಗುತ್ತದೆ ( www.gst.gov.in )

ಪ್ರಶ್ನೆ: ನಾನು, ಮುದ್ರಣಗೊಂಡ ಮುದ್ರಿತ ಪುಸ್ತಕಗಳನ್ನು ಮಾರುವ ವಾರ್ಷಿಕ ವಹಿವಾಟು ₹.45 ಲಕ್ಷ ಹೊಂದಿರುವ ಎಸ್.ಎಂ.ಈ, ಜಿ.ಎಸ್.ಟಿ ಯಿಂದ ವಿನಾಯಿತಿ ಪಡೆದ ಚಿತ್ರ, ಡ್ರಾಯಿಂಗ್ , ಬಣ್ಣ ಹಾಕುವ ಪುಸ್ತಕಗಳು ಮೂಲತಃ ಮಕ್ಕಳ ಪುಸ್ತಕಗಳನ್ನು ಮುದ್ರಿಸುತ್ತೇನೆ. ನಾನು ನೋಂದಾಯಿಸಿಕೊಳ್ಳಬೇಕೆ ?

ಉತ್ತರ: ಇಲ್ಲ. ವಿನಾಯಿತಿ ಹೊಂದಿದ ಪೂರೈಕೆಗಳನ್ನು ಮಾತ್ರ ಮಾಡುವ ವ್ಯಕ್ತಿಯು ತನ್ನ ವಾರ್ಷಿಕ ವಹಿವಾಟಿನ ಮೊತ್ತ ಎಷ್ಟೇ ಇದ್ದರೂ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಜಿ.ಎಸ್.ಟಿ ಕಾಯಿದೆ ಯ ಸೆಕ್ಷನ್ 23(1)(ಎ) ಸಂದರ್ಭಿತ.

ಪ್ರಶ್ನೆ: ನಿಗದಿತ ಕನಿಷ್ಠ ಮಿತಿಯ ವಹಿವಾಟು ಇಲ್ಲದಿದ್ದರೂ ಸ್ವೈಚ್ಛಿಕವಾಗಿ ನಾನು ನೋಂದಣಿಯನ್ನು ಪಡೆಯ ಬಹುದೇ ? ಆ ಸಂದರ್ಭದಲ್ಲಿ ನಾನು ನೋಂದಣಿ ಪಡೆದ ನಂತರ ಮಾಡಿದ ಪೂರೈಕೆಗಳಿಗೆ ತೆರಿಗೆ ಪಾವತಿಸುವುದು ಆವಶ್ಯಕವೇ ?

ಉತ್ತರ: ಹೌದು. ನಿಗದಿತ ಕನಿಷ್ಠ ಮಿತಿಯ ವಹಿವಾಟು ಇಲ್ಲದಿದ್ದರೂ ಸ್ವೈಚ್ಛಿಕವಾಗಿ ನೋಂದಣಿಯನ್ನು ಪಡೆದರೆ ನಿಮ್ಮನ್ನು ಸಾಮಾನ್ಯ ತೆರಿಗೆದಾರರೆಂದು ಪರಿಗಣಿಸಲಾಗುವುದು. ಹೀಗಾಗಿ ನೋಂದಣಿ ಪಡೆದ ನಂತರ ಮಾಡಿದ ಪೂರೈಕೆಗಳಿಗೆ ತೆರಿಗೆ ಪಾವತಿಸುವುದು ಆವಶ್ಯಕವಾಗುತ್ತದೆ. ಹೂಡುವಳಿ ತೆರಿಗೆ ಜಮೆ ಲಾಭವನ್ನು ಪಡೆಯ ಬಹುದು.

ಪ್ರಶ್ನೆ: ತೆರಿಗೆದಾರರು ನೋಂದಣಿ ಪ್ರಮಾಣಪತ್ರವನ್ನು ಪಡೆಯುವುದು ಹೇಗೆ ?

ಉತ್ತರ: ಜಿ.ಎಸ್.ಟಿ. ಸಾಮಾನ್ಯ ಪೋರ್ಟಲ್ ಇಂದ ತೆರಿಗೆದಾರರು ಸ್ವತಃ ನೋಂದಣಿ ಪ್ರಮಾಣಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳ ಬಹುದು. ( www.gst.gov.in )

ಪ್ರಶ್ನೆ:ಒಮ್ಮೆ ಸಲ್ಲಿಸಿದ ನೋಂದಣಿ ವಿವರಗಳನ್ನು ಪರಿಷ್ಕರಿಸಬಹುದೇ ?

ಉತ್ತರ: ಹೌದು. ಆನಲೈನ್ ಮೂಲಕವೇ ಪರಿಷ್ಕರಣೆಗೆ ಅರ್ಜಿ ಸಲ್ಲಿಸಬೇಕು. ಜಿ.ಎಸ್.ಟಿ ನೋಂದಣಿ–14 ಪ್ರಾರೂಪದಲ್ಲಿ ಪರಿಷ್ಕರಣೆಗೆ ವಿವರಗಳನ್ನು ಆನ್ಲೈನ್ ಭರ್ತಿಮಾಡಿ ನೋಂದಣಿ ವಿವರಗಳನ್ನು ಪರಿಷ್ಕರಿಸಬಹುದು, ಕೆಲುವು ಆನ್‌ಲೈನ್ ಮೂಲಕ ಅನುಮತಿ ಇಲ್ಲದ ಪರಿಷ್ಕರಣೆಗಳನ್ನು ಮಾಡಲು ಅಧಿಕಾರಿಗಳನ್ನು ಸಂಪರ್ಕಿಸಬೇಕಾಗುತ್ತದೆ. ಅನುಮತಿ ಬೇಕಾಗಿರುವ ವಿವರಗಳೆಂದರೆ ಉದಾಹರಣೆಗೆ, ವ್ಯಾಪಾರದ ವೈದಿಕ ಹೆಸರು, ವ್ಯಾಪಾರ ನೆಡೆಸುವ ಸ್ಥಳ, ದೈನಂದಿನ ವ್ಯಾಪಾರ ವಹಿವಾಟಿಗೆ ಜವಾಬುದಾರರಾದ ಭಾಗಿದಾರರ ಅಥವಾ ನಿರ್ದೇಶಕರ ಹೆಸರುಗಳನ್ನು ಸೇರಿಸುವ, ತೆಗೆದು ಹಾಕುವ, ನಿವೃತ್ತಗೊಳಿಸುವ ಪ್ರಕ್ರಿಯೆ, ಯಾವುದೇ ಅನುಮತಿ ಇಲ್ಲದೆ ಪರಿಷ್ಕರಿಸಬಹುದಾದ ವಿವರಗಳೆಂದರೆ ದೂರಭಾಷಾ ಸಂಖ್ಯೆ, ಈ–ಮೇಲ್ ಐ.ಡಿ, ಬ್ಯಾಂಕ್ ಖಾತೆ ಇತ್ಯಾದಿ.

ಪ್ರಶ್ನೆ: ಒಬ್ಬ ವ್ಯಕ್ತಿಯು ಯಾವ ರಾಜ್ಯದಲ್ಲಿ ನೋಂದಾಯಿಸಿಕೊಳ್ಳ ಬಹುದು ?

ಉತ್ತರ: ಜಿ.ಎಸ್.ಟಿ ಅಡಿಯಲ್ಲಿ ಯಾವ ಯಾವ ರಾಜ್ಯದಿಂದ ಪೂರೈಕೆಗಳನ್ನು ಮಾಡಲು ಇಚ್ಛಿಸುತ್ತಾನೋ, ಆ ಎಲ್ಲಾ ರಾಜ್ಯಗಳಲ್ಲಿ ನೋಂದಣಿಗೆ ಅರ್ಜಿಯನ್ನು ಸಲ್ಲಿಸಬೇಕು. ಪ್ರತಿ ರಾಜ್ಯದಲ್ಲೂ ಸಾಮಾನ್ಯವಾಗಿ ಒಂದು ನೋಂದಣಿಯ ಅವಶ್ಯಕತೆ ಇರುತ್ತದೆ, ಆದರೂ ಒಂದೇ ರಾಜ್ಯದಲ್ಲೂ ತೆರಿಗೆದಾರರು ಬಹು ನೋಂದಣಿಯನ್ನು ಹೊಂದಬಹುದು.

ಪ್ರಶ್ನೆ: ಜಿ.ಎಸ್.ಟಿ ಅಡಿಯಲ್ಲಿ ಎಲ್ಲಾ ಉತ್ಪಾದಕರೂ ನೋಂದಾಯಿಸಿಕೊಳ್ಳುವುದು ಅನಿವಾರ್ಯವೇ ?

ಉತ್ತರ: ಇಲ್ಲ. ಜಿ.ಎಸ್.ಟಿ ಅಡಿಯಲ್ಲಿ ಕನಿಷ್ಠ ಮಿತಿಯ ವ್ಯಾಪಾರ ವಹಿವಾಟು ಇಲ್ಲದಿರುವ ಇಲ್ಲವೇ ಪೂರೈಕೆಯ ರೀತಿ ಜಿ.ಎಸ್.ಟಿ ನೋಂದಣಿಯ ವ್ಯಾಪ್ತಿಗೆ ಬರದಿದ್ದರೆ, ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಉದಾಹರಣೆಗೆ, ಕೇವಲ ವಿನಾಯಿತಿ ಪಡೆದ ವಸ್ತುಗಳ ಪೂರೈಕೆಯಲ್ಲಿ ತೊಡಗಿರುವ ಅಥವಾ ಸರಕು ಪೂರೈಕೆಗೆ ಸಂಬಂಧಿಸಿದಂತೆ ವಾರ್ಷಿಕ ವಹಿವಾಟು ₹.40 ಲಕ್ಷಕ್ಕಿಂತ ಕಡಿಮೆ ಇದ್ದು , ರಾಜ್ಯದೊಳಗೆ ಪೂರೈಕೆ ಮಾಡುತ್ತಿದ್ದರೆ, ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಪ್ರಶ್ನೆ: ತೆರಿಗೆ ಇನ್‌ವಾಯ್ಸ್ ಯಾರು ಜಾರಿಗೊಳಿಸಬೇಕು ಮತ್ತು ಎಷ್ಟು ಪ್ರತಿಗಳು ಆವಶ್ಯಕ ?

ಉತ್ತರ: ಸರಕುಗಳನ್ನು ಮತ್ತು /ಇಲ್ಲವೇ ಸೇವೆಗಳನ್ನು ಪೂರೈಕೆ ಮಾಡುವ ಪ್ರತಿಯೊಬ್ಬ ನೋಂದಾಯಿತ ತೆರಿಗೆದಾರರು (ವಿನಾಯಿತಿ ಸರಕು ಸೇವೆಗಳ ಪೂರೈಕೆದಾರರು ಮತ್ತು ಸಂಯೋಜಿತ ಯೋಜನೆಯಡಿ ನೋಂದಾಯಿತ ತೆರಿಗೆದಾರರನ್ನು ಹೊರತು ಪಡಿಸಿ) ಪೂರೈಕೆಗಳಿಗೆ ಸಂಬಂಧಿಸಿದಂತೆ ತೆರಿಗೆ ಇನ್‌ವಾಯ್ಸ್ ಜಾರಿಗೊಳಿಸಬೇಕು. ಇನ್‌ವಾಯ್ಸ್ ಮೂರು ಪ್ರತಿಗಳಲ್ಲಿ ಇದ್ದು ಮೂಲ ಪ್ರತಿ ಖರೀದಿಸುವವರಿಗೆ, ಎರಡನೆಯ ಪ್ರತಿ ಸಾಗಣೆಕಾರರಿಗೆ ಮತ್ತು ಮೂರನೆ ಪ್ರತಿ ಪೂರೈಕೆದಾರರ ವಿವರಣೆಗೆ. ಸಂಯೋಜಿತ ಯೋಜನೆಯಡಿ ಸರಕು / ಸೇವೆ ಪೂರೈಕೆ ಮಾಡುವ ವ್ಯಕ್ತಿಗಳು ತೆರಿಗೆ ಇನ್‌ವಾಯ್ಸ್ ಬದಲು ಬಿಲ್ ಜಾರಿ ಮಾಡಬೇಕು.

ಪ್ರಶ್ನೆ: ತೆರಿಗೆ ಇನ್‌ವಾಯ್ಸ್ ಒಳಗೆ ಯಾವ ವಿವರಣೆಗಳು ಇರಬೇಕು ?

ಉತ್ತರ: ಈ ಸಂಬಂಧ ನಿಯಮ 46 ರಲ್ಲಿ ನಮೂದಿಸಿರುವಂತೆ ತೆರಿಗೆ ಇನ್‌ವಾಯ್ಸ್ ಮೇಲೆ ವಿವರಗಳು ಇರಬೇಕು. ನಿಯಮದಡಿ ನಮೂದಿಸಿರುವ ವಿವರಗಳೆಂದರೆ; ಪೂರೈಕೆದಾರರ ಮತ್ತು ಗ್ರಾಹಕರ (ನೋಂದಾಯಿತ) ಹೆಸರು, ವಿಳಾಸ, ಮತ್ತು ಜಿ.ಎಸ್.ಟಿ.ಐ.ಎನ್, ಇನ್‌ವಾಯ್ಸ್ ವಿಶೇಷ ಸಂಖ್ಯೆ ಮತ್ತು ಜಾರಿಗೊಳಿಸಿದ ದಿನಾಂಕ, ವಸ್ತುಗಳ ವಿವರ, ಮೂಲ್ಯ, ತೆರಿಗೆ ದರ, ತೆರಿಗೆ ಮೊತ್ತ ಮತ್ತು ರುಜು.

ಪ್ರಶ್ನೆ: ವ್ಯವಹಾರದ ಮೊತ್ತ ಅತಿ ಕಡಿಮೆ ಇದ್ದರೂ ತೆರಿಗೆ ಇನ್‌ವಾಯ್ಸ್ ಜಾರಿಗೊಳಿಸಬೇಕೆ?

ಉತ್ತರ: ನೋಂದಾಯಿತ ವ್ಯಕ್ತಿಗಳು ₹.200/–ಕ್ಕಿಂತ ಕಡಿಮೆ ಮೊತ್ತದ ಸರಕುಗಳಿಗೆ/ಸೇವೆಗಳಿಗೆ ತೆರಿಗೆ ಇನ್‌ವಾಯ್ಸ್ ಜಾರಿಗೊಳಿಸುವ ಅಗತ್ಯ ಇಲ್ಲ, ಅಂತಹ ತೆರಿಗೆ ಇನ್‌ವಾಯ್ಸ್ ಅನ್ನು ಸರಕು/ಸೇವೆ ಖರೀದಿಸುವವರು ಕೇಳದಿದ್ದರೆ ಅಥವಾ ಖರೀದಸುವವರು ನೋಂದಾಯಿತರಾಗಿಲ್ಲದಿದ್ದರೆ ಮಾತ್ರ ಸಾದ್ಯ. ಖರೀದಿದಾರರು ಕೇಳಿದ ಪಕ್ಷದಲ್ಲಿ ಸರಕುಗಳ ಮೊತ್ತ ಎಷ್ಟೇ ಇದ್ದರೂ ತೆರಿಗೆ ಇನ್‌ವಾಯ್ಸ್ ಜಾರಿಗೊಳಿಸಬೇಕು. ನೋಂದಾಯಿತ ವ್ಯಕ್ತಿಯು ಇಡೀ ದಿನದ ವಹಿವಾಟಿಗೆ ಸಂಬಂಧಿಸಿದಂತೆ ಒಂದು ತೆರಿಗೆ ಇನ್‌ವಾಯ್ಸ್ ಜಾರಿಗೊಳಿಸಬಹುದು.

ಪ್ರಶ್ನೆ: ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆ ಇನ್‌ವಾಯ್ಸ್ ಯಾವಾಗ ಜಾರಿಗೊಳಿಸಬೇಕು ?

ಉತ್ತರ: ಸರಕುಗಳಿಗೆ ಸಂಬಂಧಿಸಿದಂತೆ ಸರಕುಗಳನ್ನು ಸಾಗಿಸುವಾಗ ಇಲ್ಲವೇ ತಲುಪಿಸುವಾಗ ತೆರಿಗೆ ಇನ್‌ವಾಯ್ಸ್ ಜಾರಿ ಮಾಡಬೇಕು. ಸರಕುಗಳ ಸತತ ಪೂರೈಕೆ ಇದ್ದರೆ, ಲೆಕ್ಕ ಪತ್ರ ವಿವರಣೆ ಸಲ್ಲಿಸುವ ಮುನ್ನ / ಪಾವತಿ ಪಡೆಯುವಾಗ ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆ ಇನ್‌ವಾಯ್ಸ್ ಜಾರಿ ಮಾಡಬೇಕು.

ಪ್ರಶ್ನೆ: ವಿನಾಯಿತಿ ಪಡೆದ ಸರಕುಗಳ ಪೂರೈಕೆ ಅಥವಾ ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಪಾವತಿಸಿದಾಗ, ನೋಂದಾಯಿತ ವ್ಯಕ್ತಿಯು ತೆರಿಗೆ ಪಾವತಿಸಬೇಕೆ ? ಪೂರೈಕೆ ಬಿಲ್ ಹಾಗೂ ತೆರಿಗೆ ಇನ್‌ವಾಯ್ಸ್ ಗೂ ಇರುವ ವ್ಯತ್ಯಾಸವೇನು ?

ಉತ್ತರ: ಇಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ, ಸರಕು / ಸೇವೆ ಪೂರೈಕೆ ಮಾಡುವ ನೋಂದಾಯಿತ ವ್ಯಕ್ತಿಗಳು ತೆರಿಗೆ ಇನ್‌ವಾಯ್ಸ್ ಬದಲು ಬಿಲ್ ಜಾರಿ ಮಾಡಬೇಕು. ಪೂರೈಕೆ ಬಿಲ್ ಹಾಗೂ ತೆರಿಗೆ ಇನ್‌ವಾಯ್ಸ್ ಇವೆರಡರಲ್ಲೂ ಇರುವ ವಿವರಣೆಗಳಲ್ಲಿ ಅಂತರವಿರುತ್ತದೆ. ಪೂರೈಕೆ ಬಿಲ್ ಅಲ್ಲಿ ತೆರಿಗೆ ದರ ಮತ್ತು ತೆರಿಗೆ ಮೊತ್ತವು ನಮೂದಿಸಿರುವುದಿಲ್ಲ, ಏಕೆಂದರೆ ಈ ಮೂಲಕ ತೆರಿಗೆ ವಸೂಲಿ ಮಾಡುವಂತಿಲ್ಲ.

ಪ್ರಶ್ನೆ: ಸರಕುಗಳನ್ನು ಅರ್ಧ ಮುರಿದ–ಹರಿದ ಸ್ಥಿತಿಯಲ್ಲಿ ಸಾಗಣೆ ಮಾಡಿದರೆ, ಯಾವಾಗ ಪೂರ್ಣ ಇನ್‌ವಾಯ್ಸ್ ಜಾರಿಗೊಳಿಸಬೇಕು ?

ಉತ್ತರ: ಸರಕುಗಳನ್ನು ಅರ್ಧ ಮುರಿದ–ಹರಿದ ಸ್ಥಿತಿಯಲ್ಲಿ ಸಾಗಣೆ ಮಾಡಿದರೆ, ಮೊದಲನೇ ಸರಕು ಕಂತನ್ನು ಸಾಗಿಸುವ ಮುನ್ನ, ಪೂರ್ಣ ಇನ್‌ವಾಯ್ಸ್ ಜಾರಿಗೊಳಿಸಬೇಕು. ನಂತರದ ಸರಕು ಕಂತು ಸಾಗಣೆಗೆ ಡೆಲಿವರಿ ಚಲಾನ್ ಜಾರಿಗೊಳಿಸಬಹುದು. ಕೊನೆಯ ಸರಕು ಕಂತಿನೊಂದಿಗೆ ಇನ್‌ವಾಯ್ಸ್ ನ ಮೂಲ ಪ್ರತಿಯನ್ನು ಕಳಿಸಬೇಕು.

ಪ್ರಶ್ನೆ: ಸಣ್ಣ ಪ್ರಮಾಣದ ವ್ಯಾಪಾರಿಗಳಿಗೆ ಮತ್ತು ಉತ್ಪಾದಕರಿಗೆ ಅನ್ವಯಿಸುವಂತೆ ಜಿ.ಎಸ್.ಟಿ ಅಡಿಯಲ್ಲಿ ತೆರಿಗೆ ಪಾವತಿಸಲು ಯಾವುದಾದರೂ ಯೋಜನೆ ಇದೆಯೇ ?

ಉತ್ತರ: ಹೌದು. ಹಿಂದಿನ ವರ್ಷದ ಕನಿಷ್ಠ ವಾರ್ಷಿಕ ವಹಿವಾಟು ₹.1.5 ಕೋಟಿಗೆಯವರೆಗೂ ಇದ್ದರೆ (ಜಮ್ಮು ಕಾಶ್ಮೀರ ಮತ್ತು ಉತ್ತರಾ ಖಂಡ ರಾಜ್ಯಗಳನ್ನು ಹೊರತು ಪಡಿಸಿ, ವಿಶೇಷ ವರ್ಗದ ರಾಜ್ಯಗಳಿಗೆ ₹.75 ಲಕ್ಷ ಪರಿಮಿತಿಯನ್ನು ನಿಗದಿ ಪಡಿಸಲಾಗಿದೆ) ಅಂತಹ ಸಣ್ಣ ಪ್ರಮಾಣದ ವ್ಯಾಪಾರಿಗಳಿಗೆ ಮತ್ತು ಉತ್ಪಾದಕರಿಗೆ, ಸಂಯೋಜಿತ ಯೋಜನೆಯ ಅಡಿಯಲ್ಲಿ ತೆರಿಗೆ ವಿಧಿಸಲಾಗುತ್ತದೆ. ಸಣ್ಣ ಪ್ರಮಾಣದ ವ್ಯಾಪಾರಿಗಳಿಗೆ ಮತ್ತು ಉತ್ಪಾದಕರಿಗೆ ತೆರಿಗೆಯನ್ನು ಸರಳಗೊಳಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ್ಯ. ಈ ಯೋಜನೆಯನ್ನು ಸಣ್ಣ ಪ್ರಮಾಣದ ವ್ಯಾಪಾರಿಗಳು ಉತ್ಪಾದಕರು ಮತ್ತು ರೆಸ್ಟೋರೆಂಟ್‌ಗಳು ಆಯ್ಕೆ ಮಾಡಿಕೊಳ್ಳ ಬಹುದು.

ಪ್ರಸ್ತುತವಾಗಿ ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿಸಿ ಕೊಂಡಿರದ ತೆರಿಗೆದಾರರಿಗಾಗಿ, ಹಿಂದಿನ ವರ್ಷದ ವಾರ್ಷಿಕ ವಹಿವಾಟು ₹.50 ಲಕ್ಷದವರೆಗೂ ಇರುವ ಸೇವಾ ಪೂರೈಕೆದಾರರಿಗೆ 6% ತೆರಿಗೆ ದರದಲ್ಲಿ ಹೊಸ ಬಗೆಯ ಯೋಜನೆಯನ್ನು ಸಂಯೋಜಿತ ಯೋಜನೆಯಡಿಯಲ್ಲಿ ಜಾರಿಗೆ ತರಲಾಗಿದೆ. ತೆರಿಗೆದಾರರು ವಾರ್ಷಿಕವಾಗಿ ಒಂದು ವಿವರಣೆಯನ್ನು ಸಲ್ಲಿಸಬೇಕು ಮತ್ತು ತ್ರೈಮಾಸಿಕ ರೂಪದಲ್ಲಿ ತೆರಿಗೆ ಪಾವತಿ ಮಾಡಬೇಕು. ಈ ಸೌಲಭ್ಯವನ್ನು ದಿನಾಂಕ 1.04.2019 ರ ಅನ್ವಯ ಜಾರಿಗೊಳಿಸಲಾಗಿದೆ.

ಪ್ರಶ್ನೆ: ಸಂಯೋಜಿತ ಯೋಜನೆಯ ತೆರಿಗೆ ವಿಧಿಯನ್ನು ಆಯ್ಕೆ ಮಾಡಿಕೊಳ್ಳಲು ಆವಶ್ಯಕ ಅರ್ಹತೆ ಏನು? ಯಾವ ವಿಶೇಷ ರಾಜ್ಯಗಳಲ್ಲಿ ಸಿ.ಜಿ.ಎಸ್.ಟಿ ಮತ್ತು ಎಸ್.ಜಿ.ಎಸ್.ಟಿ ತೆರಿಗೆಯನ್ನು ಹೊರಿಸಲು ಸಂಯೋಜಿತ ಯೋಜನೆಯಡಿಯಲ್ಲಿ ಅನ್ವಯಿಸಲುವಂತೆ ವಹಿವಾಟು ಮಿತಿ ₹.50 ಲಕ್ಷ ಇರಬೇಕು ?

ಉತ್ತರ: ಸಂಯೋಜಿತ ಯೋಜನೆಯನ್ನು ಸಣ್ಣ ಪ್ರಮಾಣದ ತೆರಿಗೆದಾರರ ಸೌಲಭ್ಯಕ್ಕಾಗಿ ಅಳವಡಿಸಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಸಮಗ್ರ ವ್ಯಾಪಾರ ವಹಿವಾಟು, ಒಟ್ಟು ₹.1.5 ಕೋಟಿ ಮೊತ್ತವನ್ನು ಮೀರದಿದ್ದರೆ, (ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಮ್, ನಾಗಾಲ್ಯಾಂಡ್, ಸಿಕ್ಕಿಮ್, ತ್ರಿಪುರ ಮತ್ತು ಉತ್ತರಾಖಂಡ ರಾಜ್ಯಗಳಿಗೆ ಅನ್ವಯಿಸುವಂತೆ ₹.75 ಲಕ್ಷ ಪರಿಮಿತಿ) ಅಂತಹ ನೋಂದಾಯಿತ ತೆರಿಗೆದಾರರು, ಈ ಯೊಜನೆಯ ಲಾಭ ಪಡೆಯ ಬಹುದು.

ಪ್ರಶ್ನೆ: ತೆರೆಗೆದಾರರು ಸಂಯೋಜಿತ ಯೋಜನೆಯಲ್ಲಿ ತೆರಿಗೆ ಪಾವತಿಸಲು ಯಾವ ಪ್ರಾರೂಪದಲ್ಲಿ ಮಾಹಿತಿ ನೀಡಬೇಕು ?

ಉತ್ತರ: ಸಂಯೋಜಿತ ಯೋಜನೆಯು ವೈಕಲ್ಪಿಕವಾದ್ದರಿಂದ, ಹೊಸ ತೆರಿಗೆದಾರರಿಂದ ಜಿ.ಎಸ್.ಟಿ ಆರ್‌ಈಜಿ–1 ಪ್ರಾರೂಪದಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಈ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳ ಬೇಕು. ಈಗಾಗಲೇ ನೋಂದಾಯಿತ ತೆರಿಗೆದಾರರು ಜಿ.ಎಸ್.ಟಿ ಸಿಎಂಪಿ–2 ಪ್ರಾರೂಪದಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಈ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳ ಬೇಕು.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ಉತ್ಪಾದಕರಿಗೆ ಅನ್ವಯಿಸುವ ತೆರಿಗೆ ದರ ಎಷ್ಟು ?

ಉತ್ತರ: ನಿಬಂಧಿತ ಯೋಜನೆ ಅಡಿಯಲ್ಲಿ ಬರುವ ಉತ್ಪಾದಕರು ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ತಮ್ಮ ವಹಿವಾಟಿನ 1% ಮೊತ್ತವನ್ನು (ಕೇಂದ್ರ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮತ್ತು ರಾಜ್ಯ ಜಿ.ಎಸ್.ಟಿ. ಕಾಯಿದೆ ಅಡಿಯಲ್ಲಿ 0.5% ಮೊತ್ತ) ತೆರಿಗೆ ರೂಪದಲ್ಲಿ ಪಾವತಿಸಬೇಕಾಗುತ್ತದೆ.

ಪ್ರಶ್ನೆ: ಸಂಯೋಜಿತ ಯೋಜನೆ ಗೆ ಎಲ್ಲಾ ಉತ್ಪಾದಕರು ಅರ್ಹರೇ ?

ಉತ್ತರ: ಜಿ.ಎಸ್.ಟಿ ಸಂಯೋಜಿತ ಯೋಜನೆಯಡಿಯ ವ್ಯಾಪ್ತಿಗೆ ಈ ಕೆಳಕಂಡವರು ಬರುವುದಿಲ್ಲ.

1) ಹಿಂದಿನ ಹಣಕಾಸು ವರ್ಷದಲ್ಲಿ ಸಮಗ್ರ ವ್ಯಾಪಾರ ವಹಿವಾಟು, ₹.1.5 ಕೋಟಿ ಮೊತ್ತವನ್ನು ಮೀರಿದ್ದರೆ,

2) ಸರಕು ಮತ್ತು ಸೇವೆಗಳನ್ನು ಅಂತರ ರಾಜ್ಯಮಟ್ಟದಲ್ಲಿ ಪೂರೈಕೆ ಮಾಡುವ ಪೂರೈಕೆದಾರರು,

3) ಎಲೆಕ್ಟ್ರಾನಿಕ್ ವಾಣಿಜ್ಯ ಆಪರೇಟರ್ ಮೂಲಕ ಸರಕು ಪೂರೈಕೆ ಮಾಡುವ ಪೂರೈಕೆದಾರರು

4) ಈ ಕೆಳಕಂಡ ಪದಾರ್ಥಗಳನ್ನು ಉತ್ಪಾದಿಸುವವರು

| ಕ್ರಮ ಸಂ | ಟೈರಿಫ್ ಶೀರ್ಷಿಕೆ | ವಿವರಣೆ |
|---|---|---|
| 1 | 2105 00 00 | ಐಸ್ಕ್ರೀಂ ಮತ್ತು ಖಾದ್ಯ ಐಸ್ , ಕೊಕೋಅ ಸಮೇತ /ರಹಿತ |
| 2 | 2106 90 20 | ಪಾನ್ ಮಸಾಲ |
| 3 | 24 | ತಂಬಾಕು ಮತ್ತು ಉತ್ಪಾದಿತ ತಂಬಾಕು ಬದಲಿಗಳು |

ಅನ್ಯಥಾ ಬೇರೆ ಉತ್ಪಾದಕರು ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಪ್ರಶ್ನೆ: ನೋಂದಾಯಿತ ವ್ಯಕ್ತಿಯು ಯಾವಾಗ ತೆರಿಗೆ ಪಾವತಿಸಬೇಕು ?

ಉತ್ತರ: ನೋಂದಾಯಿತ ವ್ಯಕ್ತಿಯು ಮಾಸಿಕ ರೂಪದಲ್ಲಿ ಮುಂಬರುವ ತಿಂಗಳಿನ 20ನೇ ದಿನಾಂಕದೊಳಗೆ ತೆರಿಗೆ ಪಾವತಿಸಬೇಕು. ಸಂಯೋಜಿತ ಯೋಜನೆಯಡಿಯಲ್ಲಿ ಕಾರ್ಯನಿರತ ತೆರಿಗೆದಾರರು, ತೆರಿಗೆಯನ್ನು ತ್ರೈಮಾಸಿಕ ರೂಪದಲ್ಲಿ ಆಯಾ ತ್ರಿಮಾಸದ ನಂತರದ ತಿಂಗಳಿನ 18ನೇ ತಾರೀಖಿನೊಳಗೆ ಪಾವತಿಸುವ ಅನುಮತಿ ನೀಡಲಾಗಿದೆ.

ಪ್ರಶ್ನೆ: ಸಂಯೋಜಿತ ಯೋಜನೆಯ ಲಾಭ ಪಡೆದ ತೆರಿಗೆದಾರರು ಹಣಕಾಸು ವರ್ಷದ ಅವಧಿಯಲ್ಲಿ ಅವರಿಗೆ ಅನ್ವಯಿಸುವಂತೆ ₹.150/75 ಲಕ್ಷ ಮೊತ್ತದ ವಹಿವಾಟು ದಾಟಿದರೆ, ಉದಾಹರಣೆಗೆ ಡಿಸೆಂಬರ್ ತಿಂಗಳಿನಲ್ಲಿ ₹.150/75 ಲಕ್ಷ ಮೊತ್ತದ ವಹಿವಾಟು ದಾಟಿದರೆ ಅವರು ಸಂಯೋಜಿತ ಯೋಜನೆಯಡಿಯಲ್ಲಿಯೇ ವರ್ಷದ ನಂತರದ ಅವಧಿ ಅಂದರೆ 31 ಮಾರ್ಚ್ ವರೆಗೂ ಪೂರೈಕೆಗಳನ್ನು ಮಾಡಬಹುದೇ ?

ಉತ್ತರ: ಇಲ್ಲ. ₹.150/75 ಲಕ್ಷ ಮೊತ್ತದ ಸಮಗ್ರ ವಹಿವಾಟು ದಾಟಿದರೆ ಆ ದಿನದಿಂದಲೇ ಸಂಯೋಜಿತ ಯೋಜನೆಯಡಿಯಲ್ಲಿ ಅವರು ತೆರಿಗೆ ಪಾವತಿಸಲು ಅನರ್ಹರಾಗುತ್ತಾರೆ, ನಂತರದ 7 ದಿನಗದೊಳಗಾಗಿ ಈ

ಯೋಜನೆಯಿಂದ ಹೊರಬರಲು ಜಿ.ಎಸ್.ಟಿ ಸಿಎಮ್‌ಪಿ–04 ಪ್ರಾರೂಪದಲ್ಲಿ ಅರ್ಜಿ ಸಲ್ಲಿಸತಕ್ಕದ್ದು, ಅಂತೆಯೇ ನಿಯಮಾವಳಿಗೆ ಅನ್ವಯಿಸುವಂತೆ, ಹೂಡುವಳಿ ಸ್ಟಾಕ್ ಮತ್ತು ಬಂಡವಾಳ ಸರಕುಗಳ ವಿವರಣೆಯನ್ನು ನೀಡಲು ಜಿ.ಎಸ್.ಟಿ ಐಟಿಸಿ–01 ಪ್ರಾರೂಪದಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಹೂಡುವಳಿ ತೆರಿಗೆ ಸರಪಳಿಯಲ್ಲಿ ಸೇರ್ಪಡೆಯಾಗಲು ಮತ್ತು ಆ ದಿನದಿಂದಲೇ, ಹೂಡುವಳಿ ಸ್ಟಾಕ್ ಹಾಗೂ ಬಂಡವಾಳ ಸರಕುಗಳ ಐಟಿಸಿ ಲಾಭ ಪಡೆಯಲು ಅನುಕೂಲವಾಗುತ್ತದೆ.

ಪ್ರಶ್ನೆ: ಸಂಯೋಜಿತ ಯೋಜನೆಯ ಲಾಭ ಪಡೆಯಲು ಸಮಗ್ರ ವಹಿವಾಟನ್ನು ಯಾವ ರೀತಿಯಲ್ಲಿ ಪರಿಗಣಿಸಲಾಗುದು?

ಉತ್ತರ: ಭಾರತಾದ್ಯಂತ, ಒಂದೇ ಪ್ಯಾನ್ ಸಂಖ್ಯೆಯ ಅಡಿಯಲ್ಲಿ, ತೆರಿಗೆಗೆ ಅರ್ಹವಾದ ಎಲ್ಲಾ ಪೂರೈಕೆಗಳು, ವಿನಾಯಿತಿ ಪಡೆದ ಪೂರೈಕೆಗಳು, ರಫ್ತು ಮಾಡಿದ ಸರಕು ಮತ್ತು / ಇಲ್ಲವೆ ಸೇವೆಗಳು, ಅಂತರರಾಜ್ಯ ಪೂರೈಕೆ ಮಾಡಲಾದ ಸರಕು ಮತ್ತು / ಇಲ್ಲವೇ ಸೇವೆಗಳು ಇವೆಲ್ಲದರ ಒಟ್ಟು ಮೊತ್ತ, ಹಾಗೂ ಜಿ.ಎಸ್.ಟಿ ಕಾಯಿದೆಯ ಅಡಿಯಲ್ಲಿ ಹೊರಿಸಲಾದ ತೆರಿಗೆಗಳನ್ನು ಹೊರತು ಪಡಿಸಿ ಲೆಕ್ಕ ಮಾಡಿದ ಒಟ್ಟು ಮೊತ್ತವನ್ನು ಸಮಗ್ರ ವಹಿವಾಟು ಎಂದು ಪರಿಗಣಿಸಲಾಗುತ್ತದೆ.

ಪ್ರಶ್ನೆ: ಸಂಯೋಜಿತ ಯೋಜನೆಯಡಿ ಯಲ್ಲಿ ನೋಂದಾಯಿತ ತೆರಿಗೆದಾರರು, ತಮ್ಮಲ್ಲಿರುವ ಸ್ಟಾಕ್ ಮೇಲೆ ಹೂಡುವಳಿ ತೆರಿಗೆ ಜಮೆಯ ಲಾಭ ಪಡೆಯ ಬಹುದೇ ?

ಉತ್ತರ: ಇಲ್ಲ. ಸಂಯೋಜಿತ ಯೋಜನೆಯಡಿ ಯಲ್ಲಿ ನೋಂದಾಯಿತ ತೆರಿಗೆದಾರರು ಕ್ರೆಡಿಟ್ ಸರಪಳಿಯಲ್ಲಿ ಇರದ ಕಾರಣ ಸ್ಟಾಕ್ ಮೇಲೆ ಹೂಡುವಳಿ ತೆರಿಗೆ ಜಮೆಯ ಲಾಭ ಪಡೆಯಲು ಆಗುವುದಿಲ್ಲ.

ಪ್ರಶ್ನೆ : ಸಂಯೋಜಿತ ಯೋಜನೆಯಡಿ ಯಲ್ಲಿ ಉತ್ಪಾದಕರು ಪೂರೈಕೆಗಳಿಗೆ ಸಂಬಂಧಿಸಿದಂತೆ ಹೇಗೆ ಬಿಲ್ ಮಾಡಬೇಕು ? ನೋಂದಾಯಿತ ತೆರಿಗೆದಾರರು ಸಂಯೋಜಿತ ಯೋಜನೆಯಡಿ ಯಲ್ಲಿರುವ ಉತ್ಪಾದಕರಿಂದ ಖರೀದಿಸಿದ ಸರಕುಗಳ ಮೇಲೆ ಐ.ಟಿ.ಸಿ ಪಡೆಯ ಬಹುದೇ ?

ಉತ್ತರ: ಸಂಯೋಜಿತ ಯೋಜನೆಯಡಿಯಲ್ಲಿ, ಸರಕು / ಸೇವೆ ಪೂರೈಕೆ ಮಾಡುವ ನೋಂದಾಯಿತ ವ್ಯಕ್ತಿಗಳು ತೆರಿಗೆ ಇನ್‌ವಾಯ್ಸ್ ಬದಲು ಬಿಲ್ ಜಾರಿ ಮಾಡಬೇಕು. ಪೂರೈಕೆ ಬಿಲ್ ಅಲ್ಲಿ ತೆರಿಗೆ ದರ ಮತ್ತು ತೆರಿಗೆ ಮೊತ್ತವು ನಮೂದಿಸಿರುವುದಿಲ್ಲ, ಏಕೆಂದರೆ ಈ ಮೂಲಕ ತೆರಿಗೆ ವಸೂಲಿ ಮಾಡುವಂತಿಲ್ಲ. ಹೀಗಾಗಿ, ನೋಂದಾಯಿತ ತೆರಿಗೆದಾರರು, ಈ ಯೋಜನೆಯಡಿ ಯಲ್ಲಿರುವ ಉತ್ಪಾದಕರಿಂದ ಖರೀದಿಸಿದ ಸರಕುಗಳ ಮೇಲೆ ಐ.ಟಿ.ಸಿ ಪಡೆಯಲಾಗುವುದಿಲ್ಲ.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ತೆರಿಗೆದಾರರು, ಅನೇಕ ರಾಜ್ಯಗಳಲ್ಲಿ ನೋಂದಣಿ ಹೊಂದಿದ್ದರೆ, ಎಲ್ಲಾ ರಾಜ್ಯಗಳಿಗೂ ಅನ್ವಯಿಸುವಂತೆ ಒಂದೇ ರಾಜ್ಯದಲ್ಲಿ ತೆರಿಗೆಯನ್ನು ಪಾವತಿಸ ಬಹುದೇ ?

ಉತ್ತರ: ಇಲ್ಲ. ಒಂದೇ ಪ್ಯಾನ್ ಸಂಖ್ಯೆ ಯಡಿಯಲ್ಲಿ ಒಂದು ರಾಜ್ಯದಲ್ಲಿ ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡರೆ ಬೇರೆ ಎಲ್ಲಾ ರಾಜ್ಯಗಳಿಗೂ ಆ ಮಾಹಿತಿ ನೀಡಿದಂತೆ ಅರ್ಥ.

ಪ್ರಶ್ನೆ:ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಪಾವತಿಸಲು ಮಾನ್ಯತೆ ಶರತ್ತು ಏನು ?

ಉತರ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ವ್ಯಕ್ತಿಯು ಈ ಕಾನೂನಿನ ಚೌಕಟ್ಟಿನೊಳಗೆ ಇರುವ ಎಲ್ಲಾ ಶರತ್ತುಗಳನ್ನು ಪೂರೈಸುವ ತನಕವೂ ಈ ಯೋಜನೆ ಅಡಿ ಮಾನ್ಯತೆ ಹೊಂದಿರುತ್ತಾರೆ. ಈ ವಿಕಲ್ಪವನ್ನು ನವೀಕರಿಸುವ ಅಗತ್ಯ ಇಲ್ಲ.

ಪ್ರಶ್ನೆ : ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರು ಈ ಯೋಜನೆಯಿಂದ ಸ್ವೈಚ್ಛಿಕವಾಗಿ ಹೊರಗೆ ಬರಬಹುದೇ ?

ಉತ್ತರ: ಹೌದು.  ಈ ಯೋಜನೆಯಿಂದ ಹೊರಬರಲು ಜಿ.ಎಸ್.ಟಿ ಸಿಎಮ್‌ಪಿ–04 ಪ್ರಾರೂಪದಲ್ಲಿ ಅರ್ಜಿ ಸಲ್ಲಿಸತಕ್ಕದ್ದು.  ಅಂತೆಯೇ ನಿಯಮಾವಳಿಗೆ ಅನ್ವಯಿಸುವಂತೆ, ಪೂರ್ಣ ರೂಪದಲ್ಲಿ ಮತ್ತು  ಮೇಲೆ ತೆರಿಗೆ ಜಮೆಯ ಲಾಭ ಪಡೆಯಬೇಕಾದರೆ, ಅರ್ಧ ಉತ್ಪಾದಿತ ಮತ್ತು ಪೂರ್ಣ ಉತ್ಪಾದಿತ ಎಲ್ಲಾ ಸರಕುಗಳು ಮತ್ತು ಹೂಡುವಳಿ ಸ್ಟಾಕ್ ವಿವರಣೆಯನ್ನು ಈ ಯೋಜನೆ ಇಂದ ಹೊರಬಂದ ದಿನದಿಂದ 30 ದಿನಗಳ ಒಳಗೆ, ಜಿ.ಎಸ್.ಟಿ ಐಟಿಸಿ–01 ಪ್ರಾರೂಪದಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಹೂಡುವಳಿ ತೆರಿಗೆ ಸರಪಳಿಯಲ್ಲಿ ಸೇರ್ಪಡೆಯಾಗಲು ಮತ್ತು ಆ ದಿನದಿಂದಲೇ, ಐಟಿಸಿ ಲಾಭ ಪಡೆಯಲು ಅನುಕೂಲವಾಗುತ್ತದೆ.

ಪ್ರಶ್ನೆ: ಸಂಯೋಜಿತ ಯೋಜನೆಯಿಂದ ಹೊರಬರಲು ಒಂದು ಸ್ಥಳದಲ್ಲಿ ನೀಡಿದ ಮಾಹಿತಿಯೇ ಎಲ್ಲಾ ವ್ಯಾಪಾರ ಸ್ಥಳಗಳಿಗೂ ಅನ್ವಯವಾಗುವುದೇ ?

ಉತ್ತರ: ಹೌದು. ಒಂದೇ ಪ್ಯಾನ್ ಸಂಖ್ಯೆ ಯಡಿಯಲ್ಲಿ ನೋಂದಾಯಿಸಿಕೊಂಡಿರುವ ಕಾರಣ, ಒಂದು ರಾಜ್ಯದಲ್ಲಿ ಸಂಯೋಜಿತ ಯೋಜನೆಗೆ ಸೇರಲು ಅಥವಾ ಹೊರಬರಲು ಮಾಹಿತಿ ಅಥವಾ ಅರ್ಜಿ ಸಲ್ಲಿಸಿದರೆ,  ಬೇರೆ ಎಲ್ಲಾ ರಾಜ್ಯಗಳಿಗೂ / ಕೇಂದ್ರಾಡಳಿತ ಪ್ರದೇಶಗಳಿಗೂ ಆ ಮಾಹಿತಿ ನೀಡಿದಂತೆ ಅರ್ಥ.

ಪ್ರಶ್ನೆ : ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರು ಸರಕುಗಳನ್ನು ರಫ್ತು ಮಾಡಬಹುದೇ ಅಥವಾ  ಎಸ್.ಈ.ಜೆಡ್ ಗೆ ಪೂರೈಕೆ ಮಾಡ ಬಹುದೇ ?

ಉತ್ತರ: ಇಲ್ಲ.  ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರು ಸರಕುಗಳನ್ನು ರಫ್ತು ಅಥವಾ  ಎಸ್.ಈ.ಜೆಡ್ ಗೆ ಪೂರೈಕೆ ಮಾಡಲಾಗುವುದಿಲ್ಲ. ದೇಶೀಯ ಟೈರಿಫ್ ಕ್ಷೇತ್ರದಿಂದ ಎಸ್.ಈ.ಜೆಡ್ ಗೆ ಮಾಡುವ ಪೂರೈಕೆಗಳನ್ನು ಅಂತರ ರಾಜ್ಯ ಪೂರೈಕೆ ಎಂದು ಪರಿಗಣಿಸಲಾಗುತ್ತದೆ.

ಪ್ರಶ್ನೆ : ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆದಾರರು ತೆರಿಗೆಯನ್ನು ಹೇಗೆ ಪಾವತಿಸಬೇಕು ?

ಉತ್ತರ: ಸಂಯೋಜಿತ ಯೋಜನೆಯಡಿ ಯಲ್ಲಿ ನೋಂದಾಯಿತ ತೆರಿಗೆದಾರರು ಹೂಡುವಳಿ ತೆರಿಗೆ ಜಮೆಯ ಲಾಭ ಪಡೆಯಲು ಆಗುವುದಿಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ತೆರಿಗೆದಾರರು ತೆರಿಗೆ ಪಾವತಿಯನ್ನು ಸಾಮಾನ್ಯ ಪೋರ್ಟಲ್ ನಲ್ಲಿ ಇರಿಸಿರುವ ನಗದು ಲೆಡ್ಜರ್ ಒಳಗೆ ಡೆಬಿಟ್ ಮೂಲಕ ತೆರಿಗೆ ಪಾವತಿಸಬಹುದು. ಎಲೆಕ್ಟ್ರಾನಿಕ ನಗದು ಲೆಡ್ಜರ್ ಗೆ ತಮ್ಮ ಅನುಕೂಲದಂತೆ ನಗದು ತುಂಬ ಬಹುದು.

ಪ್ರಶ್ನೆ : ಸಂಯೋಜಿತ ಯೋಜನೆಯಡಿಯಲ್ಲಿ ತೆರಿಗೆದಾರರು ಪ್ರತಿ ತಿಂಗಳು ತೆರಿಗೆಯನ್ನು ಪಾವತಿಸಬೇಕೇ ?

ಉತ್ತರ: ಇಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ ಕಾರ್ಯನಿರತ ತೆರಿಗೆದಾರರು, 'ಸ್ವ–ನಿಗದಿತ ತೆರಿಗೆ' ಯನ್ನು ತ್ರೈಮಾಸಿಕ ರೂಪದಲ್ಲಿ ಆಯಾ ತ್ರಿಮಾಸದ ನಂತರದ ತಿಂಗಳಿನ 18ನೇ ತಾರೀಖಿನೊಳಗೆ ಪಾವತಿಸುವ ಅನುಮತಿ ನೀಡಲಾಗಿದೆ. ಹಿಂದಿನ ಹಣಕಾಸು ವರ್ಷದ ವಾರ್ಷಿಕ ವಿವರಣೆಯನ್ನು 30 ಏಪ್ರಿಲ್ ಒಳಗೆ ಸಲ್ಲಿಸಬೇಕು.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ಯಾವ ಲೆಕ್ಕ–ಪತ್ರ ಗಳನ್ನು ಇಡಬೇಕಾಗುತ್ತದಯೇ ?

ಉತ್ತರ: ನಿಯಮದ ಪ್ರಕಾರ ಲೆಕ್ಕ–ಪತ್ರಗಳನ್ನು ವಿವರಗಳನ್ನು ಇಡಬೇಕು. ವ್ಯಾಪಾರದಲ್ಲಿ ಯಾವುದೇ ಸಣ್ಣ ವರ್ಗದ ಉತ್ಪಾದಕರು ಸಾಮಾನ್ಯವಾಗಿ ಕಾದಿಡುವ ಲೆಕ್ಕ–ಪತ್ರಗಳು.  ಜಿ.ಎಸ್.ಟಿ ಕಾನೂನಿನ ಅಡಿಯಲ್ಲಿ, ತೆರಿಗೆ ಇನ್‌ವಾಯ್ಸ್ , ಡೆಲಿವರಿ ಚಲಾನ್, ಪೂರೈಕೆ ಬಿಲ್, ಕ್ರೆಡಿಟ್ ನೋಟ್, ಡೆಬಿಟ್ ನೋಟ್, ರೆವೈಸಡ್ ತೆರಿಗೆ ಇನ್‌ವಾಯ್ಸ್ , ರಸೀದಿ ಔಚರು, ಪಾವತಿ ಔಚರು ಇತ್ಯಾದಿ ದಾಖಲೆಗಳನ್ನು ಇಡಬೇಕಾಗುತ್ತದೆ.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ಹೂಡುವಳಿ ತೆರಿಗೆ ಜಮೆಯ ವಿವರಣೆ ಯ ಲೆಕ್ಕ–ಪತ್ರ ಇಡುವ ಅವಶ್ಯಕತೆ ಇದೆಯೇ ?

ಉತ್ತರ: ಸಂಯೋಜಿತ ಯೋಜನೆಯಡಿಯಲ್ಲಿ, ಸರಕು / ಸೇವೆ ಪೂರೈಕೆ ಮಾಡುವ ನೋಂದಾಯಿತ ವ್ಯಕ್ತಿಗಳು ತೆರಿಗೆ ಇನ್‌ವಾಯ್ಸ್ ಬದಲು ಬಿಲ್ ಜಾರಿ ಮಾಡಬೇಕು. ಈ ಯೋಜನೆಯಡಿಯಲ್ಲಿ ಹೂಡುವಳಿ ತೆರಿಗೆ ಜಮೆಯ ಅನುಮತಿ ಇರುವುದಿಲ್ಲ. ಹೂಡುವಳಿ ತೆರಿಗೆ ಜಮೆ ಸಂಬಂಧಿಸಿದಂತೆ ಯಾವ ಲೆಕ್ಕ ಪತ್ರವೂ ಇರುವುದಿಲ್ಲ.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ಲಿಖಿತರೂಪದಲ್ಲಿ ಲೆಕ್ಕ–ಪತ್ರ ಇಡಬಹುದೇ ? ಪೂರೈಕೆಗೆ ಸಂಬಂಧಿಸಿದಂತೆ ಬಿಲ್ ಜಾರಿ ಮಾಡಬಹುದೇ ?

ಉತ್ತರ :ಹೌದು. ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ಲಿಖಿತರೂಪದಲ್ಲಿ ಲೆಕ್ಕ–ಪತ್ರ ಇಡಬಹುದು ಮತ್ತು ನಿಯಮಗಳಿಗೆ ಅನುಸಾರವಾಗಿ ಪೂರೈಕೆಗೆ ಸಂಬಂಧಿಸಿದಂತೆ ಲಿಖಿತರೂಪದಲಿ ಬಿಲ್ ಜಾರಿ ಮಾಡಬಹುದು.

ಪ್ರಶ್ನೆ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ಖರೀದಿಸಿದ ವಸ್ತುಗಳ ಮತು ಪೂರೈಕೆಗಳ ಸಂಬಂಧವಾಗಿ ಹೆಚ್‌ಎಸ್‌ಎನ್ ಕೋಡ್ ಕಲಿಯುವ ಅವಶ್ಯಕತೆ ಇದೆಯೇ ?

ಉತ್ತರ:ಇಲ್ಲ. ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಕರು, ಖರೀದಿಸಿದ ವಸ್ತುಗಳ ಮತು ಪೂರೈಕೆಗಳ ಸಂಬಂಧವಾಗಿ ಬಿಲ್ ಮೇಲೆ ಹೆಚ್‌ಎಸ್‌ಎನ್ ಕೋಡ್ ಅನ್ನು ನಮೂದಿಸುವ ಅವಶ್ಯಕತೆ ಇರುವುದಿಲ್ಲ.

ಪ್ರಶ್ನೆ : ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ತೆರಿಗೆ ವಿವರಣೆ ಸಲ್ಲಿಸುವಾಗ ಯಾವ ವಿವರಗಳನ್ನು ನೀಡಬೇಕು ?

ಉತ್ತರ: ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿತ ಉತ್ಪಾದಕರು, ತೆರಿಗೆ ವಿವರಣೆಗೆ ಸಂಬಂಧಿಸಿದಂತೆ, ಜಿ.ಎಸ್.ಟಿ.ಆರ್–4 ಪ್ರಾರೂಪವನ್ನು ಅನುಸರಿಸಬೇಕು. ಇದು ಸರಳವಿವರಣೆ, ಪೂರೈಕೆಗಳ ವಿವರ, ಆಮದು ಮಾಡಿಕೊಂಡ ಸರಕು ಮತ್ತು ಸೇವೆಗಳ ವಿವರ , ಮತ್ತು ವ್ಯತಿರಿಕ್ತ ತೆರಿಗೆ ವಿಧಿ ಯಲ್ಲಿ ಖರೀದಿಸಿದ ವಸ್ತುಗಳ ವಿವರ ನೀಡಬೇಕು.

ಪ್ರಶ್ನೆ : ಸಣ್ಣ ವರ್ಗದ ಉತ್ಪಾದಕರು / ವ್ಯಾಪಾರಿಗಳು, ಸಂಯೋಜಿತ ಯೋಜನೆಯಡಿಯಲ್ಲಿ ನೋಂದಾಯಿಸಿ ಕೊಳ್ಳಬಹುದೇ ?

ಉತ್ತರ : ಸಂಯೋಜಿತ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ಸೇವಾ ಪೂರೈಕೆದಾರರು, ರಾಜ್ಯದಲ್ಲಿ / ಕೇಂದ್ರಾಡಳಿತ ಪ್ರದೇಶದಲ್ಲಿ ಹಿಂದಿನ ಹಣಕಾಸು ವರ್ಷದಲ್ಲಿ ಮಾಡಿದ ಪೂರೈಕೆಗಳ ಮೊತ್ತವು, ವಾರ್ಷಿಕ ವಹಿವಾಟಿನ 10% ಮೂಲ್ಯವನ್ನು ಮೀರಬಾರದು, ಅಥವಾ ₹.5 ಲಕ್ಷದವರೆಗೂ ಒಟ್ಟು ವಹಿವಾಟು ಹೊಂದಿರಬಹುದು.

ಪ್ರಶ್ನೆ: ಸಂಯೋಜಿತ ಯೋಜನೆಯನ್ನು ಸೇವಾ ಪೂರೈಕೆದಾರರು ಆಯ್ಕೆ ಮಾಡಿಕೊಳ್ಳುವ ಸೌಲಭ್ಯ ಇದೆಯೇ ?

ಉತ್ತರ: ಹೌದು. ದಿನಾಂಕ 01.04.2019 ರ ಅನವಯ, ಸೇವೆಗಳ ಪೂರೈಕೆದಾರರು ಅಥವಾ ಸೇವೆ ಮತ್ತು ಸರಕುಗಳ ಪೂರೈಕೆದಾರರು, ₹.50 ಲಕ್ಷದ ವರೆಗೂ ಸಂಯೋಜಿತ ಯೋಜನೆಯಡಿಯಲ್ಲಿ ಮೊದಲ ಪೂರೈಕೆ ಮಾಡಬಹುದು. ಅಂತಹ ಪೂರೈಕೆಗೆ 6% ದರ ನಿಗದಿ ಮಾಡಲಾಗಿದೆ.